ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕೊಲಂಬೊದಲ್ಲಿ ಶ್ರೀಲಂಕಾ ವಿರುದ್ಧ ಭಾನುವಾರ ಆರಂಭವಾದ 2ನೇ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಶತಕ (117 ರನ್) ಗಳಿಸುವ ಮೂಲಕ ದಾಖಲೆ ಬರೆದ ಭಾರತ ದೇವದತ್ ಪಡಿಕ್ಕಲ್...

24 ಆಗಸ್ಟ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -162 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ನದಿ ದಾಟಿ ಬಂದವರು » 2



ಹೋರ್ಮುಜ್ ಜಲಸಂಧಿ ಅಮೇರಿಕಾ ಭಾಗ » 3



ವಿಪಕ್ಷಗಳಿಂದ ಇಂದು ವಿಧಾನಸೌಧ ಮುತ್ತಿಗೆ » 4

# ಮಹಾನುಭಾವರದ್ದು ಸೂಟ್‌ಕೇಸ್ ಬೃಂದಾವನ

## ಕಾಂಗ್ರೆಸ್ ವಿರುದ್ಧ ಹೆಚ್.ಡಿ.ಕೆ. ವಾಗ್ದಾಳಿ | ಶುಲ್ಕ ಪಾವತಿಸದಂತೆ ಜನರಿಗೆ ಕರೆ

• ಪ್ರಜೋದಯ ವರದಿ

**ಬೆಂಗಳೂರು:** ನೈಸ್ ರಸ್ತೆ ಟೋಲ್ ಸಂಗ್ರಹ ವಿರೋಧಿಸಿ ಕೆಲವು ದಿನಗಳಿಂದ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗು ಸಚಿವ ಹೆಚ್.ಸಿ.ಬಾಲಕೃಷ್ಣ ಅವರದ್ದು ಸೂಟ್‌ಕೇಸ್ ಬೃಂದಾವನ ಎಂದು ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಇಬ್ಬರು ಮಹಾನ್ ನಾಯಕರು ಹಾಗು ಅಭಿವೃದ್ಧಿಯ ಹರಿಕಾರರು ನನ್ನ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ನಾವು ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ ಅಂದಿದ್ದಾರೆ. ಹೌದು. ನಾವು ಪೂಜಿಸುವುದು ಸಂಸ್ಕೃತಿಯ ಪ್ರತೀಕವಾದ ಬೃಂದಾವನವನ್ನು. ಆದರೆ ಅವರದ್ದು ಸೂಟ್‌ಕೇಸ್ ಬೃಂದಾವನ. ಎಲ್ಲಿ ಭೂಮಿ ಸಿಗುತ್ತದೊ ಅಲ್ಲೆಲ್ಲ ಲಪಟಾಯಿಸಿ ಬೃಂದಾವನ ಕಟ್ಟುವುದು ಅವರ ಸಂಸ್ಕೃತಿ ಎಂದು ವಾಗ್ದಾಳಿ ನಡೆಸಿದರು.

ಹೆಚ್.ಡಿ.ಕೆ. ಪಾಪದ ಕೊಳೆ ತೊಳೆಯುತ್ತಿದ್ದೇವೆಂಬ ಸುರೇಶ್ ಹೇಳಿಕೆಗೆ,



" ಅಭಿವೃದ್ಧಿ ಹೆಸರಲ್ಲಿ ರೈತರ ಭೂಮಿ ವಶಪಡಿಸಿಕೊಂಡು ಕಳೆದ 20 ವರ್ಷದಿಂದ ಅನಧಿಕೃತವಾಗಿ ನೈಸ್ ರಸ್ತೆಯಲ್ಲಿ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಕರ್ನಾಟಕದ ಇತಿಹಾಸದಲ್ಲೇ ಇಂತಹ ದೊಡ್ಡ ಹಗರಣ ನಡೆದಿಲ್ಲ.

-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಕೊಳೆನಾ? ಎಲ್ಲಿದೆ ಕೊಳೆ? ನಾವು ರಾಮನಗರಕ್ಕೆ ಬಂದಾಗ ಕನಕಪುರ ಹೇಗಿತ್ತು? ಕನಕಪುರದಲ್ಲಿ ಬೀದಿ ದೀಪದ ಕಂಬ ಕೂಡ ಇರಲಿಲ್ಲ. ಹೆಚ್.ಡಿ.ದೇವೇಗೌಡ ಅವರು ಕನಕಪುರಕ್ಕೆ ವಿದ್ಯುತ್ ಸಂಪರ್ಕ ಕೊಡಿಸುವಾಗ ಇವರು ಎಲ್ಲಿದ್ದರು. ಕೊತ್ವಾಲ್‌ಗೆ ಹೆಂಡ ಕೊಡಲು ಬಾರ್‌ನಲ್ಲಿ ಕೂತಿದ್ದರೆಂದು ಆಕ್ರೋಶ ವ್ಯಕ್ತಪಡಿಸಿದರು.

### ಎಷ್ಟು ವರ್ಷ ಕಾಯಬೇಕು

ನೈಸ್ ರಸ್ತೆಗೆ ಭೂಮಿ ಕೊಟ್ಟ ರೈತರು ಪರಿಹಾಕ್ಕಾಗಿ ಇನ್ನೂ ಎಷ್ಟು ವರ್ಷ ಕಾಯಬೇಕು. ರಸ್ತೆ ನಿರ್ಮಿಸಲು ಇನ್ನೆಷ್ಟು ವರ್ಷ ಬೇಕು.

### ಕಾಲು ಹಿಡಿದಿದ್ದವ ಪಾಠ ಮಾಡ್ತಾನೆ?

ಸಚಿವನಾಗಿರುವ ಬಾಲಕೃಷ್ಣ ಹಿಂದೆ ನನ್ನ ಜೊತೆಯಲ್ಲೇ ಇದ್ದ. ಆಗ ಗುತ್ತಿಗೆದಾರರೊಬ್ಬರು 600 ಕೋ. ರೂ. ಕೆಲಸ ಮಾಡಿದರೂ ಹಣ ಸಿಗದಿದ್ದಾಗ, ಅಯ್ಯಯ್ಯೋ ಆ ವಿಷಯ ಎತ್ತಬೇಡಣ್ಣ ಎಂದು ಕಾಲು ಹಿಡಿದುಕೊಳ್ಳಲು ಬಂದಿದ್ದ ಎಂದು ಸಚಿವ ಹೆಚ್.ಸಿ.ಬಾಲಕೃಷ್ಣ ವಿರುದ್ಧ ಕಿಡಿಕಾರಿದರು.

600 ಕೋ.ರೂ. ವಿಚಾರ ಎತ್ತಬೇಡ ಎಂದು ಆಗ ಕಾಲು ಹಿಡಿದಿದ್ದವನು ಈಗ ನನಗೆ ಪಾಠ ಮಾಡುತ್ತಾನಾ. ಇವನಿಂದ ನಾನು ಕಲಿಯಬೇಕಾ ಎಂದರು.

ಈಗಾಗಲೇ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಹಿಂದೆ ಮಾಯಗಾನಹಳ್ಳಿ ಬಳಿ ಶಾಲಾ ಬಸ್ ಅಪಘಾತದಲ್ಲಿ 8 ಮಕ್ಕಳು ಮೃತಪಟ್ಟಾಗ ಬೆಂಗಳೂರು-ಮೈಸೂರು ನಡುವೆ ಉತ್ತಮ ರಸ್ತೆ ನಿರ್ಮಿಸಬೇಕೆಂದು ಹೆಚ್.ಡಿ. ದೇವೇಗೌಡ ಅವರು ತೀರ್ಮಾನಿಸಿದ್ದರು. ಜನರಿಗೆ ಒಳ್ಳೆಯದು ಮಾಡಬೇಕೆಂದು ಕೆಲಸ ಮಾಡಿದವರು ನಾವು. 20 ವರ್ಷದಿಂದ ರೈತರಿಗೆ ಪರಿಹಾರ ಕೊಡಬೇಡಿ ಎಂದು ದೇವೇಗೌಡರು ಹೇಳಿದ್ದರೇ. ಇವರು ಮಾಡುತ್ತಿರುವ ಅಕ್ರಮದ ವಿರುದ್ಧ ಧ್ವನಿ ಎತ್ತಲು ಜನರು ನಮಗೆ ಶಕ್ತಿ ಕೊಟ್ಟಿದ್ದಾರೆಂದು ನೈಸ್ ರಸ್ತೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ನೈಸ್ ರಸ್ತೆ ಟೋಲ್ ನಿಲ್ಲಿಸುವಂತೆ ನಾನೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಕಾಂಗ್ರೆಸ್ ಮಹಾನುಭಾವರು ಸಲಹೆ ನೀಡಿದ್ದಾರೆ. ಇದು ಅವರ ಜ್ಞಾನದ ಕೊರತೆಯನ್ನು ಎತ್ತಿ ತೋರಿಸುತ್ತದೆ. ನೈಸ್ ರಸ್ತೆ ಸಂಪೂರ್ಣವಾಗಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಹೀಗಾಗಿಯೇ ಇಲ್ಲಿ ನಡೆಯುತ್ತಿರುವ ಅಕ್ರಮಗಳ ವಿರುದ್ಧ ನಾವು ಹೋರಾಡುತ್ತಿದ್ದೇವೆಂದರು.

### ಹಗರಣ ವಿರುದ್ಧ ಬೀದಿಗಿಳಿಯಬೇಕು

ನೈಸ್ ರಸ್ತೆ ಹಗರಣದ ವಿರುದ್ಧ ಇಡೀ ರಾಜ್ಯದ ಜನರು ಎದ್ದು ನಿಲ್ಲಬೇಕಾಗಿದೆ. ಅದರ ವಿರುದ್ಧ ಜೆಡಿಎಸ್ ಕಾರ್ಯಕರ್ತರನ್ನು ನಾನು ಎತ್ತಿಕಟ್ಟುತ್ತಿಲ್ಲ. ಜನರು ನಮ್ಮನ್ನು ಆಯ್ಕೆ ಮಾಡಿರುವುದು ದುರಾಡಳಿತವನ್ನು ಪ್ರಶ್ನಿಸಲು. ರೈತರ ಭೂಮಿಯನ್ನು ಲಪಟಾಯಿಸುವ ಕೆಲಸ ನಡೆದರೆ ಅದರ ಬಗ್ಗೆ ದನಿ ಎತ್ತಲು ಜನ ನಮಗೆ ಶಕ್ತಿ ಕೊಟ್ಟಿದ್ದಾರೆ. ನೈಸ್ ರಸ್ತೆಗಾಗಿ ಟೇಪ್ ಹಿಡಿದುಕೊಂಡು ಅಳತೆ ಮಾಡಿ ಭೂಮಿ ಲಪಟಾಯಿಸಿದವರು ಇನ್ನೂ ಪರಿಹಾರ ಕೊಟ್ಟಿಲ್ಲ. ಅಭಿವೃದ್ಧಿ ಹೆಸರಲ್ಲಿ ರೈತರ ಭೂಮಿ ವಶಪಡಿಸಿಕೊಂಡು ರಸ್ತೆ ನಿರ್ಮಿಸಿ 20 ಅನಧಿಕೃತವಾಗಿ ಟೋಲ್ ಸಂಗ್ರಹಿಸುತ್ತಿದ್ದಾರೆ. ಇದು ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಹಗರಣ. ಆ ರಸ್ತೆ ರಾಷ್ಟ್ರೀಯ ಹೆದ್ದಾರಿಯಲ್ಲ, ರಾಜ್ಯ ಸರ್ಕಾರಕ್ಕೆ ಸೇರಿದ್ದು. ಅಲ್ಲಿ ಟೋಲ್ ಸಂಗ್ರಹವೇ ಅಕ್ರಮ. ಸರ್ಕಾರ ಕೂಡಲೇ ಅದಕ್ಕೆ ತಡೆಯೊಡ್ಡಬೇಕೆಂದು ಕುಮಾರಸ್ವಾಮಿ ಆಗ್ರಹಿಸಿದರು.

# ಗ್ರಾ.ಪಂ. ಮೀಸಲಾತಿ ಖಂಡಿಸಿ ಇಂದು ಪ್ರತಿಭಟನೆ

• ಪ್ರಜೋದಯ ವರದಿ



**ಸಕಲೇಶಪುರ:** ಜಿಲ್ಲೆಯಲ್ಲಿ ಇತ್ತೀಚೆಗೆ ಪ್ರಕಟಿಸಿರುವ ಗ್ರಾಮ ಪಂಚಾಯಿತಿ ಮೀಸಲಾತಿ ಪಟ್ಟಿಯಲ್ಲಿ ಹಲವು ಲೋಪದೋಷಗಳಿದ್ದು, ಜಿಲ್ಲಾಡಳಿತ ನಿರ್ಧಾರ ಖಂಡಿಸಿ ಆ. 24ರ ಸೋಮವಾರ ಹಾಸನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ಹೇಳಿದರು.

ಪಟ್ಟಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿಯನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ನಿಗದಿಪಡಿಸುವಂತೆ ಒತ್ತಾಯಿಸಿ ಜಿಲ್ಲಾ ಜೆಡಿಎಸ್ ವತಿಯಿಂದ ಹೇಮಾವತಿ ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಎ.ಮಂಜು, ಸಿ.ಎನ್. ಬಾಲಕೃಷ್ಣ, ಹೆಚ್.ಪಿ.ಸ್ವರೂಪ್ ಹಾಗು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಮತ್ತಿತರರು ಭಾಗವಹಿಸಲಿದ್ದಾರೆಂದರು.

ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳ ಮೀಸಲಾತಿ ಪಟ್ಟಿಗೆ ಸಂಬಂಧಿಸಿ ಪಕ್ಷದ ಕಾರ್ಯಕರ್ತರು ಹಾಗು ಸಾರ್ವಜನಿಕರು ದೂರು ನೀಡಿದ್ದು, ಪಟ್ಟಿಯನ್ನು ಪರಿಶೀಲಿಸಿ ದಾಗ ಹಲವು ಕಡೆಗಳಲ್ಲಿ ಮಾರ್ಗ ಸೂಚಿ ಪಾಲಿಸದಿರುವುದು ಕಂಡು ಬಂದಿದೆ ಎಂದರು.

ಮೀಸಲಾತಿ ನಿಗದಿಯಲ್ಲಿ ರಾಜಕೀಯ ಪ್ರೇರಣೆ ಇದೆಯೇ ಅಥವಾ ಮಾರ್ಗಸೂಚಿಗಳನ್ನು ಏಕೆ ಪಾಲಿಸಿಲ್ಲ ಎಂಬುದನ್ನು ಜಿಲ್ಲಾಧಿಕಾರಿ ಸ್ಪಷ್ಟಪಡಿಸಬೇಕು. ಮೀಸಲಾತಿ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶವಿದ್ದು, ಅನ್ಯಾಯಕ್ಕೊಳಗಾದವರು ಆಕ್ಷೇಪಣೆ ಸಲ್ಲಿಸಬಹುದು. ಜಿಲ್ಲಾಧಿಕಾರಿ ಹಾಗು ತಹಶೀಲ್ದಾರ್ ಪಟ್ಟಿಯಲ್ಲಿನ ಲೋಪಗಳನ್ನು ಪರಿಶೀಲಿಸಿ, ತಪ್ಪುಗಳಿದ್ದಲ್ಲಿ ಸರಿಪಡಿಸಿ ನೊಂದವರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

# ನನ್ನತ್ರ ಇದೆಲ್ಲಾ ನಡೆಯಲ್ಲ ಸಸ್ಪೆಂಡ್ ಮಾಡಿಸ್ತಿನಿ ಹುಷಾರ್

- ತಾಲ್ಲೂಕು ಆರೋಗ್ಯಾಧಿಕಾರಿಗೆ ಶಾಸಕ ಎ.ಮಂಜು ತರಾಟೆ
- ಏಕವಚನದಲ್ಲಿ ವಾಗ್ದಾಳಿ




• ಪ್ರಜೋದಯ ವರದಿ

**ಅರಕಲಗೂಡು:** ನೀನು ಯಾರ‍್ಯಾರ ಹತ್ರ ಎಷ್ಟೆಷ್ಟು ದುಡ್ಡು ಇಸ್ಗೋತಿದಿಯ ಅನ್ನೋದೆಲ್ಲಾ ರೆಕಾರ್ಡ್ ಮಾಡ್ಕೊಂಡಿದ್ದಾರೆ, ದಡ್ಡ ಇದೆಲ್ಲಾ ನನ್ನ ಹತ್ರ ನಡೆಯೋದಿಲ್ಲ ಹುಷಾರ್ ಎಂದು ಶಾಸಕ ಎ. ಮಂಜು ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ಪುಷ್ಪಲತಾ ಹಾಗು ಅಧಿಕಾರಿಯನ್ನು ತೀವ್ರ ತರಾಟೆ ತೆಗೆದುಕೊಂಡರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ, ಬಾಕಿ ಇರುವ ಕಾಮಗಾರಿ ಹಾಗು ಇಲಾಖಾವಾರು ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಆರೋಗ್ಯ ಇಲಾಖೆ ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ನಿವೇಶನ ಹಸ್ತಾಂತರವಾಗದೆ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ಟಿಹೆಚ್‌ಒ ಸಭೆಗೆ ಗೈರಾಗಿದ್ದಕ್ಕೆ ಗದರಿದರು. ಅಧಿಕಾರಿ ಪರ ವಹಿಸಿಕೊಂಡು ಮಾತಿಗೆ ಮುಂದಾದ ಇಲಾಖೆಯ ಬೇರೆ ಅಧಿಕಾರಿ ವಿರುದ್ಧ ಹರಿಹಾಯ್ದರು.

ಟಿಹೆಚ್‌ಒ ಕೆಲಸ ಏನು, ಕಟ್ಟಡ ನಿರ್ಮಿಸಬೇಡಿ ಅಂತ ಕಾನೂನು ಹೇಳಿದೆಯೇ, ದಬ್ಬಾಳಿಕೆ ಮಾಡ್ತಿರಾ ನೀವು, ನಿನ್ನ ಕೈ ಬಿಸಿ ಮಾಡಲೇಬೇಕಾ? ದನ ಕಾಯ್ತಿಯಾ ನೀನು ಎಂದರು. ಈ ವೇಳೆ ರುದ್ರಪಟ್ಟಣ ಪ್ರಾಥಮಿಕ ಆರೋಗ್ಯ ಕೇಂದ್ರ ನೋಂದಣಿ ಆಗಿಲ್ಲವೆಂದು ಅಧಿಕಾರಿ ಸಮಜಾಯಿಸಿ ನೀಡಲು ಮುಂದಾದಾಗ ತಡೆದ ಶಾಸಕರು, ಜಾಗ ನೋಂದಣಿ ಆಗಿದ್ದರೆ ಅಮಾನತು ಮಾಡಿಸ್ತಿನಿ ನೋಡ್ತಿಯಾ. ನಿನ್ನ ಮನೆಯ ಆಸ್ತಿಯಾ ಅದು. ನಾನು ಇಲ್ಲಿಯವರೆಗೆ ಯಾರಿಗೂ ತೊಂದರೆ ನೀಡಿರಲಿಲ್ಲ. ಯಾರ‍್ಯಾರ ಹತ್ರ ಎಷ್ಟೆಷ್ಟು ಕೇಳ್ತಿಯಾ ಅದನ್ನೆಲ್ಲ ರೆಕಾರ್ಡ್ ಮಾಡಿಕೊಂಡಿದ್ದಾರೆ. ದಡ್ಡ ನಿನ್ನ ಹೆಂಡ್ತಿ ಮಕ್ಕಳಿಗೆ ತೊಂದರೆ ಆಗ್ಬಾರ್ದು ಅಂತ ಸುಮ್ನೆ ಇದ್ದೀನಿ. ದಾನ ಕೊಟ್ಟಿರುವ ಜಾಗವನ್ನು ನೋಂದಣಿ ಮಾಡಿಸಿಕೊಳ್ಳಲು ಏನು ನಿನಗೆ ಸಮಸ್ಯೆ. ದೆವ್ವ ಇದ್ದಂಗೆ ಇದೀಯಾ ನೆಟ್ಟಗೆ ಕೆಲಸ ಮಾಡೋಕೆ ಏನು ದಾಡಿ ಎಂದು ತರಾಟೆಗೆ ತೆಗೆದುಕೊಂಡರು.

ಕರ್ತವ್ಯ ನಿರ್ವಹಣೆಯಲ್ಲಿ ಅನಗತ್ಯ ವಿಳಂಬವಾಗಬಾರದು. ಸರ್ಕಾರದ ಯೋಜನೆಗಳು ಹಾಗು ಇಲಾಖೆಯ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು. ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕೆಂದರು.

ಆರೋಗ್ಯ ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ನಿವೇಶನಗಳನ್ನು ಶೀಘ್ರವಾಗಿ ಹಸ್ತಾಂತರಿಸಿ, ಕಾಮಗಾರಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕ ಎ. ಮಂಜು ಸೂಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಯುವರಾಜ್, ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೋಪವಾಗಿದ್ದರೆ ಕಾನೂನು ಹೋರಾಟ ಮಾಡಲಿ: ಪ್ರೀತಮ್ ಗೌಡ

## ಮಾಜಿ ಸಚಿವ ರೇವಣ್ಣಗೆ ತಿರುಗೇಟು | ನೈಸ್ ಯೋಜನೆ ಬಗ್ಗೆ ಮಾಹಿತಿ ಇಲ್ಲ

• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ಚುನಾವಣೆ ಮೀಸಲಾತಿ ಪಟ್ಟಿ ಸಂಬಂಧ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ಮಹತ್ವ ನೀಡುವ ಅಗತ್ಯವಿಲ್ಲ. ಪಟ್ಟಿಯಲ್ಲಿ ಲೋಪದೋಷವಿದ್ದರೆ ನ್ಯಾಯಾಲಯದ ಮೆಟ್ಟಿಲೇರಲು ಅವರಿಗೆ ಅವಕಾಶಗಳಿವೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಮೀಸಲಾತಿ ಅಧಿಸೂಚನೆಯಿಂದ ಯಾರಿಗೆ ಅನುಕೂಲ ಆಗಿರುತ್ತೆ ಅವರಿಗೆ ಸರಿ ಅನ್ನಿಸಿರುತ್ತದೆ. ಯಾರಿಗೆ ಅನಾನುಕೂಲ ಆಗಿರುತ್ತೆ ಅವರಿಗೆ ಸಮಸ್ಯೆಯಾಗಿರುತ್ತದೆ. ನನ್ನನ್ನು ಒಳಗೊಂಡಂತೆ ಎಲ್ಲಾ ರಾಜಕಾರಣಿಗಳಿಗೂ ಹಾಗೆ ಅನಿಸುತ್ತದೆ. ಹಾಗಾಗಿ ಅದಕ್ಕೆ ಮಹತ್ವ ಕೊಡುವ ಅವಶ್ಯಕತೆಯಿಲ್ಲ. ಯಾರೇ ಆದರೂ ನಮ್ಮ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕು. ಲೋಪದೋಷ ಇದ್ದರೆ ಕಾನೂನು ಹೋರಾಟ ಮಾಡಬಹುದು. ಜಿಲ್ಲಾಧಿಕಾರಿ ಅವರು ಕಾನೂನು ಉಲ್ಲಂಘಿಸಿದ್ದರೆ ನ್ಯಾಯಾಲಯದ ಮೆಟ್ಟಿಲೇರಬಹುದು. ಖಂಡಿತವಾಗಿಯೂ ಕೋರ್ಟ್ ತಡೆಯಾಜ್ಞೆ ವಿಧಿಸುತ್ತದೆ. ನಾನು ಜೆಡಿಎಸ್ ವಕ್ತಾರನಾಗಲು ತಯಾರಿಲ್ಲ. ಅವರಿಗೆ ಸಮಸ್ಯೆ ಇದೆ ಅದನ್ನು ಹೇಳಿಕೊಂಡಿದ್ದಾರೆಂದರು.



ಇತ್ತೀಚೆಗೆ ಸಂಸದ ಶ್ರೇಯಸ್ ಪಟೇಲ್ ಜೊತೆ ನಡೆದ ಪಿಸುಮಾತಿನ ಕುರಿತು ಪ್ರತಿಕ್ರಿಯಿಸಿದ ಅವರು, ನಮ್ಮ ಸ್ಥಳೀಯ ಶಾಸಕರನ್ನು ಕೂರಿಸಿಕೊಂಡು ಅವರು ನಾನು ಚೆನ್ನಾಗಿದ್ದೇವೆಂದು ಸಂಸದ ಶ್ರೇಯಸ್ ಪಟೇಲ್ ಹೇಳಿದಾಗ ಅದಕ್ಕೆ ಪ್ರಾಮುಖ್ಯತೆ ನೀಡಲಿಲ್ಲ. ಅವರಿಬ್ಬರು ಒಟ್ಟಿಗೆ ಗಣಪತಿ ಉತ್ಸವದಲ್ಲಿ ಕೈ ಕೈ ಹಿಡಿದುಕೊಂಡು ಓಡಾಡಿದರೂ ಯಾರೂ ಮಾತನಾಡವುದಿಲ್ಲ. ಆದರೆ ನಾನು ಕೂಳಿತರೆ, ನಿಂತರೆ ಸುದ್ದಿ, ಬರಲಿಲ್ಲ ಎಂದರೂ ಸುದ್ದಿಯಾಗುತ್ತದೆ. ಅದು ಪ್ರೀತಮ್ ಗೌಡನ ಶಕ್ತಿ ಎಂದರು.

ನೈಸ್ ರಸ್ತೆ ಟೋಲ್ ವಿಚಾರವಾಗಿ ನನಗೆ ಮಾಹಿತಿ ಇಲ್ಲ. ವಿಚಾರ ತಿಳಿದುಕೊಂಡು ಮಾತನಾಡುತ್ತೇನೆ. ನೈಸ್ ರಸ್ತೆ ಬಗ್ಗೆ ಮಾಹಿತಿ ಕಡಿಮೆ ಇದೆ.

" ಕ್ಷೇತ್ರದ ಜನರು ನನಗೆ ಅವಕಾಶ ಕೊಡುತ್ತಾರೆಂಬ ವಿಶ್ವಾಸವಿದ್ದು ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕೆಲಸ ಮಾಡಲು ಸಿದ್ಧನಿದ್ದೇನೆ. ಮುಂದಿನ ದಿನಗಳಲ್ಲಿ ಆ ಕನಸು ನನಸಾಗುವ ಸಾಧ್ಯತೆಯಿದೆ. ಜಿಲ್ಲೆಯ ಅಭಿವೃದ್ಧಿಗೆ ವೇಗ ನೀಡಲಿ ಎಂಬ ಉದ್ದೇಶದಿಂದ ಕೆ.ಎಂ.ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲಾಗಿದೆ. ಅವರು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿ ಎಂದು ಆಶಿಸುತ್ತೇನೆ.

-ಪ್ರೀತಮ್ ಗೌಡ, ಮಾಜಿ ಶಾಸಕ

ನಾವು ಹಾಸನದವರು, ಈ ಭಾಗದಲ್ಲಿ ಇರುವುದರಿಂದ ಆ ಭಾಗದ್ದು ಗೊತ್ತಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದ್ದಾರೆ ಅಂದರೆ ಅದರಲ್ಲಿ ಸತ್ಯಾಸತ್ಯತೆ ಇರುತ್ತೆ. ಆ ವಿಚಾರದ ಬಗ್ಗೆ ಮಾತನಾಡುವಷ್ಟು ವಿಚಾರಗಳು ನನಗೆ ಗೊತ್ತಿಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

### ಕಾನೂನು ಎಲ್ಲರಿಗೂ ಒಂದೇ

ಆಸ್ತಿ ಘೋಷಣೆಯಲ್ಲಿ ಗೌಪ್ಯತೆ ಕಾಪಾಡಿಕೊಂಡಿದ್ದರ ವಿಚಾರಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಲು ನ್ಯಾಯಾಲಯ ನಿರ್ದೇಶನ ನೀಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಅವರು ಏನು ವಿಚಾರ ಕೇಳ್ತಾರೆ, ಎಲ್ಲಾ ರೀತಿಯ ಸಹಕಾರವನ್ನ ಕೊಡೋದು ಜವಾಬ್ದಾರಿ ಇರುತ್ತೆ. ಆ ಕೆಲಸವನ್ನು ಮಾಡುತ್ತೇನೆಂದರು.

ಎಲ್ಲದಕ್ಕೂ ರಾಜಕಾರಣ ಎಳೆದು ತರುವ ಕೆಲಸ ಮಾಡಲ್ಲ. ನಾನು ಪ್ರಮಾಣಿಕವಾಗಿ ಇದ್ದರೆ ಬೇರೆಯದರ ಬಗ್ಗೆ ಚಿಂತೆ ಮಾಡಬಾರದು. ನಾನು ಮೂಲತಃ ಉದ್ಯಮಿ. ಆ ಮೇಲೆ ರಾಜಕಾರಣಕ್ಕೆ ಬಂದಿದ್ದೇನೆ. ರಾಜಕಾರಣಕ್ಕೆ ಬರುವ ಮೊದಲು ನಾನು ಏನಾಗಿದ್ದೆ ಎಂಬುದು ಕೆಲವರಿಗೆ ಸಂದೇಹಗಳಿರುತ್ತವೆ. ಸಂದೇಹ ಬಗೆಹರಿಸಿಕೊಳ್ಳಲು ಕೋರ್ಟ್ ಮೆಟ್ಟಿಲೇರಿರುತ್ತಾರೆ. ಕಾನೂನಿಗೆ ತಲೆ ಬಾಗುವುದು ನನ್ನ ಜವಾಬ್ದಾರಿ ಎಂದರು.

# ಚಲಿಸುತ್ತಿದ್ದ ರೈಲಿಗೆ ಸಿಲುಕಿ ವ್ಯಕ್ತಿ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಚಲಿಸುತ್ತಿದ್ದ ರೈಲು ಹತ್ತುವಾಗ ಕಾಲು ಜಾರಿ ಬಿದ್ದ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದ ರೈಲು ನಿಲ್ದಾಣದಲ್ಲಿ ನಡೆದಿದೆ.

ತಾಲ್ಲೂಕಿನ ಕೆ.ಮುದ್ದನಹಳ್ಳಿ ಗ್ರಾಮದ ನಾಗರಾಜು (48) ಮೃತರು. ಬೆಂಗಳೂರಿಗೆ ತೆರಲು ರೈಲ್ವೆ ನಿಲ್ದಾಣಕ್ಕೆ ಬಂದ ಅವರು ರೈಲು ಹೊರಟಿದ್ದರಿಂದ ಓಡಿ ಹೋಗಿ ಹತ್ತಲು ಯತ್ನಿಸಿದ್ದಾರೆ. ರೈಲು ನಿಧಾನವಾಗಿ ಚಲಿಸುತ್ತಿತ್ತು. ಆದರೆ, ಆಯಾತಪ್ಪಿ ಕೆಳಗೆ ಬಿದ್ದಾಗ ರೈಲು ಹರಿದು ಅಸುನೀಗಿದ್ದಾರೆ. ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಸ್‌ಐಆರ್: 43.84 ಲಕ್ಷ ಜನರಿಗೆ ನೋಟೀಸ್ ಸಾಧ್ಯತೆ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದಲ್ಲಿ ಎಸ್‌ಐಆರ್ ಮೊದಲ ಹಂತ ಮುಕ್ತಾಯವಾಗಿದ್ದು ಮತ್ತೊಂದು ಹಂತದ ಪ್ರಕ್ರಿಯೆಗೆ ಚುನಾವಣಾ ಆಯೋಗ ನಿರ್ಧರಿಸಿದೆ.

ಮ್ಯಾಪಿಂಗ್ ಆಗದ 43.84 ಲಕ್ಷ ಮತದಾರರಿಗೆ ನೋಟೀಸ್ ಜಾರಿಗೆ ನಿರ್ಧರಿಸಲಾಗಿದೆ. ಬೆಂಗಳೂರಿನಲ್ಲಿ 23 ಲಕ್ಷ ಮತದಾರರಿಗೆ ನೋಟೀಸ್ ಬರಲಿದೆ. ಮತದಾರರು ನೋಟೀಸ್‌ಗೆ ಪ್ರತಿಕ್ರಿಯೆ ನೀಡಿ ಸೂಕ್ತ ದಾಖಲೆಗಳನ್ನು ಸಲ್ಲಿಕೆ ಮಾಡಬೇಕಾಗಿದೆ. ನೋಟೀಸ್ ಪಡೆದು ಪ್ರತಿಕ್ರಿಯೆ ನೀಡುವಾಗ ನಾವು ಮತದಾರರೆಂದು ದೃಢಪಡಿಸಬೇಕಿದೆ. ಆಗ ಮತದಾರರ ಪಟ್ಟಿಯಲ್ಲಿ ಹೆಸರು ಪಡೆಯಲು ಸಾಧ್ಯತೆ ಇದೆ. ಎಎಸ್‌ಡಿಡಿಒ ಎಂದು 1.07 ಕೋಟಿ ಮತದಾರರನ್ನು ಗುರುತಿಸಲಾಗಿದೆ. 43.84 ಲಕ್ಷ ಮತದಾರರು ಗುರುತು, ಪೌರತ್ವ ಮತ್ತು ಜನ್ಮ ದಿನಾಂಕ ಸಾಬೀತು ಪಡಿಸಬೇಕಿದೆ. 43.84 ಲಕ್ಷ ಮತದಾರರ ಪೈಕಿ 23.45 ಲಕ್ಷ ಮತದಾರರ ಮ್ಯಾಪಿಂಗ್ ಲಭ್ಯವಿಲ್ಲ. ಗೊಂದಲಮಯ ವಾಗಿರುವ 20.35 ಲಕ್ಷ ಮತದಾರರಿಗೆ ಕೂಡ ನೋಟೀಸ್ ಬರಲಿದೆ. ನೋಟೀಸ್‌ಗೂ ಉತ್ತರ ಕೊಟ್ಟು , ಫಾರಂ-6 ಅಡಿ ಕೂಡ ಹೆಸರು ಸೇರ್ಪಡೆಗೆ ಮಾಡಿಕೊಳ್ಳಬಹುದು.

## ಅತಿ ಹೆಚ್ಚು ಕೆರೆ ಹೊಂದಿರುವ ಜಿಲ್ಲೆ ಹಾಸನ | ಮಳೆ ಮುನಿಸಿನಿಂದ ರೈತರು ಕಂಗಾಲು

# ನೀರಿಲ್ಲದೆ ಆಟದ ಮೈದಾನದಂತಾದ ಕೆರೆಗಳು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಪ್ರಸಕ್ತ ವರ್ಷದಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರು ಸಂಪೂರ್ಣ ಕೈಕೊಟ್ಟ ಹಿನ್ನಲೆಯಲ್ಲಿ ಮಳೆಗಾಲದಲ್ಲೂ ಕೆರೆಕಟ್ಟೆಗಳು ಸಂಪೂರ್ಣ ಬತ್ತಿ ಆಟದ ಮೈದಾನದಂತೆ ಭಾಸವಾಗುತ್ತಿವೆ.

ಮಲೆನಾಡು ಭಾಗದಲ್ಲಿ ಮೋಡ ಕವಿದ ವಾತಾವರಣ ನಿರ್ಮಾಣವಾದರೆ ಬಯಲು ಸೀಮೆಯಲ್ಲಿ ಬಿಸಿಲ ಝಳದಿಂದ ಕೆರೆಕಟ್ಟೆಗಳು ತಮ್ಮ ಅಸ್ತಿತ್ವನ್ನೇ ಕಳೆದುಕೊಂಡಂತಾಗಿದೆ. ಎಲ್ಲೋ ಒಂದು ಕಡೆ ಕೆರೆಗಳಲ್ಲಿ ಅಲ್ಪಸ್ವಲ್ಪ ನೀರು ಕಾಣಬಹುದು. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 6367 ಕೆರೆಗಳನ್ನು ಹೊಂದಿರುವ ಜಿಲ್ಲೆ ಹಾಸನ ಆಗಿದ್ದು ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದೆ. ಆದರೆ ಅವುಗಳಲ್ಲಿ ನೀರಿನ ಪ್ರಮಾಣ ತೀರಾ ಕುಸಿದಿದೆ.

ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಹಳೆಕೋಟೆ ಮತ್ತು ಕಸಬಾ ಹೋಬಳಿಯ ವ್ಯಾಪ್ತಿಯಲ್ಲಿ ಮುಂಗಾರು ಮಳೆ ಮುನಿಸಿನಿಂದ ಭೂಮಿಯಲ್ಲಿ ತೇವಾಂಶವಿಲ್ಲದೆ ಬರಡು ಪ್ರದೇಶವಾಗುತ್ತಿದೆ. ಮಳೆಯ ಕೊರತೆಯಿಂದ ರೈತರು ಯಾವುದೇ ಬೆಳೆಗಳನ್ನು ಬೆಳೆಯಲಾಗದೆ ಪರಿತಪಿಸುತ್ತಿದ್ದು, ಜೀವನ ನಿರ್ವಹಣೆಯ ಚಿಂತೆ ಕಾಡುತ್ತಿದೆ.



ಜಾನುವಾರುಗಳ ಕುಡಿಯುವ ನೀರಿಗೂ ಸಮಸ್ಯೆಯಾಗುವ ಆತಂಕ ಕಾಡುತ್ತಿದೆ. ಕಳೆದ ಸಾಲಿನಲ್ಲಿ ಬೆಳೆ ಬೆಳೆದು ಸಂಗ್ರಹಿಸಿದ್ದ ಅಲ್ಪಸ್ವಲ್ಪ ಹುಲ್ಲಿನ ನಿರ್ವಹಣೆಯಲ್ಲಿ ಇಲ್ಲಿ ತನಕ ಜಾನುವಾರುಗಳನ್ನು ಸಲುಹಿದ್ದಾರೆ. ಮುಂದಿನ ದಿನಗಳು ಮಳೆ ಬಾರದಿದ್ದರೆ ಪರಿಸ್ಥಿತಿ ಘೋರವಾಗಲಿದೆ. ಪ್ರಾಣಿಗಳಿಗೆ ಕುಡಿಯಲು ನೀರಿಲ್ಲದೆ ಪರದಾಡುತ್ತಿವೆ. ಜಾನುವಾರುಗಳಿಗೆ ಕುಡಿಯಲು ಮನೆಯ ನೀರನ್ನೆ ಆಶ್ರಯಿಸುವಂತಾಗಿದೆ. ಮುಂಗಾರು ಮಳೆಯ ಭಾರೀ ಪ್ರಮಾಣದ ಕುಸಿತದಿಂದ ಕಾಲುವೆಗಳಲ್ಲಿ ನೀರು ಹರಿಯದೆ ಹಾಗು ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹವಾಗದೆ ಸಾವಿರಾರು ಕೊಳವೆ ಬಾವಿಗಳು ಬತ್ತುತ್ತಿವೆ. ರೈತರು ತಾವು ಬೆಳೆದ ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ ಬೆಳೆಗಳನ್ನು ನಿರ್ವಹಣೆ ಮಾಡಲು ಸಂಕಷ್ಟ ಅನುಭವಿಸುತ್ತಿದ್ದಾರೆ. ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ನೂರಾರು ಕೊಳವೆ ಬಾವಿಗಳು ಬತ್ತಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಮುಂಗಾರು ಹಂಗಾಮಿನಲ್ಲಿ ರೈತರು ರಾಗಿ, ಮುಸುಕಿನ ಜೋಳ ಭತ್ತದ ಬೆಳೆ ಬೆಳೆಯಲು ಹಾತೊರೆಯುತ್ತಿದ್ದರೂ ಮಳೆರಾಯ ಅವರ ಆಸೆಗೆ ತಣ್ಣೀರೆರಚಿ ವಿಶ್ರಾಂತಿಯ ಮೊರೆ ಹೋಗಿದ್ದಾನೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

### ಕಚೇರಿಗಳಿಗೆ ಸೀಮಿತರಾದ ಅಧಿಕಾರಿಗಳು

ಭೀಕರ ಬರ ಪರಿಸ್ಥಿತಿ ಎದುರಾಗಿರುವಾಗ ರೈತರಿಗೆ ಆತ್ಮಸ್ಥೈರ್ಯ ತುಂಬಬೇಕಿದ್ದ ಅಧಿಕಾರಿಗಳು ಕಚೇರಿಗೆ ಸೀಮಿತರಾಗಿದ್ದಾರೆಂಬ ಆರೋಪ ಕೇಳಿಬಂದಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರೊಂದಿಗೆ ಎರಡು ದಿನ ಬರ ಅಧ್ಯಯನ ನಡೆಸಿದ ಅಧಿಕಾರಿಗಳು ಆ ಬಳಿಕ ಎಲ್ಲಿಯೂ ಕಾಣಿಸಿಕೊಳ್ಳುತ್ತಿಲ್ಲ. ಬೆಳೆಗಳ ವಿಮೆ ವಿಷಯವಾಗಿ ಹೆಚ್ಚಿನ ಪ್ರಚಾರ ಮಾಡದೆ ರೈತರಿಗೆ ಅನ್ಯಾಯ ಮಾಡಿದ್ದಾರೆ. ಬೆಳೆಗಳ ಸಮೀಕ್ಷೆಯನ್ನು ಉತ್ತಮವಾಗಿ ನಡೆಸುವಲ್ಲಿ ವಿಫಲರಾಗಿದ್ದಾರೆಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಳೆ ಇಲ್ಲದೆ ಯಾವುದೇ ಬೆಳೆಗಳನ್ನು ರೈತರು ಬೆಳೆಯಲಾಗಿಲ್ಲ. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ನೆರವಿಗೆ ಧಾವಿಸಬೇಕು. ಜೀವನ ನಿರ್ವಹಣೆಗೆ ಆರ್ಥಿಕ ಸಂಕಷ್ಟ ಎದುರಾಗಿರುವುದರಿಂದ ಸರ್ಕಾರ ಕೂಡಲೇ ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ, ಹೆಚ್ಚಿನ ಪ್ರಮಾಣದ ಪರಿಹಾರವನ್ನು ನೀಡಬೇಕು.ರೈತರ ಸಾಲಗಳನ್ನು ಮನ್ನಾ ಮಾಡಬೇಕೆಂಬ ಆಗ್ರಹ ಕೇಳಿಬಂದಿದೆ.

ಮಳೆಯ ಕೊರತೆಯಿಂದ ಭೂಮಿಯಲ್ಲಿ ತೇವಾಂಶದ ಕೊರತೆ ಹೆಚ್ಚಿದೆ. ತೆಂಗು, ಅಡಿಕೆ ಬೆಳೆಗಳಲ್ಲಿ ಇಳುವರಿ ಕೊರತೆ ಉಂಟಾಗಿದ್ದು ತೆಂಗಿನ ಮರಗಳಿಗೆ ನುಸಿ ರೋಗ ಉಲ್ಬಣವಾಗಿದೆ. ತೋಟಗಾರಿಕಾ ಬೆಳೆಗಳಿಗೆ ಹಾಗು ಇತರ ಎಲ್ಲಾ ಬೆಳೆಗಳಿಗೂ ವಿಮೆ ಕಟ್ಟದಿದ್ದರೂ ಪರಿಹಾರ ಒದಗಿಸಬೇಕು. ಇಲಾಖೆ ಮಟ್ಟದಲ್ಲಿ ತೋಟಗಾರಿಕಾ ಬೆಳೆಗಳಿಗೆ ವಿಮೆ ಕಟ್ಟಲು ಹೆಚ್ಚಿನ ಆಸಕ್ತಿ ವಹಿಸಿಲ್ಲ. ಪ್ರಕೃತಿ ಮುನಿಸಿನಿಂದ ತೋಟಗಾರಿಕಾ ಬೆಳೆಗಳ ನೆರವಿಗೆ ಸರ್ಕಾರ ಧಾವಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

### ನಾಲೆಗಳಿಗೆ ನೀರು: ಸ್ವಲ್ಪ ಸಮಾಧಾನ

ಮಳೆ ಕೊರತೆಯಿಂದಾಗಿ ಜಿಲ್ಲೆಯ ಬಹುತೇಕ ಕೆರೆಕಟ್ಟೆಗಳು ಬತ್ತುತ್ತಿರುವುದು, ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತತ್ವಾರ ಎದುರಾಗುತ್ತಿರುವ ಹೊತ್ತಿನಲ್ಲಿ ಹೇಮಾವತಿ ಜಲಾಶಯದಿಂದ ನೀರು ಹರಿಸುತ್ತಿರುವುದು ಸ್ವಲ್ಪ ಸಮಾಧಾನ ಮೂಡಿಸಿದೆ. ಹೇಮಾವತಿ ಜಲಾಶಯವು 37.103 ಟಿಎಂಸಿ ಗರಿಷ್ಟ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಭಾನುವಾರ 31.087 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದ ಗರಿಷ್ಟ ಮಟ್ಟ 2,922 ಅಡಿಯಾಗಿದ್ದು, 2915.47 ಅಡಿ ನೀರಿದೆ. 1721 ಕ್ಯೂಸೆಕ್ ಒಳ ಹರಿವು ಇದ್ದು, ನದಿಗೆ 1800, ಎಡದಂಡೆ ನಾಲೆಗೆ 3000 ಹಾಗು ಬಲದಂಡೆ ನಾಲೆಗೆ 300 ಕ್ಯೂಸೆಕ್ ನೀರು ಹರಿಸುತ್ತಿರುವುದರಿಂದ ಜಾನುವಾರುಗಳ ಕುಡಿಯುವ ನೀರಿಗೆ ಸಮಸ್ಯೆ ತಗ್ಗಿದೆ.

# ತೆಂಗು ಬೆಳೆಗಾರರಿಗೆ ವಿಮೆ ಸೌಲಭ್ಯ ಕಲ್ಪಿಸಲು ಸಂಸದರ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ತೆಂಗು ಬೆಳೆಗಾರರ ಹಿತದೃಷ್ಟಿಯಿಂದ ತೆಂಗು ಬೆಳೆಗೆ ಸಮಗ್ರ ವಿಮಾ ರಕ್ಷಣೆ ಒದಗಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಇತ್ತೀಚೆಗೆ ನಡೆದ ಲೋಕಸಭೆ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿರುವ ಅವರು, ಪ್ರಕೃತಿ ವಿಕೋಪ, ಅತಿವೃಷ್ಟಿ, ಚಂಡಮಾರುತ, ಕೀಟ ಹಾಗು ರೋಗ ಬಾಧೆಯಿಂದ ತೆಂಗು ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಬೆಳೆಗಾರರಿಗೆ ಎದುರಾಗುತ್ತಿರುವ ನಷ್ಟವನ್ನು ಸಮರ್ಥವಾಗಿ ಎದುರಿಸಲು ಇನ್ನಷ್ಟು ಪರಿಣಾಮಕಾರಿ ಹಾಗು ಸಮಗ್ರ ವಿಮಾ ರಕ್ಷಣೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಿ, ರೈತರಿಗೆ ಸುಲಭವಾಗಿ ದೊರೆಯುವ ಹಾಗು ರೈತಸ್ನೇಹಿ ವಿಮಾ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಆಗ್ರಹಿಸಿದ್ದಾರೆ.

ಹಾಸನ ಜಿಲ್ಲೆಯ ಸಾವಿರಾರು ರೈತರ ಬದುಕಿಗೆ ತೆಂಗು ಬೆಳೆ ಪ್ರಮುಖ ಆಧಾರವಾಗಿದ್ದು, ಬೆಳೆ ನಷ್ಟವು ರೈತರ ಆದಾಯದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಆದ್ದರಿಂದ ರೈತರ ಬೆಳೆ, ಆದಾಯ ಮತ್ತು ಜೀವನೋಪಾಯದ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

# ಇಂದಿನಿಂದ ಮೋಡ ಬಿತ್ತನೆ

ಬೆಂಗಳೂರು: ಮಳೆ ಕೊರತೆಯಿಂದ ಎದುರಾಗಿರುವ ಸಮಸ್ಯೆ ನಿವಾರಣೆಗೆ ರಾಜ್ಯದ ಹಲವೆಡೆ ಸೋಮವಾರದಿಂದ (ಆ. 24) 60 ದಿನ ಮೋಡ ಬಿತ್ತನೆ ಮಾಡಲಾಗುವುದೆಂದು ಜಲ ಸಂಪನ್ಮೂಲ ಸಚಿವ ಎನ್‌ಚಲುವರಾಯ ಸ್ವಾಮಿ ತಿಳಿಸಿದರು.

ರಾಜ್ಯದ ವಿವಿಧ ಪ್ರದೇಶಗಳಲ್ಲಿ ಒಟ್ಟು 200 ತಾಸಿನಷ್ಟು ಮೋಡ ಬಿತ್ತನೆ ಮಾಡಲಾಗುತ್ತದೆ. ಇದಕ್ಕೆ 28.52 ಕೋಟಿ ವೆಚ್ಚವಾಗುತ್ತಿದೆ.

# ಅಗ್ನಿ



**ಪೆಟ್ರೋಲ್** ವಾಸ್ನೆ ಮೂಗಿಗೆ ''ಗಫ್'' ಅಂತಾ ಬಡೀತು! ಐದಾರು ಕ್ಯಾನ್‌ಗಟ್ಲೆ ಮನೆ ಸುತ್ತಮುತ್ತ ಉಗ್ಗಿ ಬಾಗಿಲು ಕಿಟಕಿ ಸಂಧಿನಿಂದ ಧುಭುಧುಭು ಪೆಟ್ರೋಲ್ ಸುರಿವಿದ ತೀರಿಗೆ ಅದು ಹಳ್ಳ ಕೊಳ್ಳವಾಗಿ ಮನೆಯೊಳಕ್ಕೆ ಜಗ್ಗಿ ಹರಿದು ಬಂತು! ಮಲಗಿದ್ದ ಹಾಸಿಗೆ, ದಿಂಬು, ಹೊದಿಕೆಯೆಲ್ಲ ಪೆಟ್ರೋಲ್‌ನಲ್ಲಿ ಮುಳುಗೆದ್ದವು!

ಹೊರಗಿನಿಂದ ಐದಾರು ಜನರ ಪರಿಚಿತ ಧ್ವನಿಯ ಗುಸು ಗುಸು ಪಿಸು ಪಿಸ ಮಾತುಗಳು ಕಿವಿ ತುಂಬಿ ಬಂದವು. ಅಗಾ ಇಗಾ ಅನ್ನೊದೊಳಗಾಗಿ ಅಗ್ಗಿ ಪಿಲ್ಲಗಿಸಿ ರೋಷದಿ ಎಸೆದೇ ಬಿಟ್ಟರು ದುಷ್ಟರು. ಇಡೀ ಮನೆ ಮನೆನೇ ಧಗ್ ಗುಟ್ಟಿತು! ಆ ಕತ್ತಲ ರಾತ್ರಿಲಿ ಮುಗಿಲೆತ್ತರ ಉರಿ ಎದ್ದಿತು! ಕೌರವರು ಅರಗಿನ ಮನೆಗೆ ಬೆಂಕಿ ಕೊಟ್ಟಂತೇ ನನ್ ಹೆಂಡ್ತಿ, ಮೂರು ಜನ ಮಕ್ಕಳು ಎಚ್ರ ತಪ್ಪಿ ಮಲಗಿದ್ದಲ್ಲೇ ನಾ ಎಬ್ಬಿಸುದ್ರೊಳಗಾಗಿ ಹಂಗೆ ಸುಟ್ಟು ಭಸ್ಮವಾದ್ರು! ನನ್ನದು ಅರಣ್ಯರೋಧನೆ ಯಾಯಿತು! ಕೊನೇ ಪಕ್ಷ ನಾನೊಬ್ನೆ ಏನನ್ನ ಮಾಡಿ ಬದುಕಿ ಬಿಡಬೇಕೆಂಬ ಛಲದಿ ಗವಾಕ್ಷಿಲಿ ತೂರಿ ಹೊರ ಬಿದ್ದೆ!

ಆ ಮನೆಹಾಳ್ರು ನನ್ನ ನೋಡಿದ್ರು ಅಲ್ಲಿಗೆ ಕತ್ತಿ, ಮಚ್ಚು, ಲಾಂಗು, ಕಲ್ಲು, ಹಾರೆಗಳನ್ನು ಆ ಅವೇಳೆ ರಾತ್ರಿಯಲ್ಲೂ ಎಸೆದ್ರು, ರವ್‌ವಾಟ್ರಾಗ ತಪ್ಸಿ ಗಂಡೆ. ನಾನಾಗೋ ಮರಗಟ್ಟಿದ ಮರ, ಉಕ್ಕಿನ ತಂತಿ, ಕಬ್ಬಿಣದ ಕಾಲು-ಕೈ ಆಗಿದ್ದೆ! ಮಾಳಿಗೆ ಮನೆ ಮೇಲಿಂದ ಒಂದೇ ಉಸ್ರಿಗೆ ಜಿಗಿದೆ! ಎದ್ದೆನೋ ಬಿದ್ದೆನೋ ಎಂಬಂತೆ ರಿಜುಲು ಗಿಡಗಳ ಪೊದೆಯೊಳಕ್ಕೆ ಪೀಕಿದೆ.

ನನ್ನ ಬೆನ್ನು ಬಿದ್ದು ಅವರೆಲ್ಲ ಕೆಡಾಬಡಾ ಓಡೋಡಿ ಅಟ್ಟಿಸಿಗೊಂಡು ಬಂದ್ರು. ಅವರು ಬಿಡುವಲ್ರು, ನಾ ನಿಲ್ಲುವಲ್ಲೇ ಉಬ್ಬಾಸ ಆಯಾಸ ಬಿದ್ಕೊಂತಾ ಸಂಗಿನ ಹೊತ್ತು ಓಡತೊಡಗಿದೆ.

ನಾ ಕತ್ಲಲ್ಲಿ ಇದ್ದಕ್ಕಿದ್ದಂತೆ ತಪ್ಸಿ ಗೊಂಡೆ! ಪೊದೆ ಮರೆಗೆ ನಿತ್ಕೊಂಡು ತ್ವೊಟ್ಗು ಉಬ್ಬಾರ್ಸಿಗೊಂಡೆ. ಅಲ್ಲಿಗೆ ದೆವ್ವ್, ಭೂತ, ಪಿಶಾಚಿ, ಕೊಳ್ಳಿದೆವ್ವ್ ಪಂಜ್ರೆ ಏಳು ಎಡೆ ಸರ್ಪ, ಹೆಬ್ಬಾವು ನನ್ ಮೇಲೆ ಎಲ್ಲಾ ಒಟ್ಟಿಗೆ ಏರೇರಿ ಬಂದ್ವು! ನಾ ಅಲ್ಲೇ ಚಿಲಿಚಿಲಿ ಉಚ್ಚೆ ಹೊಯ್ಕಂಡು ನಿಕ್ಕರಿನಲ್ಲಿ ಬುತ್ತಿ ಕಟ್ಗೊಂಡೆ. ಅವೂ ನನ್ನ ಬೆನ್ನು ಹತ್ತಿದವು! ಮತ್ತೆ ನಾ ಓಡತೊಡಗಿದೆ. ಅವು ಏಕದಮ್ಮಾಗಿ ನನ್ನ ಮುಂದೆ ಬಂದು ನಿಂತವು. ಅಬ್ಬಾ! ಧೈರ್ಯ ಮಾಡಿ ಅಲ್ಲೆ ಇದ್ದ ರಿಜಿಲು ಗಿಡವನ್ನು ಬುಡಸಮೇತ ಕಿತ್ತಿಗೊಂಡು ಅವುಗಳಿಗೆ ಬಡಿಯಲು ಹೋದೆ! ಅವು ಹಿಂದಿಂದೆ ಸರಿದವು!

''ಏ ಇನ್ನೊಂದು ಹೆಜ್ಜೆ ಮೊಂದಿಟ್ರೆ ನಿಮ್ನ ಇಲ್ಲವಾಗಿಸಿ ಬಿಡ್ತೀನಿ'' ಎಂದು ಹಲ್ ಹಲ್ ಮಸೆದು ಜೋರಿಲೇ ಏರೇರಿ ಹೋದೆ. ನಾ ಶ್ಯಾನೇ ಹೊತ್ತು ಉಸಿರು ಬಿಗಿ ಹಿಡಿದು ಸಿಕ್ಕಾಪಟ್ಟೆ ಅವುಗಳೊಂದಿಗೆ ಹೋರಾಡುತ್ತಲೇ ಇದ್ದೆ.

''ರೀ ರೀ ಎಡಗಡೆ ಪಕ್ಕೆಗೆ ಸರೀರ್ರೀ '' ಎಂದು ನನ್ನವಳು ನನ್ನ ತಿವಿದಾಗ್ಲೆ ನನ್ಗೆ ಎಚ್ರವಾಗಿದ್ದು!

ಎದ್ದು ನೋಡ್ತೀನೀ ನನ್ನ ಮೂರು ಜನ ಮಕ್ಳು, ನನ್ ಹೆಂಡ್ತಿ ಲಕ್ಷ್ಮಿ ಹೆದ್ರಿ ಗೋಡೆಗಂಟಿದ ಹಲ್ಲಿಯಂಗೆ ಲೋಚಗುಟ್ಟುತ್ತಿದ್ದರು! ನಾನೋ ಅಂಥಾ ತಂಪು ಹೊತ್ತಿನಲ್ಲೂ ಫ್ಯಾನುಗಾಳಿಯಲ್ಲೂ ಜಲ ಜಲಾ ಬೆವತು ಭಯಬಿದ್ದು ಬಸವಳಿದು ಕೈ ಸನ್ನೆ ಬಾಯಿ ಸನ್ನೇಲಿ ನೀರು ಕೇಳಿದ್ದೆ! ಅಬ್ಬಾ! ಗಂಟಲು ಒಣಗಿ ಬಂದಿತ್ತು! ಬೆಚ್ಚಿಬಿದ್ದೆ. ಚೆಂಬಿನಾ ತುಂಬಾ ನೀರು ಗಟಗಟನೆ ಸೆಂಡಿದೆ. ರವ್‌ವಾಟು ಉಬ್ಬಾರಿಸಿಗೊಂಡೆ.

''ಏ ಕೆಟ್ ಕನಸು ಬಿದ್ದಿತ್ತಾ? ಏನ್ ಹಲ್ ಹಲ್ ಕಡಿದು ಹೇ ಹೇ ಒಂದ್ ಹೆಜ್ಜೆ ಮುಂದಿಟ್ರೆ ನಿಮ್ನ ಇಲ್ಲವಾಗ್ಸಿ ಬಿಡ್ತೀನಿ ನೋಡ್ರಿ! ಆಹಾ ಆಹಾ. ಹಿಂಗೇ ತಡಾಯಿ ಮುಂದ್ಲು ಬಂದ್ಬಿಟ್ರೆ ನಮ್ನ ಓಡ್ಸಿ ಗೊಂಡು, ಹೆದ್ರಿಸಿಗೊಂಡು, ಬಂದ್ಬಿಟ್ರೆ ಎಂದು ! ಬಲು ಸೆಡ್ವಿಲಿ ಕೂಗಾಡ್ತೀದ್ರಿ, ನಾ ನಿಮ್ನ ಅಲುಗಾಡ್ಸಿ ಬಿಟ್ಟೆ ನೋಡ್ರಿ! ಆವಾಗ ಸುಮ್ನಾದ್ರಿ ಏನ್ರಿಇದೆಲ್ಲ? ನೀವೇ ಹಿಂಗ್ಯಾದ್ರೆ? ನಾವೆಂಗ್ರಿ?'' ಎಂದಿನಂತೆ ಕಣ್ಣೀರ್ಲಿ ಕೈತೊಳೆದ್ಲು.

''ಡ್ಯಾಡಿ ಮದ್ಲು ಯೀ ಮನೇನಾ ಖಾಲಿ ಮಾಡಿ, ಊರೊಳಗೆ ಹೋಗಿ ಬಿಡ್ಯಾನ್ರಿ! ಒಂಟಿ ಮನೆ, ಪಕ್ಕದಲ್ಲಿ ಸುಡುಗಾಡು ಹೆಣ ಹೂಳಾದು, ಕೀಳಾದು, ಸುಡಾದು! ಅಬ್ಬಾ! ಹಗಲು ಹೊತ್ತು ಜನ್ರು ಅತ್ರೆ ರಾತ್ರಿ ಹೊತ್ತು ಹೆಣಗಳೆದ್ದು ಅಳಾದು! ಥೇ ಥೇ ಬಾಗಿಲು ಕಿಟಕಿ ಬಡಿಯೋ ಸದ್ದು ಗದ್ದಲ ಮೆರ್ರ್ ಗುಟ್ಟೋ ಗಾಳಿ! ಮಲ್ಗಿದ್ರೆ ಹಗಲು, ರಾತ್ರಿ ಬರೀ ಕೆಟ್ ಕೆಟ್ ಕನಸುಗಳು ಆಹಾ! ಎಂಥಲ್ಲಿ ಮನೆ ಮಾಡ್ಡಿಟ್ಟೆ ಡ್ಯಾಡಿ? ಯೀವತೆ ಖಾಲಿ ಮಾಡ್ ಬಿಡ್ಯಾನ್ರೀ''. ಮಗಳು ಜೊತೆಗೆ ಉಳಿದವರೂ ಕಣ್ಣೀರು ಒರೆಸಿಗೊಂಡರು.

ಎಲ್ರು ಭಯದಿಂದ ಗಡಗಡನೆ ನಡುಗುತ್ತಿದ್ರು ಹೊರಗಿನ ಸುಯ್ ಗುಟ್ಟೋ ಗಾಳಿ ಜೊತೆಗೆ ಗುಟ್ಟೆಗಳ ಕಡೆಯಿಂದ ಕಪ್ಪಾಲಕ್ಕಾ, ಗುಳ್ಳೆನರಿ, ತೋಳ, ಕತ್ತೆ ಕಿರುಬ, ಗೂಬೆ, ಸೀಳುನಾಯಿ ಊರು ಕೇರಿ ನಾಯಿಗಳಾ ಕೂಗೂ ಮೇಲಿಂದಾ ಮೇಲೆ ಕಿವಿಗಪ್ಪಳಿಸಿ ಇನ್ನು ನಡಕವನ್ನು ದ್ವಿಗುಣಗೊಳಿಸಿದವು. ಅಬ್ಬಾ! ರಾತ್ರಿಯಿಷ್ಟು ಭಯಾನಕವಾಗಿರುತ್ತದೆಂದು ಈ ಮೊದಲು ಅನಿಸಿರಲಿಲ್ಲ. ಹಿಂದೆ ಜನ್ರು ಮನೆ ಮಠಗಳಿಲ್ಲದಾಗ, ಬೆಂಕಿ ಕಂಡು ಹಿಡಿಯದೆ ಇದ್ದಾಗ ಹೇಗೆ ಬದುಕಿರಬಹುದೆಂದೂ, ಕ್ಷಣ ಚಿಂತಿಸಿದೆ! ಮೈಕೂದ್ಲು ಜಮ್ಮೆಂದವು!

ಅವಸರ ಅವಸರವಾಗಿ ಮನೆ ಮಾಡಿದ್ದು, ಕಡಿಮೆ ಬಾಡಿಗೆ, ಅಡ್ವಾನ್ಸ್ ಇಲ್ಲ ಕಛೇರಿಗೆ ಹತ್ತಿರ, ಜನದಟ್ಟಣೆಯಿಲ್ಲ ಏನೆಲ್ಲ ಇಲ್ಲಗಳ ಮಧ್ಯೆ ನಾವೆಲ್ಲ ಇಲ್ಲವಾಗುವ ಪರಿಸ್ಥಿತಿ ನಮಗೀಗ ಎದುರಾಗಿದೆ. ಈಗ ನಿತ್ಯ ಎದೆಯಲ್ಲಿ ಅವಲಕ್ಕಿ ಪವಲಕ್ಕಿ ಡಾಮ್ ಡೂಮ್ ಕೈ ಕೊಟ್ರೋ ಎಂದು ಯಾರೋ ಕುಟ್ಟಿದ ಅನುಭವವಾಗುತ್ತಿದೆ! ಕೆಟ್ಟ ಕನಸಿನಿಂದಾಗಿ ಇಷ್ಟವಾದ ನಿದ್ರೆ ನಿತ್ಯ ದೂರ ಸರಿದು, ತಲೆ ದೆವ್ವ್‌ಗಳ ಅಡ್ಡೆಯಾಗಿದೆ.

''ಅಯ್ಯೋ ಪಾಪ! ನಿದ್ರೆಯಿಲ್ಲದೆ ವಿಲ ವಿಲ ಒದ್ದಾಡುತ್ತಿದ್ದಾರೆ! ತಲೆ ಕೆಟ್ಟು ಗೊಬ್ರವಾಗಿದೆ! ಹೆದ್ರಿ ಜಲ ಜಲ ಬೆವತು ಗಡಿಗೆ ಮೀನಾಗ್ಯರೇ'' ಎಂದು ಬೆಳಕರಿವುದೆನನ್ನಾ ತಡವಾಗಿದೆಯೇ? ಮೈಕೈಯೆಲ್ಲ ನೋವಾಗಿ, ತಲೆಯೆಲ್ಲ ಭಾರವಾಗಿ, ಕೈಕಾಲುಗಳೆಲ್ಲ ಸೋತು ಸೊರಗಿ ಹೋಗಿ ದ್ದವು! ಏಳಲಾರದೆ ಎದ್ದು ಮನಸ್ಸಿಲ್ಲದ ಮನಸ್ಸಿನಲ್ಲಿ ನಿತ್ಯ ಕರ ಮುಗಿಸಿ, ಕಛೇರಿಗೆ ಹೊರಡಲು ಅನುವಾದೆ.

ನನಗೆ ಬಲು ಇಷ್ಟವಾದ ಉಪ್ಪಿಟ್ಟನ್ನು ಬಲು ಕಷ್ಟ ಪಟ್ಟು ನಾಲ್ಕು ಮುಟುಗಿ ನುಂಗಿದೆ! ನೀರಿಳಿಯದ ಗಂಟಲೊಳಗೆ ಬಲವಂತದಿ ಗಂಜಿ ತುರುಕಿದಂತಾಗಿತು! ಮೆತ್ತಾಗೆ ಬಾಂಬೆ ರವೆಯಲಿ ಮಾಡಿದ ಉಪ್ಪಿಟ್ಟು ಗಂಟಲಿಂದ ಹೊರಗೆ ಬರತೊಡಗಿತ್ತು! ಮೊದಲೇ ಸುಸ್ತಾಗಿದ್ದೆ! ಇನ್ನು ಕೇಳಬೇಕೆ? ಬಲ ಹೋದ ಕಾಲಕ್ಕೆ ಗಂಜಿ ನೀರೂ ವಾಂತಿಯಾಗುವುದು.

''ಲಕ್ಷ್ಮಿ ಒಂದು ಗ್ಲಾಸು ಹಾಲು ಕೊಟ್ಟಿಡು! ಹಂಗೇ ಗೌಡಪ್ಪನಿಗೆ ಉಪ್ಪಿಟ್ಟು, ಟೀ ಕೊಡು! ನನ್ನ ಆಫೀಸ್ಸಿಗೆ ಕರ್ಕೊಂಡೋಗಾಕೆ ಬಂದಾನೆ''. ''ಗೌಡಪ್ಪ ಬಾ! ಕೂತುಗಾ ಹೋಗಾನು ಬಾ! ಯೀವತ್ತು ಶನಿವಾರ ಅಷ್ಟೊಂದು ಕೆಲ್ಸವಿರಲ್ಲ ಬಾ!'' ಎಂದೆ.

ಮಡದಿ ಮಣೆ ಒಳಗಿಂದ ನನ್ಗೆ ಹಾಲು, ಗೌಡಪ್ಪನಿಗೆ ಉಪ್ಪಿಟ್ಟು, ಟೀ, ಬಿಸ್ಕತ್ತು ತಂದಿಟ್ಟು ಹೋದಳು. ಹಾಲನ್ನು ಎರಡು ಮೂರು ಗುಟುಕು ಗುಟಕರಿಸಿದೆ! ಕಹಿ ಕಹೀ ! ಲಕ್ಷ್ಮಿ ಹಾಲು ಸರಿಯಿದೆಯಾ? ಹಲ್ಲಿ ಬಿದ್ದೈತಂಗಾ ನೋಡಿದೆಯಾ?

''ಹಾಲಿಗೇನಾಗಿಲ್ಲ ರೀ ಅದ್ರಲ್ಲಿ ಹಲ್ಲಿ ಏನೂ ಬಿದ್ದಿಲ್ಲ ಸರಿಯಾಗಿಯೇ ಇದೆ! ನಿಮ್ಮ ಬಾಯಿ, ಮನಸು, ಸರಿಯಿಲ್ಲ'' ಕಡ್ಡಿ ಎರಡು ತುಂಡು ಮಾಡಿದಂಗೆ ಅಂದ್ಲು.

ರವ್‌ವಾಟು ಹೊತ್ತು ಹಂಗೇ ಕೋಳಿ ತೂಗಡಿಸಿದಂಗೆ ತಲೆ ಜೋತ್ಹಾಕಿ ಕುಂತೆ.''ಸಾರ್‌ನನ್ದು ಆಯ್ತು! ಯಿನ್ನು ಹೋಗಾನ್ರೇ ..'' ಗೌಡಪ್ಪ ಎದ್ದು ನಿಂತ.

ಲಕ್ಷ್ಮಿ ನಾ ಬರತೀನಿ ಬಾಗಿಲು ಹಾಕ್ಕೋ ಎಂದು ನಾವಿಬ್ಬರೂ ಗಾಡಿಯಲ್ಲಿ ಕುಂತೆವು. ಗಾಡಿ ಹಗರಿ ಬೊಮ್ಮನಹಳ್ಳಿಯ ಮಾಲವಿ ಡ್ಯಾಮಿನ ಬಳಿಯಿರುವ ನಮ್ಮ ಕಛೇರಿ ಕಡೆಗೆ ಎಂದಿನಂತೆ ಹೊರಟಿತು.

ಗೌಡಪ್ಪ ಯಾಕೋ ಈವತ್ತು ಸಪ್ಪಗೆ, ತೆಪ್ಪಗೆ ಏನೋ ಕಳಕೊಂಡಂತೆ ಇದ್ದಿಯಾ? ಏನಂತಾ ಹೇಳು ನನಗೂ ಎಂದೆ. ''ಇಲ್ಲ ಸಾರ್! ಏನಿಲ್ಲ ಅಂತಾದೇನಿಲ್ಲ'' ಎಂದು ಗೌಡಪ್ಪ ತೆಪ್ಪಗೆ ಗಾಡಿ ನಡೆಸುತಿದ್ದ.

ಜಿಮಿಟಿದ್ರು ಮಕದಲ್ಲಿ ರಕ್ತವಿಲ್ಲ. ನನ್ದು ನನಗಾಗಿರುವಾಗ ಯಿನ್ನು ಗೌಡಪ್ಪನದೇನು ಬಿಡು! ಎಂದು ತೆಪ್ಪಗೆ ಕುಳಿತೆ. ಕಛೇರಿ ಮುಂದಿನ ಹೋಟೆಲ್ ಮಾಲೀಕ ಕೊಟ್ರಯ್ಯ ಸ್ವಾಮಿ ನಿತ್ಯ ಸಲಾಮು ಹೊಡೆಯುತ್ತಿದ್ದವನು ಈವತ್ತು ನನ್ನ ಕಂಡೂ ಕಾಣದಂಗೇ ಅಲ್ಲೇ ಗಲ್ಲಾಪೆಟ್ಟಿಗೆ ಮೇಲೆ ಕುಂತಲ್ಲೇ ಯಿದ್ದ.

ಕಛೇರಿ ಮುಂದಿದ್ದ ಐದಾರು ನಾಯಿಗಳು ನನ್ನ ಕಂಡೊಡನೆ ನಿತ್ಯ ಬಾಲ ಬಡಿಯುತ್ತಾ ಬರುತಿದ್ದವು ಈವತ್ತು ಹತ್ತಿರ ಸುಳಿಯಲಿಲ್ಲ. ಬೇಲಿ ಮರೆಯ ತೊಂಡಿಕ್ಯಾತ ನನ್ನ ಕಂಡು ತಲೆ ಗುಣಿಕಿಕ್ಕಿ ಮರೆಯಾಯಿತು. ಕಛೇರಿ ತೆರೆದೊಡನೆ ಕರಿಬೆಕ್ಕೊಂದು ಒಳಗಿಂದ ಚೆಂಗನೆ ಹೊರಕ್ಕೆ ಜಿಗಿದು ಬಂತು. ಅಲ್ಲೇ ಇದ್ದ ಕರಿ ಹಲ್ಲಿಯೊಂದು ಲೋಚಗುಟ್ಟುತ್ತಾ ಗೋಡೆ ಮೇಲಿಂದ ಸರ್ರನೇ ಕೆಳಗಿಳಿಯಿತು! ಬಲಗಾಲಿಟ್ಟು ಕೊಠಡಿಗೆ ಹೋಗಿ ಕೆಲಸದಲ್ಲಿ ಮಗ್ನನಾದೆ.

ಎರಡು ತಾಸು ಕಳೆಯಿತು. ಕುರ್ಚಿಯಿಂದ ಯಾಕೋ ಮೇಲೇಳಲು ಮನಸ್ಸಾಗಲಿಲ್ಲ. ಅಷ್ಟರಲ್ಲಿ ಕಛೇರಿ ಗುಮಾಸ್ತ ಮೃತ್ಯುಂಜಯ ಎಂದಿನಂತೆ ತಡವಾಗಿ ಬಂದವನೇ ನನ್ನ ಕೊಠಡಿಗೆ ಮುಳ್ಳು ಹಂದಿಯಂತೆ ನುಗ್ಗಿ ಬಂದು ''ಸಾರ್ ನೀವು ಕೇಳುತಿದ್ದ ಹಣ ಎಂದು ಅವಸರದಿ ಎದೆ ಜೇಬಿಗಿಟ್ಟ ಏನು ಎಂದು ಎಡಗೈಲಿ ಸಾವಿರದ ಎರಡು ಐದು ನೂರರ ಆರು ನೋಟುಗಳನ್ನು ಟೇಬಲ್ ಮೇಲಿಟ್ಟೆ! ಅಷ್ಟರಲ್ಲಿ ದೇವಾನು ದೇವತೆಗಳಂತೆ ಐದು ಜನ ಪೊಲೀಸ್ ಅಧಿಕಾರಿಗಳು ನನ್ನ ಸುತ್ತ ಪ್ರತ್ಯಕ್ಷರಾಗಿ ನನ್ನ ಎದ್ದು ನಿಲ್ಲಲು, ಅಲುಗಾಡದಂತೆ ಸೂಚಿಸಿ ನನ್ನ ಜೇಬು, ಡ್ರಾ, ಬೀರು, ಟೇಬಲ್, ಮೊಬೈಲ್‌ನ್ನ ವಶಕ್ಕೆ ಪಡೆದು ತಪಾಸಣೆಗೆ ಮುಂದಾದರು.

ನಾ ಆಕ್ಷಣ ವಾತಾಳ ಕಂಡೆ, ಬಾಯಿಯೆಲ್ಲ ಒಣಗಿ. ಕೇಡು ಧೈರ್ಯದಿ ಸಾರ್ ನಾನೊಬ್ಬ ಬರಹಗಾರ 40 ಪುಸ್ತಕಗಳನ್ನು ಪ್ರಕಟಿಸಿ, ಮಾರಿದ್ದೇನೆ. ಅದರ ಹಣ ನನಗೆ ಇವನು ಅರವತ್ತು ಸಾವಿರ ನೀಡಬೇಕು! ಅದನ್ನು ಕೊಡಲು ಈಗ್ಗೆ ಮೂರು ತಿಂಗಳಿಂದ ನಿತ್ಯ ಕೇಳುತ್ತಾ ಬಂದಿದ್ದೇನೆ. ಅದರಿಂದ ತಪ್ಪಿಸಿಕೊಳ್ಳಲು ಈ ಕುತಂತ್ರ, ನನ್ನ ನಂಬಿ, ಇದು ಸತ್ಯ ಕಥೆ.

''ಐ ಸೇ ಡೋಂಟ್ ಟಾಕ್ ನಿನ್ನ ಮೇಲೆ ದೂರಿದೆ. ನಮ್ ಡ್ಯೂಟಿ ಮಾಡಲು ಬಿಡಿ! ನಾನೊಬ್ಬ ಕಳ್ಳ, ಸುಳ್ಳ, ವ್ಯಭಿಚಾರಿ, ಮೋಸಗಾರ, ಕಪಟಿ, ವಂಚಕ, ಲಂಚಕೋರ, ಮೈಗಳ್ಳ, ಕುಡುಕ ಹಡುಕ ಇತ್ಯಾದಿ ಯೆಂದು ಯಾರಾದರೊಬ್ಬರು ಈತನಕ ಒಪ್ಪಿಕೊಂಡ ನರಪಿಳ್ಳೆನ ನಾವು ಕಂಡಿಲ್ಲ! ಯೆಲ್ರು ಸತ್ಯ ಹರಿಶ್ಚಂದ್ರರೇ ಹೀಗೆ ಸಿಕ್ಕಿ ಹಾಕಿಕೊಳ್ಳುವ ತನಕ. ಐ ಸೆ ಕಾಂಟ್ ಟಾಕ್ ..'' ಅವರೆಲ್ಲ ಕೂಗಾಡಿ ವದ್ರಾಡಿ ತಳ್ಳಿ ನೂಕಿ ಹೊಡೆಯುಲು ಬಡಿಯಲು ಮೈ ಮೇಲೆ ಏರೀರಿ ಬಂದ್ರು. ನಾ ಒಬ್ನೇ ಅವರು ಅಷ್ಟು ಜನ್ರು ಅವಕ್ಕಾದೆ.

ನನ್ನ ಕಛೇರಿಯಲ್ಲಿ ಇರಾದೆ ನಾವು ಏಳೆಂಟು ಮಂದಿ! ಅವರೆಲ್ಲ ಹಂದಿಗಳಂಗೇ ಚರಂಡಿಯಲ್ಲಿ ತಂಪಾಗಿ ಸೊಂಪಾಗಿ ಗುಂಪಾಗಿ ನಿಂತು ಮಿಕಿ ಮಿಕಿ ಕಣ್ಣುಕಾಲು ಬಿಡುವಂತೆ ನನ್ನ ನೋಡುತ್ತಾ ನಿಂತರು. ಅರವತ್ತು ಎಕರೆ ಕಾಡಿನ ಮಧ್ಯೆ ಹುಡುಗೋಸಿಯಂಗೆ ತಲೆಎತ್ತಿ ನಿಂತಿದ್ದ ಕಟ್ಟಡದ ಮಧ್ಯೆ ನೂರಾರು ಮರಗಿಡ ಬಳ್ಳಿ ತರುಲತೆಗಳೂ ಉಸಿರಾಡದೆ ಗರಬಡಿದಂತೆ ನನ್ನ ಕೆಕ್ಕರಿಸಿ ಗೊಂಡು ನೋಡುತ್ತಾ ನಿಂತವು.

ಸಾರ್ ಮೂರು ತಾಸಿನ ಮೇಲ್ಯಾಗಿದೆ ನಾ ನೇಚರ್ ಕಾಲಿಗೆ ಹೋಗ್ಬೇಕು ಎಂದೆ.

''ರೀ ಇವನ ಶರಟು, ಪ್ಯಾಂಟು ಬಿಚ್ಚಿಸ್ರೀ ಎಲ್ಲಾ ಚೆಕ್ ಆಫ್ ಮಾಡಿ, ಇವನ್ಹಿಂದೆ ಇಬ್ರು ಹೋಗಿ ನೇಚರ್ ಕಾಲ್ ಮಾಡ್ಸಿ ಗಂಡು ಬನ್ರೀ'' ದೊಡ್ ಸಾಹೇಬ್ರು ಅಂದ್ರು.

ನನ್ನ ಹುಟ್ಟುಬಟ್ಟೆ ಮಾರು ಬಟ್ಟೆಲಿ ನಿಲ್ಸಿ ಖುಷಿಪಟ್ರು, ಇದಕ್ಕಿಂತ ನರಕ ಇನ್ನಿಲ್ಲ ಸತ್ತು ಹೋಗಿ ಬಿಡಬೇಕು ಅನಿಸ್ತು. ಕಣ್ಣೀರು ಗಳಗಳನೆ ಹರಿದು ಅಲ್ಲೇ ಇದ್ದ ಮಾಲವಿ ಡ್ಯಾಮಿಗೆ ತುಂಬಿದವು. ಮಟಮಟ ಮಧ್ಯಾಹ್ನದಿಂದ ಹಿಡಿದು ಸಂಜೆಯ ನಸಿಕಿನವರೆಗೆ ಪಂಚನಾಮ ತಯಾರಿಸಿದರು. ಅದಕ್ಕೆ ಪ್ರಬಲ ಸಾಕ್ಷಿದಾರರಾಗಿ ಗೌಡಪ್ಪ, ಈರಣ್ಣ, ವಲೀ, ಶಂಕರಪ್ಪ ನಾಯ್ಕ ರುಜುಮಾಡಿ ಸಂಭ್ರಮಿಸಿದರು. ಅನ್ನ ತಿಂದ ಮನೆಗೆ ಹೆಂಡೆ ಒಗೆದು ಕೈ ತೊಳೆದು ಕುಂತರು.

ಇದು ಪರಮಾನ್ಯಾಯ, ಇವನು ತಾಯ್ಗಿಂಡ ನಂಬಿಕೆ ದ್ರೋಹಿ, ಚಾರಿತ್ರ್ಯಹೀನ, ಕ್ರೂರಿ, ಕಟುಕ, ನನ್ನಂಥವರನು ಹೀಗಾಗ್ಲೆ ಐದಾರು ಜನ್ನ ಹೆಣವನ್ನು ಹಿಂಗೆ ಎತ್ತಿದ್ದಾನೆ! ಯಿವ್‌ನ ದೂರು ನಂಬಿ ನೀವ್ ಹೇಗೆ ಬಂದೀರಿ? ನಾನು ರುಜು ಮಾಡಲ್ಲ. ನೀವು ಯೀಗಾಗ್ಲೆ ಐದಾರು ತಾಸಿಂದ ನನ್ನ, ಕಛೇರಿಯನ್ನ, ಮನೆಯವ್ರನ ಶೋಧಿಸಿದ್ದೀರಿ ಅವನ್ನಿತ್ತ ಪುಸ್ತಕದ ಹಣವನ್ನು ಬಿಟ್ಟರೆ ವಿಷ ಕುಡಿಯಲು ನನ್ನ ಹತ್ತಿರ ಬಿಡಿಕಾಸಿಲ್ಲ ಎಲ್ಲ ವಿವರಿಸಿ ಅಲ್ಲೇ ಬರೆದೂ ಕೊಟ್ಟೆ!

ಅಷ್ಟರಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಬಂದ್ರು, ''ಮಿಸ್ಟರ್ ಸತ್ಯಹರಿಶ್ಚಂದ್ರ ನೀವು ಹಳಿಯಾಳ, ಬಾಗಲಕೋಟೆಯಲ್ಲಿ ಡಿಪೋ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುವಾಗ ನಾನಲ್ಲಿ ಠಾಣಾಧಿಕಾರಿಯಾಗಿದ್ದೆ! ನಿಮ್ಮತನ, ಭಾಷಣ, ಜನಪ್ರಿಯತೆ ಗೊತ್ತು! ಇದೆಲ್ಲ ಏನಿಲ್ಲ, ಸುಮ್ಮೆ ಪೆಟ್ಟಿ ಕೇಸಷ್ಟೇ. ದೂರು ಬಂದಿದೆ! ನಮ್ಮ ರೀಯಾಕ್ಷನ್ ಅಷ್ಟೇ ನೀವು ನಾನ್‌ಕೋರ್ಪರೇಶನ್ ಎಂದು ಷರಾ ಬರೆದು, ಪಂಚನಾಮೆ ಡ್ರಾ ಮಾಡಿ. ಅರೆಸ್ಟ್ ಮಾಡಿ, ಜೈಲಿಗೆ ತಳ್ಳಬೇಕಾಗುತ್ತದೆ. ಬೀ ಕೇರ್ ಫುಲ್, ಇದೆಲ್ಲ ಸರ್ವಿಸ್ಸಿನಲ್ಲಿ ಕಾಮನ್. ವಿಶಿಷ್ಟ ಅನುಭವ. ಬನ್ನಿ ಪ್ಲೀಜ್ ರುಜು ಮಾಡಿ, ಜಾಸ್ತಿ ರಾದ್ಧಾಂತ ಮಾಡ್ಕೊಬೇಡಿ.''

ವ್ಯವಸ್ಥಿತವಾಗಿ ಖೆಡ್ಡಕ್ಕೆ ಬೀಳಿಸಿದರು. ಯಿನ್ನು ಮೀನ ಮೇಷ ಎಣಿಸುತ್ತಾ ಕುಳಿತಿರುವುದರಲ್ಲಿ ಅರ್ಥವಿಲ್ಲ ಯಿಡೀ ಜಗವೇ ರಣರಂಗ, ನನ್ನೊಂದಿಗೆ ಮೂರು ವರ್ಷದಿಂದ ಹರ್ಷದಿ ಇದ್ದ ಈ ನನ್ನ ಕೈ ಕೆಳಗಿನ ಯೀ ಐದಾರು ಸಿಬ್ಬಂದಿಯೆಲ್ಲ ಅವರ ಪರ ಸಾಕ್ಷಿದಾರರಾಗಿರುವಾಗ ಆ ದೇವರೂ ನನ್ನ ರಕ್ಷಿಸಲಾರ. ಅಲ್ಲಿದ್ದ ಹತ್ತಾರು ಮಂದಿಯ ಮುಖಗಳಗಿಬರಾಡಿದೆ ಅವರಿಗೆ ಮುಖಗಳೇ ಇರಲಿಲ್ಲ. ಕರುಣೆಯಿಲ್ಲದ ಕಟುಕರಂಗೇ ಕೈಯಲ್ಲಿ ಕತ್ತಿ, ಕುಡುಗೋಲು, ಗುರಾಣಿ, ಕೊಡ್ಲಿ, ಮಚ್ಚು ಹಿಡಿದೇ ನಿಂತಿದ್ದರು. ಯೀ ಚಕ್ರವ್ಯೂಹದಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ನಗುನಗುತ್ತಾ ಕೊರಳೊಡ್ಡಿದೆ.

**ಬಲು ಖುಷಿ ಖುಷಿಯಲಿ:** ನನ್ನನ್ನು ಪೊಲೀಸ್ ವ್ಯಾನಿನಲ್ಲಿ ಹೇರಿಕೊಂಡು, ನ್ಯಾಯಾಧೀಶರ ಬಳಿ ರಾತ್ರಿ ಹನ್ನೆರಡುವರೆಗೆ ಹಾಜರುಪಡಿಸಿದರು. ಅವರ ಪ್ರಶ್ನೆಗಳಿಗೆಲ್ಲ ಉತ್ತರಿಸುವ ಶಕ್ತಿ ವ್ಯವಧಾನ ನನ್ನಲ್ಲಿರಲಿಲ್ಲ. ಅತ್ತು ಅತ್ತು ಮಾಲವಿ ಡ್ಯಾಂ ತುಂಬಿಸಿ ತುಂಬಾ ನಿತ್ರಾಣಕ್ಕೆ ಬಿದ್ದಿದ್ದೆ. ನನ್ನ ಪರ ವಕೀಲರೂ ಜನರೂ ಅಲ್ಲಿದ್ದರು. ಅವರ ವಾದ ವಿವಾದ ಫೀ ಇತ್ಯಾದಿಯ ಮಧ್ಯೆ ನನ್ನನ್ನು ಜಿಲ್ಲಾ ಕಾರಾಗೃಹದ ಆಸ್ಪತ್ರೆಗೆ ತಳ್ಳಿದರು. ಅಲ್ಲಿ ಸುಕ್ಕಾಡಿ ಪರದೆ, ಮಂಚ, ತಡಿ, ದಿಂಬು, ಟೀವಿ, ಪೇಪರ್, ಟೇಬಲ್, ಕುರ್ಚಿ, ಇತ್ಯಾದಿ ಸವಲತ್ತುಗಳ ಕಂಡು ಬೆಚ್ಚಿ ಬಿದ್ದೆನಲ್ಲದೆ, ಅಲ್ಲಿ ನಾಲ್ಕು ಜನ್ರು ಆಪ್ತರಾದರು. ನಾ ಯಿಲ್ಲೇ ಸತ್ರೆ ಹೊರಲು ನೀವು ಬೇಕಲ್ಲ ಎಂದು ಅವರ್ನ ನಗಿಸಿದೆ.

ಅಂದು ರಾತ್ರಿ ಎಷ್ಟು ವಿಲವಿಲ ಒದ್ದಾಡಿದರೂ ನಿದ್ರೆ ಹತ್ತಲಿಲ್ಲ. ಒಂದು ಕಡೆಯಿಂದ ಕಛೇರಿಯವರನ ಕತ್ರಿಸಿ ಕತ್ರಿಸಿ ತುಂಡು ತುಂಡು ಕೈಮಾ ಮಾಡಿ ನಾಯಿ, ನರಿ, ಹದ್ದು, ಕಾಗೆ, ಇಲಿ, ಹೆಗ್ಗಣಗಳಿಗೆ ಉಣಬಡಿಸಬೇಕು. ಎಷ್ಟು ಸುಲಭವಾಗಿ ನನ್ನ ಕಥೆ ಬಾಳ ಭವಿಷ್ಯವನ್ನೇ ಮುಗಿಸಿ ದವರೆಲ್ಲರೂ ನನ್ನ ಕಣ್ಣ ಮುಂದೆ ದಸರಾ ಮೆರವಣಿಗೆ ಹೊರಟರು. ಇವರೆಲ್ಲ ಕ್ರೂರಿಗಳು, ನಪುಂಸಕರು, ಕಟುಕರು, ಅವರ ಜೊತೆಗೆ ನನ್ನ ಮೇಲಾಧಿಕಾರಿಗಳೂ ವೃತ್ತಿ ಮತ್ಸರ, ಜಾತಿ, ಮತ, ಧರ್ಮ ಸಂಕಟದಿಂದಾಗಿಯೇ ನನ್ನ ಬಲಿಕೊಟ್ಟರು. ನಾನು ಸುಮ್ನೆ ಬಿಡ್ಬಾರದೆಂದು ಹಲ್ಲಲ್ಲು ಕಡಿದೆ. ಕಣ್ಣು ಉರಿ ಬಂದು, ಬಾಯಿ ಒಣಗಿ, ಕೈಕಾಲುಗಳಿಂದ ಒಮ್ಮೆಲೇ ಕೋಪ ರೋಷ ಉಕ್ಕಿ ಬಂತು. ತಡಿಯಾಕಾಗಲಿಲ್ಲ ದಿಢಿಗ್ಗನೇ ಎದ್ದು ಕುಳಿತೆ. ಕುಳಿತೆ ಕುಳಿತೆ ಅದೆಷ್ಟು ಹೊತ್ತು ಕುಳಿತೋ?! ನನಗೇ ರೋಸಿಗೆ ಬಂದು ಹಾಗೆ ದಿಂಬಿನ ಮೇಲೆ ತಲೆ ಕೊಟ್ಟೆ! ಯಾವಾಗ ನಿದಿರೆ ಬಂತೋ ಗೊತ್ತಾಗಲಿಲ್ಲ.

ಬೆಳಿಗ್ಗೆ ಕಣ್ಣು ಬಿಟ್ಟಾಗ ನನ್ನ ಬಳಿಯಲ್ಲಿ ಕುಳಿತು, ರಾತ್ರಿ ನನ್ನ ಅಕ್ಕಪಕ್ಕ ಮಲಗಿದ್ದ ಆ ನಾಲ್ಕು ಜನ್ರು ನನಗಿಂತಾ ವಯಸ್ಸಲ್ಲಿ ತೀರಾ ಕಿರಿಯರು ಎಂದಿನಂತೆ ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳ ಓದುತಿದ್ದರು.

ಇಂದು ನನ್ನದೇ ಸುದ್ದಿ ಪ್ರಕಟಗೊಂಡಿದ್ದನ್ನು ಓದಿ ಲೊಚಗುಟ್ಟಿದರು. ಅಂದು ರವಿವಾರ ನಿತ್ಯ ಕರ್ಮ ಮುಗಿಸಿ ತಣ್ಣೀರ ಜಳಕ ಮಾಡಿ ರೆಡಿಯಾದೆ. ಅಷ್ಟ್ರಾಗ ಆ ನಾಲ್ಕು ಜನ್ರ ಬುತ್ತಿಗಂಟು ಊರಿಂದ ಬಂದಿತ್ತು. ಅದರಲ್ಲಿ ಕರಿಗಡಬು, ಹೋಳಿಗೆ, ತುಪ್ಪ ಹತ್ತಿಕಾಯಿ, ಚಪಾತಿ, ಬದನೆ ಕಾಯಿ ಪಲ್ಲೆ, ನುಗ್ಗೆಕಾಯಿ ಸಾರು, ಹಪ್ಪಳ, ಸಂಡಿಗೆ, ಕೋಸಂಬರಿ, ಚಿತ್ರಾನ್ನ, ಮೊಸರನ್ನವನ್ನು ನಾವು ಐದು ಜನ್ರು ಕಿತ್ತು ತಿಂದೆವು.

ಕಣ್ಣಾಗ ನೀರು ಮೆಲ್ಲಗೆ ಹರಿಯತೊಡಗಿತು. ''ಥೇ ಯಿದ್ನೇ ನಾವು ಬ್ಯಾಡಾ ಅನ್ನೋದು. ನಾ ಆಸ್ತಿಗಾಗಿ ಅಣ್ಣನನ್ನೇ ಕತ್ರಿಸಿ ಎರಡು ತುಂಡು ಮಾಡೀನಿ ಅಳುತಿಲ್ಲ! ಇವನೋ ತನ್ನ ಅತ್ತಿಗೆ, ಅತ್ತಿಗೆ ಮಗನನ್ನೇ ಕತ್ರಿಸಿ ಒಗದಾನೆ. ಅತ್ತಿಲ್ಲ! ಇನ್ನು ಇವನೋ ತನ್ನ ಹೆಂಡ್ತಿನೇ ನೇಣ್ಯಾಕನೆ ಕಣ್ಣೀರು ತೆಗೆದಿಲ್ಲ! ಇವನೋ ತನ್ನ ಹೆಂಡ್ತಿಗೇ ಸೀಮೆಎಣ್ಣೆ ಉಗ್ಗಿ ಅಗ್ಗಿ ಪಿಲ್ಲಗೀಸಿ ಬಂದಾನೆ ಅತ್ತಿಲ್ಲ! ಇನ್ನು ನೀನು ಏನು ಮಾಡೀಗಿಯಂಥಾ ಅಳುತ್ತೀಗಿ?! ನಮ್ ಜೊತೆಗಿದ್ದಾಗ ಅಳುವೇ ಇಲ್ಲ. ಬರೀ ನಗುವೇ ಗೆಲುವೆ ಎಲ್ಲಾ ನಕ್ಕಿದ್ದು ನಿನ್ನದು, ಅತ್ತಿದ್ದು ನಿನ್ನದಲ್ಲ'' ಅಣ್ಣೇಗೌಡ್ರು ನನ್ನ ಕಣ್ಣೀರ ಸೀಟಿದ್ರು, ಅಂದು.

ಕಾರಗೃಹದಲ್ಲಿದ್ದ ಜನರನ್ನು ಇವರೇ ಮುಂದೆ ನಿಂತು ಖುಷಿ ಖುಷಿಲಿ ಒಂದು ಕಡೆಯಿಂದಾ. ಪರಿಚಯಿಸಿದರು. ಅವರೆಲ್ಲರ ಕಥೆ ವ್ಯಥೆ ಕೇಳಿ ಕಣ್ಣೀರಿಟ್ಟೆ, ನನ್ನ ಕತೆ, ಕೇಳಿ ಅವರೆಲ್ಲ ಮರುಗಿದರು!

ಇಡೀ ದಿನ ಹೀಗೇನೆ ಜಗಿದಿದ್ದು ತಿಳಿಲಿಲ್ಲ. ಹೊರಗಿನ ಊಟ, ತಿಂಡಿ, ಸಾಮಾನು ವಸ್ತು ಒಡವೆ ಬೀಡಿ ಸಿಗರೇಟು, ಸಬ್ಬು ಇತ್ಯಾದಿ ಏನು ಬಂದಿದ್ದರೂ ಅದನ್ನು ಪಡೆಯಲು ನೂರು ಐವತ್ತು ಲಂಚ ಕೊಡದೆ ಸಿಬ್ಬಂದಿ ಮಂಚವೇರಲ್ಲವೆಂದು ಕೇಳಿ ದುಕ್ಕಾಪಟ್ಟೆ ವ್ಯವಸ್ಥಿತವಾಗಿ ಲಂಚದ ವ್ಯವಸ್ಥೆಯಿಲ್ಲಿಯೂ ಸಾಗಿದೆ. ಆರೋಪಿಗಳನ್ನು ಇನ್ನೂ ಅವಸಾನದ ಅಂಚಿಗೆ ತಳ್ಳುವ ಎಲ್ಲ ತಂತ್ರಗಳಿವೆ. ಪ್ರತಿಭಟನೆ ಇಲ್ಲಿ ಬರೀ ಕನಸಿನ ಮಾತು.

ರಾತ್ರಿ ಊಟಕ್ಕೆ ಆ ನಾಲ್ವರ ನಾಲ್ಕು ಡಬ್ಬಿಗಂಟುಗಳು ವೇಳೆಗೆ ಸರಿಯಾಗಿ ಬಂದವು. ಒಂದರಲ್ಲಿ ಮಟನ್, ಚಿಕನ್, ಫಿಶ್, ರೊಟ್ಟಿ, ರಾಗಿಮುದ್ದೆ, ಚಪಾತಿ, ಅನ್ನ, ಸಾರು, ಬೇಯಿಸಿದ ಮೊಟ್ಟೆ, ಈರುಳ್ಳಿ, ಸೌತೇಕಾಯಿ ಅಬ್ಬಾ! ಎಂದೆ. ''ಇದೆಲ್ಲ ಏನು? ನೀನು ನನ್ನೊಟ್ಟಿಗೆ ಒಂದು ವಾರವಿರು! ನೀನೂ ಕಿಂಗ್ ಇಡೀ ಜೈಲಿಗೇ ಬಾದುಶಾಹ! ನಾರಾಯಣಗೌಡ್ರು ನನ್ನ ಹುರುದುಂಬಿಸಿದರು.

ನನ್ನ ಮುಖ ಬಾಡಿಹೋದ ಪುಂಡಿಪಲ್ಲೆಯಾಗಿತ್ತು! ಹಸಿದ ಹೊಟ್ಟೆಗೆ ಆ ಹು ಅನ್ನದೆ ಒಂದಿಷ್ಟು ತುರುಕಿದೆ ಬಾಲ್ಯದಿ ಓದುವಾಗ, ಪದವಿ, ಪ್ರಶಸ್ತಿ ಪಡೆವಾಗ ನನಗಿಂತಾ ದುರ್ಗತಿ ಬರುತ್ತದೆಂದು ನಾ ಎಣಿಸಿರಲಿಲ್ಲ. ಗೋಕಾಕಾ ಚಳುವಳಿಯಲ್ಲಿ ಹೀಗೆ ನಾಲ್ಕು ಬಾರಿ ಜೈಲಿಗೋಗಿ ದ್ದಾಗಿನ ಖುಷಿನೇ ಬೇರೆ, ಆದರೆ ಈಗಿನ ಅಧೋಗತಿನೇ ಬೇರೇ ನನ್ನ ನಾ ಹಳಿಯುತ್ತಾ ಕಳೆದ ರಾತ್ರಿಯಂಗೇ ಒಂಟಿ ಪಕ್ಕೆಲಿ ಒದ್ದಾಡುತ್ತಾ ಕೊತಕೊತನೆ ಸುಣ್ಣ ಕುದ್ದಂಗೆ ಕುದಿಯುತ್ತಾ ಬಾಳ ಹೊತ್ತು ನನ್ನ ವಿರುದ್ಧ ಪಿತೂರಿ ನಡೆಸಿದವರ ಕರುಳ ಬಗೆದು ಕೇಕೆ ಹಾಕಿ ಉಗ್ರ ನರಸಿಂಹಾವತಾರ ತಾಳಿದೆ. ಅದೆಷ್ಟೊತ್ತು ರಾತ್ರಿಯೆಲ್ಲ ಒಬ್ಬನೇ ಗುಮ್ಮನ ಗುಸುಕಿನಂಗಿರಲು ಸಾಧ್ಯ? ನನಗರಿವಿಲ್ಲದೆ ನಿದ್ರೆಗೆ ಜಾರಿದ್ದೆ.

ಬೆಳಿಗ್ಗೆ ಎದ್ದಾಗ ಏನೋ ಲವಲವಿಕೆ, ಹರುಷ, ಈವತ್ತು ಬಿಡುಗಡೆಯ ಭಾಗ್ಯ ದೊರೆವುದೆಂದು ನಾ ಭಲೇ ಖುಷಿಲಿ ಆ ನಾಲ್ವರಿಗೆ ಹೇಳಿದೆ. ''ಹೊರಗೆ ಹೋದ ಮೇಲೆ ಕರೆನ್ನಿ ಹಾಕಿಸು! ನಮ್ಮ ಮರೀಬೇಡ! ನಿನ್ನ ಸಹಾಯಕ್ಕಿದ್ದೇವೆ. ನಮ್ಮಯ ವಿಳಾಸ, ದೂರವಾಣಿ ಸಂಖ್ಯೆ ಎಲ್ಲ ತೆಗೆದುಕೋ! ಜೀವನ ಹೇಗೆ ಬರುತ್ತೋ ಹಾಗೆ ಸ್ವೀಕರಿಸು! ನಾವಂದು ಕೊಂಡಂತಿಲ್ಲ'' ಎಂದ ಅಣ್ಣೇಗೌಡ.

''ಕೋರ್ಟಿಗೆ ನಮ್ಮ ಫೈಲು ಈವತ್ತೇ ಈಗ್ಲೆ ಹೋಗ್ಬೇಕೆಂದ್ರೆ, ಪ್ರತಿ ಟೇಬಲ್‌ಗೆ ಮಾಮೂಲಿ ಮುಟ್ಲೇಬೇಕಂತೇ'' ಈ ಸುದ್ದಿ ನನಗೆ ಆತಂಕ ತಂತು. ತಲೆಗೆ ಕೈ ಹೊತ್ತೇ! ಅಷ್ಟರಲ್ಲಿ ಸಾಕ್ಷಾತ್ ದೇವ್ರು ಬಂದಂಗೆ ಡಿ.ಎಂ.ಇ, ಜಗದೀಶ್ ನನ್ನ ಹುಡುಕಿ ಬಂದರು. ''ನಿಮೀ ಇಂಥಾ ಸ್ಥಿತಿ ಬರುಬಾರ್ದಿತ್ತು ಸಾರ್! ಇದೆಲ್ಲ ಸಂಚು. ನಾನಿದ್ದೇನೆ ನೀವು ಯಾವುದಕ್ಕೂ ಹೆದ್ರಬ್ಯಾಡ್ರಿ, ಹಣ ತಂದೀನಿ, ಹೊರಗೆ ನಿಮ್ಮ ಅಳಿಯನ ಕೈಲಿ ಕೊಟ್ಟು ಹೋಗ್ತಿನಿ, ಇನ್ನೂ ಕೇಳ್ರೀ''

ಆನೆ ಬಲ ಬಂತು! ಡಿ.ಎಂ.ಇ.ಗೆ ವಂದಿಸಿದೆ. ನನ್ನ ತಮ್ಮಂದಿರಲಿ, ಅಳಿಯಂದಿರಲಿ, ಗೆಳೆಯರಲಿ ಮಾವಂದಿರಲಿ, ಅಕ್ಕತಂಗಿಯರಲಿ, ಇಲ್ಲದ ದೊಡ್ಡ ಗುಣ ನಿನ್ನಲ್ಲಿದೆ. ನಿನಗೆ ಒಳ್ಳೆಯದಾಗಲಿ ಎಂದು ಕಣ್ಣೀರ ಹರಿಸಿದೆ.

ತಾಸಾಗಲಿಲ್ಲ. ಡಿ.ಎಂ.ಇ. ಕೊಟ್ಟ ಹಣ ಕೆಲಸ ಮಾಡಿತು. ನನ್ನ ಹೆಸರು ಕೂಗಿದರು. ನಾನೂ ಕೈದಿಗಳ ಸಾಲಲ್ಲಿ ನಿಂತು ಹಾಜರಾತಿ ಹೇಳಿ, ವಾಯನು ಹತ್ತಿದೆ. ಕಣ್ಣೀರು ಕೋಡಿ ಬಿದ್ದವು. ಹೊಟ್ಟೆಯೊಳಗಿಂದ ಗುದ್ದಿಕೊಂಡು ದುಃಖ ಒತ್ತರಿಸಿ ಬಂತು. ದುಃಖ ದುಃಖಿಸಿ ಅತ್ತೆ. ಅಲ್ಲಿದ್ದ ವರೆಲ್ಲ ನನ್ನಾ ಸಂತೈಸಲು ಯತ್ನಿಸಿ ಸೋತರು. ನ್ಯಾಯಾಲಯ ತಲುಪಿದಾಗ ಕಣ್ಣೀರು ಹಿಂಗಿದವು. ನನ್ನನ್ನು ಜಾಮೀನಿನ ಮೇಲೆ ಅಂದೇ ಬಿಡುಗಡೆ ಮಾಡಿದರು.

ತಕ್ಷಣ ಕಛೇರಿಗೆ ಹಾಜರಾದೆ. ಕಛೇರಿಯಲ್ಲಿದ್ದ ಐದಾರು ಜನ್ರೂ ದಂಗು ಬಡಿದು ಹೋದರು. ನನ್ನನ್ನು ಕೊಲೆಗಾರನಂತೆ ಕಂಡು ದೂರ ದೂರ ಸರಿದರು. ಎಲ್ಲರನ್ನು ಹತ್ತಿರ ಕರೆದೆ. ಪ್ರೀತಿಯಿಂದ ಯಾಕಿಂಥಾ ಶಿಕ್ಷೆ ನನಗೆ ನೀವೇ ಹೇಳಿ?! ಎಂದೆ.

''ನಿಮ್ಮ ಪುಸ್ತಕದ ಹಣ ಕಬಳಿಸಲು ಈ ರಣತಂತ್ರ'' ಶ್ರೀನಿವಾಸ್‌ರಾವ್ ಅಂದ. ನನ್ಗೆ ಈ ಮಾತು ಮೊದ್ಲೆ ಹೇಳಿದ್ರೆ ಸಾಕಿತ್ತಲ್ವೇ? ಅಂದೆ.

''ಎಲ್ಲಿ ನೀವು ಅರ್ಧ ಭಾಗ ಕೊಡಲು ಒಪ್ಪಲೇ ಇಲ್ಲ! ಈಗ ಫುಲ್ ಆ ಅರವತ್ತು ಸಾವಿರ ನಮ್ಗೆ ಆಯ್ತು'' ಮೃತ್ಯುಂಜಯ, ಸೀನ, ವಲ್ಲಿ, ಗೌಡಪ್ಪ ಒಟ್ಟಿಗೇ ಅಂದರು. ನಾ ಕುಸಿದೆ. ''ಸಾರ್ ಈಗ್ಲೂ ನಮ್ ದೂರು ವಾಪಾಸು ಪಡ್ತೀವಿ! ನಿಮಗೊಂದು ಆಫರ್ ಕೊಡ್ತೀವಿ. ನೀವು ಐದು ಲಕ್ಷ ನಮ್ಮ ಕೊಡಿ'' ಅವರ ಪ್ರಶ್ನೆ ನೇರವಾಗಿತ್ತು. ''ಎಲ್ಲಿದೆ ಕೊಡಲು? ನನ್ನ ಪ್ರಾಮಾಣಿಕತೆನಾ ನೀವು ಇಲ್ಲೇ ಮೂರು ವರ್ಷದಿಂದ ನೋಡ್ತಿದ್ದೀರಲ್ಲಾ? ಎಂದೆ.

''ನಿಮ್ಮ ತಾಯಿನ, ಹೆಂಡ್ರನ, ಮಕ್ಳನ ಮಾರಿ ನಮ್ಮ ಕೊಡಿ! ನೀವೂ ನಿಮ್ ಸಾಹಿತ್ಯ ಎಲ್ಲಾ ಉಳಿತ್ತೇ ಯೋಚಿಸಿ'' ನಾ ಪಾತಾಳಾ ಕಂಡೆ..! ಯಿದು ಅಗ್ನಿ ಪರೀಕ್ಷೆ. ಕೌರವರ ನಾಡು. ರಾವಣ, ರಕ್ಕಸರ ಬೀಡು, ಶಂಕಿನಿ, ಡಾಕಿಣಿಯರ ಸುಡುಗಾಡು. ನ್ಯಾಯ ಅನ್ಯಾಯ ಸತ್ಯ ಅಸತ್ಯವನ್ನು ಪಾರಮರ್ಶಿಸಲು ಇಲ್ಲಿ ಯಾರಿಗೇ ಪುರುಸೊತ್ತಿಲ್ಲ. ಕೋಣ ಈದ್ಯೆತೆಂದ್ರೆ, ಕೊಟ್ಟಿಗೆಗೆ ಕಟ್ಟು ಎಂಬಂತೆ ಮೇಲಾಧಿಕಾರಿಗಳು ಬೇಷ್ ಕಾಸಿ ಬರೆ ಎಳೆದರು ನನಗೇ ಸಾರ್, ಬಾಳ ಅನ್ಯಾಯ ಸಾರ್! ನಾನು ತಪ್ಪು ಮಾಡಿಲ್ಲ, ನ್ಯಾಯ ಕೊಡ್ರಿ ಸಾರ್ ಗೋಗರದೆ. ''ಮಿಸ್ಟರ್ ಸತ್ಯಹರಿಶ್ಚಂದ್ರ ನಿನಗೆ ಎಲ್ಲಿ ಅಪಮಾನವಾಗಿತ್ತೋ ಅಲ್ಲಿಗೇ ಪ್ರಾಂಶುಪಾಲರೆಂದು ಮತ್ತೇ ಕೊಡ್ತೀನಿ. ದೊಡ್ಡ ಸಂಬಳ ಆರು ತಿಂಗ್ಳು ದುಡಿದ್ರೆ, ಸಾಕು! ನೀ ನಮ್ಗೆ ಕೊಡ ಮಾಡುವ ಎರಡೂವರೆ ಲಕ್ಷ ಬಂದೇ ಬಿಡುತ್ತೆ ಏನಂತೀಯಾ?'' ಎಂದು ಮೇಲಾಧಿಕಾರಿಗಳ ರಾಗ ಮೊದಲಾಗಿತು. ತಿರಿದು ತಿಂಬಾಳನ ಹಿಡಿದು ಹಡಾದೆಂದ್ರೆ, ಇದೆ ಏನೋ ನಾನೂ ತೆಪ್ಪಗಾದೆ. ವರ್ಷ, ಎರಡು ವರ್ಷ ಜಗಿತು. ಒಂದು ದಿನ ಇದ್ದಕ್ಕಿದ್ದಂತೆ ಬೇಕಂತ್ಲೆ ನನ್ನ ಮೈಸೂರಿಗೆ ಪ್ರಾಂಶುಪಾಲರೆಂದು ಎತ್ತಿ ಬಿಸಾಕಿದ್ರು, ಬದುಕಿದೆ ಬಡ ಜೀವವೆಂದು ನಿಟ್ಟೂಸಿರಿಟ್ಟೆ. ಸತತವಾಗಿ ಆರು ವರ್ಷ ಕಾನೂನು ಹೋರಾಟ ನಡೆಸಿದೆ. ಬಹಳಷ್ಟು ಸಲ ಉಪವಾಸ ಉಳಿದೆ. ಅಪಮಾನ ಅನುಭವಿಸಿದೆ. ನ್ಯಾಯಾ ಪಡೆಯಲು ಏಳು ಜೊತೆ ಬೂಟು ಸವೆದವು! ಹರಕು ಅಂಗಿ ಸಾಹುಕಾರನೆನಿಸಿದೆ. ಗಿಡಗಿಡಕೆ ಕಣ್ಣೀರಿಟ್ಟೆ ಜೋಗಿ ಜಂಗಮನಾದ, ಬಹಳಷ್ಟು ಜನರ ಅವಕೃಪೆಗೆ ಪಾತ್ರನಾದೆ. ತಾಳ್ಮೆ, ಆತ್ಮ ವಿಶ್ವಾಸ, ನಂಬಿಕೆ ಬಲಿಯಿತು. ಸೋತು ಗೆದ್ದೆ. ನ್ಯಾಯಾಲಯದಿಂದ ನಿರ್ದೋಷಿ ಎಂದು ತೀರ್ಪಿತ್ತರು.

ಜೀವನವೆಂದರೆ ಬರೀ ಸೋಲೇ ಇಲ್ಲ. ಇದು ಸತ್ಯ, ಧರ್ಮ, ನ್ಯಾಯಕ್ಕೆ ಸಂಧ ಗೌರವ. ಕೇರಿಗೆ ಲಭಿಸಿದ ಜಯ! ದೂರುದಾರನೊಬ್ಬ ಬಿಟ್ಟು ಪಂಚರ-ಪೊಲೀಸ್ ಸಾಕ್ಷಿ ಪುರಾವೆಗಳೂ ಸಂತೆಗೆ ತಕ್ಕ ಬೊಂತೆಯಾಗಿವೆ. ಆರೋಪಿತರು 40ಕ್ಕೂ ಹೆಚ್ಚು ಕೃತಿ ರಚಿಸಿ, ಬೆಳ್ಳಿ ಬಂಗಾರ ನಗದು ಪುರಸ್ಕಾರ ಗಳಿಸಿ ಪ್ರತಿಷ್ಠಿತರೆನಿಸಿರುವರು. ನೂರಾರು ಸನ್ಮಾನಗಳ ಸ್ವೀಕರಿಸಿರುವುದ ಮನ ಗಂಡು, ಇವರೊಬ್ಬ ರಾಷ್ಟ್ರೀಯ ಸಂಪತ್ತು. ಇವರ ತೇಜೋವಧೆಗೆ ಹೂಡಿದ ಷಡ್ಯಂತ್ರವೆಂದು ನಿರೂಪಿತವಾಗಿದೆ ಯೆಂದು ತೀರ್ಪು ಹೊರಬಿತ್ತು!

ನಾ ಪುಟಕಿಟ್ಟ ಚಿನ್ನವಾದೆ. ಬದುಕಲು ಬದುಕು ಕಲಿಸಿತು. ಶಾಂತಿ ಸಮಾಧಾನ ಬಂತು. ಅಬ್ಬಾ! ಚಿನ್ನಕ್ಕಲ್ಲವೇ ಪರೀಕ್ಷೆ?! ಕಲಿಯುಗದ ನಡೆದಾಡುವ ದೇವರು ನ್ಯಾಯಾಲಯ ನ್ಯಾಯಾಧೀಶರು ಕಣ್ಣಿಗೆ ಕಾಣುವ ದೇವರು, ಕೊಲ್ಲುವವರಿಗಿಂತ ಕಾಯುವವರು ದೇವರು! ದೊಡ್ಡವರು.! ಇವರೇ ಸೂರ್ಯ ಚಂದ್ರರಿಗೂ ಮಿಗಿಲು. ಬದುಕು ಕಲಿಸಿದ ಪಾಠದ ಮುಂದೆ: ಅನುಭವದ ಅಮೃತ ಇನ್ನೂ ದೊಡ್ಡದು. ದೇವರ ತೀರ್ಪಿನ ಮುಂದೆ ಮನುಶ್ಯರ ಆಟ ಸಾಗದು.

**-ಡಾ|| ಯಲ್ಲಪ್ಪ ಕೆ.ಕೆ.ಪುರ**

# ನದಿ ದಾಟಿ ಬಂದವರು

**ಕನ್ನಡ** ಸಾಹಿತ್ಯ ತನ್ನ ಪರಂಪರೆಯ ಹಾದಿಯಲ್ಲಿ ಹತ್ತು ಹಲವು ಬಿಕ್ಕಟ್ಟುಗಳ ನಡುವೆ, ಸದಾ ನಿರ್ಜಾರ್ತೀಕರಣಕ್ಕೆ, ಶ್ರೇಣಿಕೃತ ಸಮಾಜದ ನೆಲೆಗಟ್ಟಿಗೆ ಒಂದಷ್ಟು ಪೆಟ್ಟು ನೀಡುತ್ತಲೇ, ಆರ್ಥಿಕ ಸಬಲತೆಯನ್ನು ಗಳಿಸುವ ಸಂಗತಿಗಳ ಸುತ್ತ ಸಂಘರ್ಷಿಸುತ್ತಲೇ ಮತ್ತೆ ಮತ್ತೆ ಮಾನವೀಯ ನೆಲೆಗಳನ್ನು ಹುಡುಕಾಡುವ ಮಹತ್ತರ ಕಾರ್ಯವನ್ನು ಮಾಡುತ್ತಲೇ ಬಂದಿದೆ. ಅನ್ಯ ಪರಂಪರೆ ಗಳನ್ನು ತನ್ನೊಳಗು ಮಾಡಿಕೊಳ್ಳುತ್ತ, ಅದರೊಂದಿಗೆ ಮುಖಾಮುಖಿಯಾಗುತ್ತ ವಿಶ್ವಾತ್ಮಕ ಅನು ಭವ ಗಳಿಗೆ ಎದುರಾಗಿ ಮೇಲುಸ್ತರದ ಜನರು ತಮ್ಮ ಪರಂಪರೆಯ ಭದ್ರಕೋಟೆಯೊಳಗೆ, ಜಾತಿ ಯಿಂದ, ಶ್ರೀಮಂತಿಕೆಯಿಂದ, ಅಧಿಕಾರಗಳಿಂದ ತಮ್ಮನ್ನು ಎತ್ತರದಲ್ಲಿಯೇ ಇರಿಸಿಕೊಳ್ಳುವ ನೂರೆಂಟು ತಂತ್ರಗಳನ್ನು ಹೆಣೆಯುತ್ತಲಿದ್ದರೆ, ಕೆಳಸ್ತರದ ಜನರು ತಮ್ಮ ಪರಂಪರೆಯನ್ನು ಆಧುನಿಕ ಜಗತ್ತಿನ ವೈಚಾರಿಕತೆಗೆ ವಿಸ್ತರಿಸಿಕೊಂಡು ರೂಪಾಂತರಿಸುವ ಪ್ರಯತ್ನವನ್ನು ಮಾಡು ತ್ತಲೇ ಇರುವುದು ಗಮನಾರ್ಹ ಸಂಗತಿ. ಇವೆಲ್ಲ ಪ್ರಕ್ರಿಯೆಗಳು ಅಂಕುರಿಸಿದ್ದು ಇಂಗ್ಲೆಂಡಿನ ಮಾದರಿಯ ಆಧುನಿಕ ಶಿಕ್ಷಣ ಮೂಲಕ. ಇದು ಅಲ್ಲಿಯವರೆಗೂ ಏಕಮುಖವಾಗಿ ಪ್ರವಹಿಸುತ್ತಿದ್ದ ಪರಂಪರೆಯ ತೊರೆಗಳಿಗೆ ತಡೆಯೊಡ್ಡುವ ಮತ್ತು ಅದರ ದಿಕ್ಕನ್ನು ಒಂದಷ್ಟಾದರೂ ಬದಲಾಯಿಸುವ ಮಹತ್ತರ ಕಾರ್ಯವನ್ನು ಪ್ರಾರಂಭ ಮಾಡಿತು. ಪಾರತಂತ್ರದ ಅವಮಾನಕಾರಿಯಾದ ಅವ್ಯವಸ್ಥೆಯ ಅರಿವನ್ನು ಜಾಗೃತಗೊಳಿಸಿತು. ದೇಶಿ ಪರಂರಪರೆಯ ಬಗೆಗೆ ಹೊಸ ಎಚ್ಚರವನ್ನು ಹುಟ್ಟುಹಾಕಿತು. ಇದರಿಂದ ಕೇವಲ ಬ್ರಿಟೀಷರಿಂದ ಸ್ವಾತಂತ್ರ ಪಡೆಯುವುದು ಮಾತ್ರವಲ್ಲದೇ ಸಾಮಾಜಿಕ ಸುಧಾರಣೆಗಳಿಗೆ ನಾಂದಿಯಾಯಿತು. ಅದುವರೆಗೂ ವ್ಯಾಪಕವಾಗಿ ಜನಸಾಮಾನ್ಯರ ಬದುಕನ್ನು ಹಿಂಡಿ ಹಿಪ್ಪೆ ಮಾಡಿದ್ದ ಮೂಢನಂಬಿ ಕೆಗಳು, ಜಾತಿಯಾಧಾರಿತ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆ, ಲಿಂಗ ಮತ್ತು ವರ್ಣಾಧಾರಿತ ತಾರತಮ್ಯ ಗಳು, ಜಮೀನುದಾರಿ ಪದ್ಧತಿಯ ಕಬಂಧ ಬಾಹುಗಳ ಕರಾಳತೆ ಸೇರಿದಂತೆ ಹತ್ತು ಹಲವು ಸಂಕೀರ್ಣತೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಹವಣಿಕೆ ಪ್ರಾರಂಭವಾಯಿತು. ಸಾಂಪ್ರದಾಯಿಕ ಊಳಿಗಮಾನ್ಯ ಪದ್ಧತಿಯಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ತೀರ ತುಳಿತಕ್ಕೆ ಒಳಗಾಗಿದ್ದ ಕೆಳಸ್ತರದ ಜನತೆಗೆ ಹೊಸ ದಾರಿಯನ್ನು ಕಂಡುಕೊಳ್ಳುವ, ನರಕಸದೃಶ್ಯ ಬದುಕಿನಿಂದ ಪಾರಾಗಿ ಹೊರ ಬರುವುದಕ್ಕೆ ಆಧುನಿಕತೆಗೆ ನೆಲೆಗಟ್ಟು ಒದಗಿಸಿತು. ಇವೆಲ್ಲ ಹಿನ್ನೆಲೆಗಳಲ್ಲಿ ಮೇಲುವರ್ಗದ ಜನರ ಕೆಳವರ್ಗದ ಜನರನ್ನು ಆರ್ಥಿಕವಾಗಿ ಮಾತ್ರ ವಲ್ಲದೆ ಲೈಂಗಿಕವಾಗಿಯೂ ಶೋಷಿಸುವ, ಜಾತಿಯ ತರತಮಗಳನ್ನು ಪ್ರಬಲ ಅಸ್ತ್ರವನ್ನಾ ಗಿಸಿಕೊಂಡು ಹಿಂಸಿಸುವ, ಅವರ ಬದುಕನೆಲ್ಲ ಕಂಗೆಡಿಸುವ ನೂರೆಂಟು ಹುನ್ನಾರಗಳ ವಿಕಾರ ಮುಖಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ, ಅವುಗಳನ್ನು ಬಯಲಿಗೆಳೆಯುವ, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಹಾದಿ ಹುಡುಕುವ ಪ್ರಯತ್ನಗಳು ಕನ್ನಡ ಸಾಹಿತ್ಯ ಪರಪಂರೆಯಲ್ಲಿ ಪ್ರಾರಂಭವಾದವು. ಶಿವರಾಮ ಕಾರಂತರ ಚೋಮನ ದುಡಿ, ಕುವೆಂಪು ಅವರ ಕಾನೂರು ಹೆಗ್ಗಡತಿ, ಮಾಸ್ತಿ ಅವರ ಚಿಕವೀರ ರಾಜೇಂದ್ರ, ದೇವನೂರು ಮಹಾದೇವ ಅವರ ಕುಸುಮಬಾಲೆ ಸೇರಿ ಹತ್ತು ಹಲವು ಕೃತಿಗಳು ಈ ಹಿನ್ನೆಲೆಯಲ್ಲಿ ಸ್ಮರಣೀಯವೆನಿಸುತ್ತವೆ. ಲೇಖಕರಾದ ಶಶಿಧರ ಹಾಲಾಡಿಯವರ ನದಿ ದಾಟಿ ಬಂದವರು ಕಾದಂಬರಿ ಆಧುನಿಕತೆಯ ಆಗಮನದಿಂದ ಭಾರತದ ಗ್ರಾಮೀಣ ಪ್ರದೇಶದ ಸಾಮಾಜಿಕ ವ್ಯವಸ್ಥೆಯಲ್ಲಿನ ಆರ್ಥಿಕತೆಯ ಪರಂಪರೆಯ ಚಲನಶೀಲತೆಯ ಹಾದಿಯಲ್ಲಿ ಹೊಸದೊಂದು ಹೊಳಹು ತೋರುತ್ತದೆ.




ನಲವತ್ತನೆಯ ದಶಕದಿಂದ ಸುಮಾರು ಎಪ್ಪತ್ತನೆಯ ದಶಕದ ಕಾಲಘಟ್ಟದ ಮಲೆನಾಡಿನ ಮಡಿಲಿನಲ್ಲಿಯ ಬದುಕಿನ ಸಾಮಾಜಿಕ ಬದುಕಿನ ಸ್ಥಿತ್ಯಂತರಗಳನ್ನು ಮತ್ತು ಆರ್ಥಿಕ ಬದುಕಿನ ಏರುಪೇರುಗಳನ್ನು ತನ್ನ ಮೂಲದ್ರವ್ಯವಾಗಿರಿಸಿಕೊಂಡು ಕಾದಂಬರಿ ಬಹಳಷ್ಟು ವೈಶಿಷ್ಟ್ಯಪೂರ್ಣ ವಾಗಿ ಮೂಡಿಬಂದಿದೆ. ಮಲೆನಾಡಿನ ಕರ್ಜೆ ಎಂಬು ಗ್ರಾಮದ ಜಮೀನುದಾರ ನಾರಾಯಣ ಭಂಡಾರಿಯ ಬಿಗಿ ಹಿಡಿತದಿಂದ ತಪ್ಪಿಸಿಕೊಂಡು ಬಂದು ಕುಯೀರ ನಾಯಕ ರಾತ್ರಿಯೇ ಯಾರಿಗೂ ಏನನ್ನೂ ಹೇಳದೆ ಕೇಳದೆ ತಾನು ಅದುವರೆಗೂ ನೆಲೆಸಿದ್ದ ಊರು ಬಿಟ್ಟು ನದಿಯೊಂದನ್ನು ದಾಟಿ ನೆಲ್ಯಾಡಿ ಎಂಬ ಊರಿಗೆ ವಲಸೆ ಬರುತ್ತಾನೆ. ವೆಂಕಣ್ಣಯ್ಯ ಮತ್ತು ಸಾಕಮ್ಮನ ಕುಟುಂಬದ ಆಶ್ರಯ ಪಡೆದು ಹೊಸ ಬದುಕನ್ನು ಕಟ್ಟಿಕೊಳ್ಳುವುದರ ಮೂಲಕ ಕಥೆ ಪ್ರಾರಂಭವಾಗುತ್ತದೆ. ವೆಂಕಣ್ಣಯ್ಯ ಸರಳ ಸಾತ್ವಿಕ ಸ್ವಭಾವದ ಜಮೀನಾದರ. ಆಗಿನ ಸ್ವಾತಂತ್ರ ಹೋರಾಟದ ಕಾಲಘಟ್ಟದಲ್ಲಿ ಗಾಂಧೀಜಿಯ ಚಿಂತನೆಗಳಿಂದ ತುಂಬ ಪ್ರಭಾವಿತನಾದ ವ್ಯಕ್ತಿತ್ವ ಹೊಂದಿದ ಮನುಷ್ಯ. ಕುಯೀರು ನಾಯಕ ಬಡತನವನ್ನು ಹೊದ್ದುಕೊಂಡು ಹುಟ್ಟಿದ ಗೇಣಿದಾರರ ಕುಟುಂಬಗಳಿಗೆ ತನ್ನ ಬದುಕನ್ನು ಒತ್ತೆಇಟ್ಟು ಬದುಕು ಕಟ್ಟಿಕೊಂಡವ. ವೆಂಕಣ್ಣಯ್ಯನ ಆಶ್ರಯ ಸಿಕ್ಕ ನಂತರ ವೆಂಕಣ್ಣಯ್ಯನ ಕುಟುಂಬಗಳ ನಡುವಿನ ಬದುಕನ್ನು ಕಾಲಕ್ಕೆ ತಕ್ಕಂತೆ ವಿಭಿನ್ನ ಪಾತಳಿಗಳಲ್ಲಿ ಚಲಿಸುವ ಕ್ರಮಗಳನ್ನು ಮನೋಜ್ಞವಾಗಿ ಕಾದಂಬರಿ ಕಟ್ಟಿಕೊಡುತ್ತದೆ. ಸ್ವಾತಂತ್ರ ಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಪಲ್ಲಟಗಳ ನೈಜ ಸ್ಥಿತಿಯನ್ನು ವಿಶೇಷವಾಗಿ ಮಲೆನಾಡಿಗೆ ಸಂಬಂಧಿಸಿದಂತೆ ಕಾದಂಬರಿ ಅತ್ಯಂತ ಆಪ್ತವಾಗಿ, ಹೃದಯ ಸ್ಪರ್ಶಿಯಾಗಿ ತೆರೆದು ಕೊಳ್ಳುತ್ತಾ ಹೋಗುತ್ತದೆ. ಗ್ರಾಮೀಣ ಪ್ರದೇಶದ ಜನಜೀವನವನ್ನು, ಸಾಮಾಜಿಕ ಬದುಕಿನ ಮತ್ತು ಆರ್ಥಿಕ ಸ್ಥಿತಿ-ಗತಿಗಳ ನೈಜ ಚಿತ್ರಣವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ಎರಡು ಕುಟುಂಬಗಳನ್ನು ಸಾಂಕೇತಿಕವಾಗಿ ಬಳಸಿಕೊಂಡು ಸಮಾಜದಲ್ಲಿ ಅಂದು ಇದ್ದ ಪ್ರೀತಿ-ವಿಶ್ವಾಸ, ಸಹಾನುಭೂತಿ ಎಲ್ಲಕ್ಕಿಂತ ಮಿಗಿಲಾಗಿ ನಿಯತ್ತು, ಬದ್ಧತೆಗಳ ಸುತ್ತ ಜನಸಾಮಾನ್ಯರ ಮಾತ್ರ ವಲ್ಲದೇ, ಉಳ್ಳವರ ದರ್ಪ, ಅಮಾನವೀಯ ನಡೆಗಳು, ಇತ್ಯಾದಿಗಳ ನೈಜತೆಯನ್ನು ಸಮರ್ಥವಾಗಿ ಬಿಂಬಿಸುತ್ತದೆ. ಬಹುಮುಖ್ಯವಾಗಿ ಕುಯೀರು ನಾಯಕನಂತ ಕೆಳಸ್ತರದ ಜನರ ಬದುಕಿನ ಅಸಹಾಯಕತೆ, ನಾರಾಯಣ ಭಂಡಾರಿಯ ಯಂತಹ ಉಳ್ಳವರ ದರ್ಪ, ಸ್ವಾರ್ಥದ ಮನೋಧೋರಣೆಗಳು, ಲೈಂಗಿಕ ಶೋಷಣೆಯ ಹುನ್ನಾರಗಳು, ಆದರ್ಶದ ಬದುಕನ್ನು ರೂಢಿಸಿಕೊಂಡ ವೆಂಕಣ್ಣಯ್ಯನಂತವರ ಮಾನವೀಯ ಮುಖಗಳು, ಇಂದಿಗೂ ಪ್ರಸ್ತುತವೆನಿಸುತ್ತವೆ. ಗೇಣಿದಾರರೆ ಭೂಮಾಲಿಕರಾಗುವ ಅವಸ್ಥಾಂತರವನ್ನು ವಸ್ತುನಿಷ್ಠವಾಗಿ ಚಿತ್ರಿಸುವಲ್ಲಿ ಕಾದಂಬರಿ ಯಶಸ್ಸು ಕಾಣುತ್ತದೆ.

ತಲೆತಲಾಂತರಿದಂದಲೂ ಅಧಿಕಾರವನ್ನು ಅನುಭವಿಸುತ್ತ, ಕೆಳಸ್ತರದ ಜನರನ್ನು ಶೋಷಿಸತ್ತ, ಅವರ ಪರಿಶ್ರಮ, ನಿಯತ್ತು, ದಣಿವರಿಯದ ದುಡಿಮೆಯನ್ನು ತಮ್ಮ ಮೆಟ್ಟಿಲಾಗಿಸಿಕೊಂಡು ಸ್ವರ್ಗದ ಬದುಕನ್ನು ಕಟ್ಟಿಕೊಂಡ ಮೇಲುಸ್ತರದ ಜನರಿಂದ ಅಧಿಕಾರ ಮತ್ತು ಹಕ್ಕು ಬದಲಾ ವಣೆಯ ಕಾನೂನು ಜಾರಿ ಮತ್ತು ಅದರ ನಂತರದ ಬದಲಾವಣೆಗಳ ಕುರಿತು ಲೇಖಕರು ಕಥಾ ವಸ್ತುವಿನ ಪ್ರಮುಖದ ಶಕ್ತಿಯಾಗಿಸಿಕೊಂಡಿರುವುದು ಕಾದಂಬರಿಯ ಮತ್ತೊಂದು ಪ್ರಮುಖ ಅಂಶವಾಗಿದೆ ಎಂಬುದು ಗಮನೀಯ ಸಂಗತಿಯಾಗಿದೆ. ನಮ್ಮ ನೆಲದಲ್ಲಿ ಬಹಳಷ್ಟು ಕಾಲ ದಿಂದಲೂ ನಡೆದುಕೊಂಡು ಬಂದಿದ್ದ ಇಂದಿಗೂ ಅಲ್ಲಲ್ಲಿ ಕಾಣಸಿಗುವ ಅನಿಷ್ಟ ಪದ್ಧತಿಗಳ ಗಡಿ ಗಳನ್ನು ದಾಟುವ ಮೂಲಕ ಸಾಮಾಜಿಕ ಪರಿವರ್ತನೆಗೆ ಸಾಕ್ಷಿಯಾಗಲಿ ನಿಲ್ಲುತ್ತವೆ. ಸ್ವಾತಂತ್ರ್ಯ ಪಡೆಯುವುದು ಎಂದರೆ ಕೇವಲ ರಾಜಕೀಯವಾದ ಸ್ವಾತಂತ್ರ್ಯವಲ್ಲ. ಅದು ಮನುಷ್ಯರ ನಡುವೆ ಜಾತಿ ಮತ ಪಂಥ ಗಡಿಗಳಾಚೆಗೂ ಮೀರಿದ ಸಮತೆಯ ಬದುಕನ್ನು ಕಟ್ಟಿಕೊಳ್ಳುವುದು ಎಂಬುದನ್ನು ಕಾದಂಬರಿ ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ನಮ್ಮ ದೇಶದ ಸಾಮಾಜಿಕ ಮತ್ತು ರಾಜಕೀಯ ಇತಿಹಾಸಗಳ ಮಾತ್ರವಲ್ಲದೇ ಸಮಕಾಲೀನ ಬದುಕಿನ ರೀತಿ-ನೀತಿಗಳ ಮೇಲೆ ಬೆಳಕು ಚೆಲ್ಲುತ್ತದೆ.

ಲೇಖಕರು ಯಾವುದೇ ಬಗೆಯ ಸೀಮಿತಗಳಲ್ಲಿ ಕಟ್ಟಿಕೊಳ್ಳದೇ ಒಟ್ಟು ಬದುಕಿಗೆ ಸಹಜವಾಗಿ ಮುಖಾಮುಖಿಯಾಗುತ್ತ ಕಟ್ಟುವ ಕೌಶಲ್ಯ ನಿಜಕ್ಕೂ ಅಚ್ಚರಿಗೆ ಕಾರಣ ವಾಗುತ್ತದೆ. ನದಿ ದಾಟುವುದು ಎಂದರೆ ಅದು ಭೌಗೋಳಿಕವಾಗಿ ಮಾತ್ರವಲ್ಲದೆ, ಒಂದು ಕಾಲಘಟ್ಟದಿಂದ ಇನ್ನೊಂದು ಕಾಲಘಟ್ಟದ ನಡುವಿನ ಚಲನೆಯಾಗಿ ತೋರುತ್ತದೆ. ಶೋಷಿತ, ಅಲಕ್ಷಿತ, ನಿರ್ಗತಿಕ ಕುಟುಂಬಗಳು ತಮ್ಮ ಪರಿಶ್ರಮದಿಂದ, ಪ್ರಬಲ ಇಚ್ಛಾಶಕ್ತಿಯಿಂದ, ಕಷ್ಟ ಸಹಿಸ್ಣುತೆಯಿಂದ, ವಿಶೇಷವಾಗಿ ಅಕ್ಷರಗಳ ಅರಿವಿನಿಂದ ಸ್ವಾಭಿಮಾನದ ದಡಸೇರುವ ರೂಪಕವಾಗಿ ಕಂಡು ಬರುತ್ತದೆ. ಕಾದಂಬರಿಯ ಭಾಷೆ, ನಿರೂಪಣಾ ಶೈಲಿ ಮಲೆನಾಡಿನ ರಮ್ಯ ಪರಿಸರದಲ್ಲಿನ ಗಿಡ, ಮರ, ಬಳ್ಳಿಗಳ ಅಪರೂಪದ ಸೌಂದರ್ಯವನ್ನು ಸವಿಯುವಂತೆ ಮಾಡುತ್ತದೆ. ಹಲಸಿನ ಹಪ್ಪಳ ತಿನ್ನುವುದು, ಉಪ್ಪಿನಕಾಯಿ ನೆಚ್ಚಿಕ್ಕೊಳ್ಳುವುದು, ಗಂಜಿ ಕಾಯಿಸುವುದು, ಬೆಲ್ಲದ ನೀರು ನೀಡಿ ಉಪಚರಿಸುವುದು, ದೂರದಿಂದ ಬಂದ ವೆಂಕಣ್ಣಯ್ಯನವರಿಗೆ ತಮ್ಮ ಬಳಕೆಗೆ ಮಾತ್ರ ಉಳಿಸಿಕೊಂಡ ಬೆಲ್ಲದಲ್ಲಿಯೇ ಒಂದಷ್ಟನ್ನು ಗೋವಿಂದರಾಯರು ಕೊಡುವುದು ಇಂತಹ ಅನೇಕ ಸನ್ನಿವೇಶಗಳು ಕರಾವಳಿಯ ಒಳಭಾಗದಲ್ಲಿ ಬದುಕಿನ ನೈಜತೆಯನ್ನು ಅನಾರವಣಗೊಳಿಸುತ್ತವೆ, ಮಾತ್ರವಲ್ಲದೇ ಅಲ್ಲಿನ ಪರಿಸರದೊಂದಿಗೆ ಮುಖಾಮುಖಿಯಾಗಿಸುತ್ತವೆ ಎಲ್ಲಿಯೂ ಭಾರವೆನಿಸದೇ ಇರುವ ಅಧ್ಯಾಯಗಳಲ್ಲಿ ಗ್ರಹಣದ ವಿಷಯದ ಪ್ರಸ್ತಾಪ, ಸ್ವಾತಂತ್ರ್ಯೋತ್ಸವದ ಆಚರಣೆಯ ಸನ್ನಿವೇಶಗಳು, ಮತದಾನ ಸನ್ನಿವೇಶಗಳು, ಸಿದ್ದನಾಯಕ ಮತ್ತು ಕುಯೀರ ನಡತೆಗಳು ಓದುಗನ ಮನಸ್ಸನ್ನು ತನ್ನಲ್ಲಿರಿಸಿಕೊಂಡು ಸರಾಗ ಓದಿಗೆ ಇಂಬು ನೀಡುತ್ತವೆ. ಬಲ್ಲಾರಳ ನಾಯಕತ್ವ, ಸಾಕಮ್ಮನ ಭೂಮಿಯನ್ನು ತಮ್ಮ ಕುಟುಂಬಕ್ಕೆ ಉಳಿಸಿಕೊಳ್ಳುವ ಎಡೆಬಿಡದ ಪ್ರಯತ್ನ ಅಂದಿನ ಬದುಕಿನ ನೈಜತೆಯನ್ನು ಬಿಚ್ಚಿಡುತ್ತವೆ. ಪಾತ್ರಗಳ ನಿರ್ವಹಣೆಯ ವಿವೇಕಪೂರ್ಣ ಅನುಸಂಧಾನದಿಂದ ಹೊಸ ಸಮನ್ವಯದ ಸಾಧ್ಯತೆಗಳನ್ನು ಪರಿಚಯಿಸುತ್ತವೆ. ಹೊಸ ಜಗತ್ತಿನ ನಿರ್ಮಾಣದ ಹಾದಿಯಲ್ಲಿ ಆಶಾದಾಯಕ ಹೆಜ್ಜೆಗಳನ್ನಿರಿಸುವಂತೆ ಪ್ರೇರೆಪಿಸುತ್ತದೆ. ಹಮ್ಮು-ಬಿಮ್ಮುಗಳನ್ನು ಮುರಿದು ಮಾನವೀಯತೆ, ಪ್ರೀತಿ, ಸಮಾನತೆ ಗಳನ್ನು ವಿಕೃತಗೊಳ್ಳದ ಹಾಗೆ ನೋಡಿಕೊಳ್ಳುತ್ತದೆ.



ಇಂದಿನ ಕಾಲಘಟ್ಟದ ಜ್ವಲಂತ ಸಮಸ್ಯೆಗಳಾದ ನಗರೀಕರಣದ ತಲ್ಲಣಗಳು, ಪರಿಸರದ ಮೇಲಿನ ಅನಾಚಾರಗಳು, ರಾಜಕೀಯದ ಭ್ರಷ್ಟತೆ, ಹೊಸ ಹೊಸ ಮೂಢನಂಬಿಕೆಗಳಲ್ಲಿ ಜಡಗೊಳ್ಳುತ್ತಿರುವ ಬದುಕಿನ ದ್ವಂದ್ವ, ಯಾರದೋ ಸ್ವಾರ್ಥದ ಕಾರಣಕ್ಕಾಗಿ, ಯುದ್ಧದ ಉನ್ಮಾದಕ್ಕಾಗಿ ಜಗತ್ತಿನಲ್ಲಿನ ಮನುಷ್ಯರಿಗೆ ಒದಗಿದ ಸಂಕಟಮಯ ಸನ್ನಿವೇಶಗಳು, ಮಾನವೀಯತೆ ಸೋಲಿನ ಸನ್ನಿವೇಶಗಳಿಗೆ ಲೇಖಕ ಶಶಿಧರ ಹಾಲಾಡಿ ತಣ್ಣಗೆ ವಿರೋಧ ವ್ಯಕ್ತಪಡಿಸುತ್ತಾರೆ. ಜೀತ ಪದ್ಧತಿಯಿಂದ ಮಾಲಿಕತ್ವದ ಕಡೆಗೆ, ಅಸಮಾನತೆಯಿಂದ ಸಮಾನತೆಯ ಕಡೆಗೆ ಮೌನದಿಂದ ಮೆಲ್ಲನೆ ಪ್ರತಿಭಟನೆಯ ಕಡೆಗೆ ನೊಂದವರ ಬದುಕನ್ನು ಕೈಹಿಡಿದು ಕೊಂಡೊಯ್ಯುತ್ತಾರೆ. ನೂರೆಂಟು ಸಿದ್ಧಾಂತಗಳ ಮಂಡನೆಯ ಹವ್ಯಾಸಕ್ಕೆ ದೂರ ನಿಂತು ಸಹಜ ಬದುಕಿನ ಬದುಕಿಗೆ ಆಸರೆಯದವರ ಮಾತ್ರವಲ್ಲದೇ ಅವರ ನೆರಳಿನಲ್ಲಿ ಬದು ಕುವವರ ನೂರೆಂಟು ತಲ್ಲಣ, ತವಕ, ಏರುಪೇರುಗಳನ್ನು ಅಬ್ಬರವಿಲ್ಲದ, ಒಂದು ಹದದಲ್ಲಿ ರೂಪಗೊಂಡ ಪಾತ್ರಗಳು, ತೀರ ಸಹಜವೆನ್ನುವಂತೆ ಕಟ್ಟಿಕೊಡುವ, ಒಳನೋಟಗಳನ್ನು ಬೀರುವ ಅವರ ಕಥಾನಕ ಶೈಲಿ ತುಂಬ ಗಮನಸೆಳೆಯುತ್ತದೆ.

**-ಮಹಾದೇವ ಬಸರಕೋಡ**

## ಡೊನಾಲ್ಡ್ ಟ್ರಂಪ್ ಪುನರುಚ್ಚಾರ | ಕೆರಳಿದ ಇರಾನ್

# ಹೋರ್ಮುಜ್ ಜಲಸಂಧಿ ಅಮೇರಿಕಾ ಭಾಗ

• ಪ್ರಜೋದಯ ವರದಿ

**ವಾಷಿಂಗ್ಟನ್:** ಹೋರ್ಮುಜ್ ಜಲಸಂಧಿ ಅಮೇರಿಕಾದ ಭಾಗ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪುನರುಚ್ಚರಿಸಿದ್ದಾರೆ. ಈ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವ ತಮ್ಮ ಬೆದರಿಕೆಯನ್ನು ಮುಂದುವರಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಮಾಧ್ಯಮ ಖಾತೆ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಹೊಸ ಅಮೇರಿಕನ್ ಭಾಗ ಎಂದು ಗುರುತಿಸಿರುವ ಚಿತ್ರವೊಂದನ್ನು ಹಂಚಿಕೊಂಡಿದ್ದಾರೆ. ಇರಾನ್‌ನೊಂದಿಗೆ ಅಣು ಒಪ್ಪಂದದ ಸಾಧ್ಯತೆ ಕುರಿತು ಮಾತನಾಡುತ್ತಾ, ಅದು ಅಮೇರಿಕಾದ ಭಾಗವಾಗಿದೆ ಎಂದಿದ್ದಾರೆ. ಅಮೇರಿಕಾ ನೌಕಾಪಡೆಯು ಹೋರ್ಮುಜ್ ಜಲಸಂಧಿ ದಾಟಲು ಇದುವರೆಗೆ 1,000ಕ್ಕೂ ಹೆಚ್ಚು ಹಡಗುಗಳಿಗೆ ಭದ್ರತೆ ನೀಡಿದೆ. ಅಲ್ಲದೆ, ಜಲಸಂಧಿಯ ಮೂಲಕ ಒಂದೇ ದಿನದಲ್ಲಿ ಸುಮಾರು 16 ಮಿಲಿಯನ್ ಬ್ಯಾರಲ್ ತೈಲ ಸಾಗಣೆಯಾಗಿದೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ.

ಮೇ ತಿಂಗಳಿನಿಂದ ಇದುವರೆಗೆ 1,300 ವಾಣಿಜ್ಯ ಹಡಗುಗಳಿಗೆ ಅಮೇರಿಕಾ ಪಡೆಗಳು ಭದ್ರತೆ ಒದಗಿವೆ ಎಂದು ಅಮೇರಿಕಾ ಸೇನೆಯ ಸೆಂಟ್ರಲ್ ಕಮಾಂಡ್ ಮಾಹಿತಿ ನೀಡಿದೆ. ಆದರೆ, ಇರಾನ್ ಈ ಪ್ರತಿಪಾದನೆಯನ್ನು ತಳ್ಳಿಹಾಕಿದ್ದು, ಜಲಸಂಧಿಯನ್ನು ಯಾವುದೇ ಕಾರಣಕ್ಕೂ ಮತ್ತೆ ತೆರೆಯುವುದಿಲ್ಲವೆಂದು ಸ್ಪಷ್ಟಪಡಿಸಿದೆ.

**ಇರಾನ್ ತಿರುಗೇಟು**

ಟ್ರಂಪ್ ಹೇಳಿಕೆ ಖಂಡಿಸಿರುವ ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಮೊಹ್ಸೆನ್ ರೆಜಾಯಿ ಅವರು, ಅಮೇರಿಕಾ ತನ್ನ ಆಕ್ರಮಣಕಾರಿ ವರ್ತನೆಯನ್ನು ಬದಲಾಯಿಸಿ ಕೊಳ್ಳಬೇಕು. ಈ ಕುರಿತು ಬದ್ಧತೆಯನ್ನು ತೋರಬೇಕು. ಇಲ್ಲವಾದಲ್ಲಿ ಹೋರ್ಮುಜ್ ಜಲಸಂಧಿ ಮುಚ್ಚಿರುತ್ತದೆಯೇ ಹೊರತು, ಮತ್ತೆ ತೆರೆಯುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.




ಕೇವಲ ಮಾತುಕತೆಯಿಂದಷ್ಟೇ ಇದು ಬಗೆಹರಿಯುವುದಿಲ್ಲ. ಅಮೇರಿಕಾ ತನ್ನ ನಡವಳಿಕೆ ಯಲ್ಲಿ ಬದಲಾವಣೆ ತರಬೇಕು. ಒಮಾನ್ ಮತ್ತು ಇರಾನ್ ನಡುವೆ ಇರುವ ಹೋರ್ಮುಜ್ ಜಲಸಂಧಿಯು ಜಾಗತಿಕ ಇಂಧನ ಪೂರೈಕೆಯ ಶೇ.20ರಷ್ಟು ಪಾಲನ್ನು ನಿರ್ವಹಿಸುವ ಅತ್ಯಂತ ಪ್ರಮುಖ ಜಲಮಾರ್ಗವಾಗಿದೆ. ಇರಾನ್ ನಿಯಂತ್ರಣವನ್ನು ಪ್ರತಿಪಾದಿಸುತ್ತಿದ್ದರೂ, ಇತ್ತೀಚಿನ ದಿನಗಳಲ್ಲಿ ಅಮೇರಿಕಾದ ಬೆಂಬಲದೊಂದಿಗೆ ಮತ್ತು ಒಮಾನ್ ಮಾರ್ಗದ ಮೂಲಕ ಹಡಗುಗಳ ಸಂಚಾರ ಕ್ರಮೇಣ ಹೆಚ್ಚುತ್ತಿದೆ. ಅಮೇರಿಕಾ ಮತ್ತು ಇರಾನ್ ನಡುವಿನ ಈ ವಾಗ್ವಾದವು ಜಾಗತಿಕ ಮಟ್ಟದಲ್ಲಿ ತೈಲ ಮಾರುಕಟ್ಟೆ ಮತ್ತು ಕಡಲ ಭದ್ರತೆಯ ಮೇಲಿನ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

**ಪ್ರತೀಕಾರದ ಸುಂಕ ಘೋಷಿಸಿದ ಕೆನಡಾ**

ಅಮೇರಿಕಾ ಮತ್ತು ಕೆನಡಾ ನಡುವಿನ ವ್ಯಾಪಾರ ಮಾತುಕತೆ ವಿಫಲಗೊಂಡ ಬೆನ್ನಲ್ಲೇ, ಕೆನಡಾ ಪ್ರಧಾನಿ ಮಾರ್ಕ್ ಕಾರ್ನೆ ಅಮೇರಿಕಾ ವಿರುದ್ಧ ವಾಗ್ದಾಳಿ ನಡೆಸಿದ್ದು, ಪ್ರತೀಕಾರದ ಸುಂಕವನ್ನು ವಿಧಿಸುವುದಾಗಿ ಘೋಷಿಸಿದ್ದಾರೆ.

ಅಮೇರಿಕಾವು ಕೆನಡಾದ ಮುಂದೆ ಅಸಮಾನ ಮತ್ತು ಆರ್ಥಿಕವಾಗಿ ನಷ್ಟವುಂಟುಮಾಡುವ ಹೊಸ ಷರತ್ತುಗಳನ್ನು ಇಟ್ಟಿದೆ. ಇದು ಕೆನಡಾದ ಆರ್ಥಿಕತೆಯನ್ನು ಕುಗ್ಗಿಸುತ್ತದೆಂದು ಕಾರ್ನೆ ಆರೋಪಿಸಿದ್ದಾರೆ.

ವ್ಯಾಪಾರ ಮಾತುಕತೆ ಮುರಿದುಬಿದ್ದ ಪರಿಣಾಮ, ಕೆನಡಾದ ಸರಕುಗಳ ಮೇಲೆ (ಕೆನಡಾದ ಒಟ್ಟು ರಫ್ತಿನ ಶೇ.5.5) ಅಮೇರಿಕಾದ ಶೇ.50 ರಷ್ಟು ಹೊಸ ಸುಂಕಗಳು ಜಾರಿಗೆ ಬಂದಿವೆ. ಅದರಿಂದ ಹಾಕಿ ಸ್ಟಿಕ್‌ನಿಂದ ಹಿಡಿದು ಸಿಮೆಂಟ್ ವರೆಗಿನ ಉತ್ಪನ್ನಗಳ ಮೇಲೆ ಪರಿಣಾಮ ಬೀರಲಿದೆ. ಪ್ರಸ್ತುತ ಕೆನಡಾದ ವ್ಯಾಪಾರ ಯುದ್ಧದ ದಾಳಿಯಾಗಿದೆ ಎಂದು ಟೀಕಿಸಿದ ಕಾರ್ನೆ, ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡೆಗಳನ್ನು ಟೀಕಿಸಿದ್ದಾರೆ. ಅಮೇರಿಕಾದ ಪ್ರಸ್ತಾಪಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಅಮೇರಿಕಾಗೆ ಡಾಲರ್‌ಗೆ ಡಾಲರ್ ರೀತಿಯಲ್ಲಿ ತಕ್ಕ ಉತ್ತರ ನೀಡಲಾಗುವುದು ಎಂದು ಕಾರ್ನೆ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಕೆನಡಾದ ಈ ಹೊಸ ಸುಂಕಗಳು ಸೆ.8ರಿಂದ ಜಾರಿಗೆ ಬರಲಿದ್ದು, ವಿಶೇಷವಾಗಿ ಅಮೇರಿಕಾದ ಉಕ್ಕು ಮತ್ತು ಹಾಲಿನ (ಡೈರಿ) ಉದ್ಯಮಗಳನ್ನು ಗುರಿಯಾಗಿಸಿಕೊಳ್ಳಲಿವೆ. ಈ ಸಂಬಂಧ ಅಮೇರಿಕಾದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಅವರು ಮಾತನಾಡಿ, ಉಕ್ಕು, ಅಲ್ಯೂಮಿನಿಯಂ, ಆಟೋಮೊಬೈಲ್ ಮೇಲಿನ ಸುಂಕವನ್ನು ಕಡಿಮೆ ಮಾಡಲು ಕೆನಡಾಕ್ಕೆ ಆಫರ್ ನೀಡಲಾಗಿತ್ತು ಎಂದಿದ್ದಾರೆ. ಆದರೆ ಕೆನಡಾವು ಅಮೇರಿಕಾದ ಮದ್ಯ, ವಾಹನ ಮತ್ತು ಡೈರಿ ಉತ್ಪನ್ನಗಳ ವಿರುದ್ಧ ತಾರತಮ್ಯ ಎಸಗುತ್ತಿದೆ ಎಂದು ವೈಟ್ ಹೌಸ್ ಆರೋಪಿಸಿದೆ.

## ಲಂಕಾದಲ್ಲಿ ದೇವದತ್ ಪಡಿಕ್ಕಲ್ ದಾಖಲೆ ಕಂಪು

**ಕೊಲಂಬೊ:** ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಸತತ ಎರಡು ಶತಕಗಳನ್ನು ಸಿಡಿಸಿದ ಕನ್ನಡಿಗ ದೇವದತ್ ಪಡಿಕ್ಕಲ್ ಅವರು ಇದೀಗ ಹಲವು ದಾಖಲೆಗಳನ್ನು ತಮ್ಮ ಹೆಸರಿಗೆ ಬರೆಸಿ ಕೊಂಡಿದ್ದಾರೆ.

2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 23 ವರ್ಷಗಳಿಂದ ಅಬಾಧಿತವಾಗಿದ್ದ ಸ್ಟೀಫನ್ ಫ್ಲೆಮಿಂಗ್ ವಿಶ್ವದಾಖಲೆ, ಮೂರು ದಶಕಗಳಿಂದ ಅಬಾಧಿತವಾಗಿ ಉಳಿದಿದ್ದ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಸೌರವ್ ಗಂಗೂಲಿ ಸಾಧನೆಯನ್ನೂ ಇದೀಗ ದೇವದತ್ ಪಡಿಕ್ಕಲ್ ಮೀರಿ ನಿಂತಿದ್ದಾರೆ.

ಕೊಲಂಬೋದ ಪ್ರಸಿದ್ಧ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಭಾನುವಾರ ಆರಂಭವಾದ ದ್ವಿತೀಯ ಟೆಸ್ಟ್‌ನ ಮೊದಲ ದಿನವೇ ಅವರು ಭರ್ಜರಿ ಶತಕ ಸಿಡಿಸಿದರು. ಎರಡು ವರ್ಷಗಳ ನಂತರ ರಾಷ್ಟ್ರೀಯ ತಂಡದಲ್ಲಿ ಕಾಣಿಸಿಕೊಂಡ 26 ವರ್ಷದ ಕರ್ನಾಟಕ ರಣಜಿ ತಂಡದ ನಾಯಕ ಗಾಲೆಯಲ್ಲಿ ನಡೆದ ಪ್ರಥಮ ಟೆಸ್ಟ್‌ನಲ್ಲಿ (167, 44) ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದಿದ್ದರು. ಇದೀಗ ದ್ವಿತೀಯ ಟೆಸ್ಟ್‌ನಲ್ಲಿ 168 ಎಸೆತಗಳಲ್ಲಿ ಶತಕ ಪೂರೈಸಿ 117 ರನ್‌ಗಳಿಗೆ ನಿರ್ಗಮಿಸುವ ಮೂಲಕ ಭಾರತದ ಇನ್ನಿಂಗ್ಸ್‌ಗೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಹೀಗಾಗಿ ಭಾರತ ತಂಡ ಮೊದಲ ದಿನಾಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ ಭರ್ತಿ 300 ರನ್ ಗಳಿಸಿದೆ.

**ಪಡಿಕ್ಕಲ್ ಐತಿಹಾಸಿಕ ದಾಖಲೆಗಳಾವವು**

ದ್ರಾವಿಡ್, ಸಚಿನ್ ಶ್ರೇಷ್ಠ ಸಾಧನೆ ಪತನ: ವಿದೇಶಿ ನೆಲದಲ್ಲಿ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತೀಯ ಬ್ಯಾಟರ್ ಗಳಿಸಿದ ಗರಿಷ್ಠ ರನ್‌ಗಳ (328 ರನ್) ಸಾರ್ವಕಾಲಿಕ ದಾಖಲೆಯನ್ನು ಪಡಿಕ್ಕಲ್ ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ 1998–99ರ ನ್ಯೂಜಿಲೆಂಡ್ ಪ್ರವಾಸದಲ್ಲಿ ರಾಹುಲ್ ದ್ರಾವಿಡ್ (321 ರನ್) ಹಾಗೂ 1997ರ ಲಂಕಾ ಪ್ರವಾಸದಲ್ಲಿ ಸಚಿನ್ ತೆಂಡೂಲ್ಕರ್ (290 ರನ್) ನಿರ್ಮಿಸಿದ್ದ ದಾಖಲೆಗಳು ಪತನಗೊಂಡಿವೆ.

**3ನೇ ಕ್ರಮಾಂಕದಲ್ಲಿ ಹೊಸ ಇತಿಹಾಸ:** ಶ್ರೀಲಂಕಾದಲ್ಲಿ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಮೂರನೇ



ಕ್ರಮಾಂಕದಲ್ಲಿ ಬ್ಯಾಟ್ ಬೀಸಿ ಗರಿಷ್ಠ ರನ್ ಕಲೆಹಾಕಿದ ಪ್ರವಾಸಿ ಆಟಗಾರ ಎಂಬ ಹೆಗ್ಗಳಿಕೆಗೆ ಪಡಿಕ್ಕಲ್ ಪಾತ್ರರಾಗಿದ್ದಾರೆ. 2003ರಲ್ಲಿ ನ್ಯೂಜಿಲೆಂಡ್‌ನ ಸ್ಟೀಫನ್ ಫ್ಲೆಮಿಂಗ್ (307 ರನ್) ಬರೆದಿದ್ದ ದಾಖಲೆಯನ್ನು ಇವರು ಅಳಿಸಿಹಾಕಿದ್ದಾರೆ.

**ಶ್ರೀಲಂಕಾದಲ್ಲಿ 3ನೇ ಕ್ರಮಾಂಕದಲ್ಲಿ ಸತತ 2 ಶತಕ**

| ಆಟಗಾರ | ರನ್ | ವರ್ಷ |
|---|---|---|
| ದೇವದತ್ ಪಡಿಕ್ಕಲ್ | 328 | 2026 |
| ಸ್ಟೀಫನ್ ಫ್ಲೆಮಿಂಗ್ | 307 | 2003 |
| ಶಾನ್ ಮಾರ್ಷ್ | 240 | 2011 |
| ಮೊಹಮ್ಮದ್ ಅಶ್ರಫುಲ್ | 232 | 2013 |
| ಜೊನಾಥನ್ ಟ್ರಾಟ್ | 193 | 2012 |

**ಲಂಕಾ ನೆಲದಲ್ಲಿ ಸತತ 2 ಶತಕ**

ಶ್ರೀಲಂಕಾದಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಒಂದೇ ಸರಣಿಯಲ್ಲಿ ಎರಡು ಶತಕ ಸಿಡಿಸಿದ ವಿಶ್ವದ ಮೊದಲ ಪ್ರವಾಸಿ ಆಟಗಾರ ಎಂಬ ವಿಶಿಷ್ಟ ವಿಶ್ವದಾಖಲೆಗೆ ಕನ್ನಡಿಗ ಭಾಜನ ರಾಗಿದ್ದಾರೆ. ಶ್ರೀಲಂಕಾ ವಿರುದ್ಧ ಅವರದೇ ತವರಲ್ಲಿ ಸರಣಿಯೊಂದರಲ್ಲಿ ಒಂದಕ್ಕಿಂತ ಹೆಚ್ಚು ಶತಕ ಸಿಡಿಸಿದ 7ನೇ ಭಾರತೀಯ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ಲಂಕಾ ನೆಲದಲ್ಲಿ ನಡೆದ ಟೆಸ್ಟ್ ಸರಣಿಯೊಂದರಲ್ಲಿ ಭಾರತದ ಪರ ಗರಿಷ್ಠ ರನ್ ಗಳಿಸಿದ ಆಟಗಾರರ ಪಟ್ಟಿಯಲ್ಲಿ ಸಚಿನ್ ತೆಂಡೂಲ್ಕರ್ (390 ರನ್), ಶಿಖರ್ ಧವನ್ (358 ರನ್) ಹಾಗೂ ವೀರೇಂದ್ರ ಸೆಹ್ವಾಗ್ (348 344 ರನ್) ನಂತರದ ಸ್ಥಾನವನ್ನು (328 ರನ್) ಪಡಿಕ್ಕಲ್ ತಮ್ಮದಾಗಿಸಿಕೊಂಡಿದ್ದಾರೆ.

## ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿಯಾದ ಗೌತಮ್ ಅದಾನಿ



• ಪ್ರಜೋದಯ ವರದಿ

**ಬೆಂಗಳೂರು:** ಅದಾನಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಗೌತಮ್ ಅದಾನಿ ಅವರು ಭಾನುವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿವಾಸಕ್ಕೆ ಭೇಟಿಯಾಗಿ ಹಲವು ಹೊತ್ತು ಮಾತುಕತೆ ನಡೆಸಿದರು.

ರಾಜ್ಯದಲ್ಲಿ ಉದ್ಯಮ ಅವಕಾಶ ಹಾಗು ಬಹುನಿರೀಕ್ಷಿತ ಬೆಂಗಳೂರು ಸುರಂಗ ರಸ್ತೆ ಯೋಜನೆಯ ಗುತ್ತಿಗೆ ಹಂಚಿಕೆಗೆ ಸಂಬಂಧಿಸಿ ಇಬ್ಬರ ನಡುವೆ ಮಹತ್ವದ ಚರ್ಚೆ ನಡೆದಿದೆ ಎನ್ನಲಾಗಿದೆ.

ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ವರೆಗೆ ಸುಮಾರು 17 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಿಸಲು ಸರ್ಕಾರ ಮುಂದಾಗಿದೆ. ಈ ಯೋಜನೆಗೆ ಸರ್ಕಾರ ಅಂದಾಜು 17,698 ಕೋಟಿ ರೂ. ವೆಚ್ಚ ನಿಗದಿಪಡಿಸಿದೆ. ಆದರೆ, ಟೆಂಡರ್ ಪ್ರಕ್ರಿಯೆಯಲ್ಲಿ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ 22,267 ಕೋಟಿ ರೂ. ಮೊತ್ತವನ್ನು ನಮೂದಿಸಿ ಅತಿ ಕಡಿಮೆ ಬಿಡ್ ಸಲ್ಲಿಸಿದ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದು ತಿಳಿದುಬಂದಿದೆ. ಸರ್ಕಾರದ ಅಂದಾಜಿಗಿಂತ ಈಮೊತ್ತ ಸುಮಾರು 4,500 ಕೋಟಿ ರೂ.ಗೂ ಹೆಚ್ಚಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಿದ್ದ ಇತರ ಸಂಸ್ಥೆಗಳ ಬಿಡ್‌ಗಳಿಗೆ ಹೋಲಿಸಿದರೆ ಅದಾನಿ ಸಂಸ್ಥೆಯ ಬಿಡ್ ಮೊತ್ತ ಕಡಿಮೆಯಾಗಿದೆ. ಟೆಂಡರ್ ಅಂತಿಮಗೊಳಿಸುವ ಮುನ್ನವೇ ಸುರಂಗ ಮಾರ್ಗ ನಿರ್ಮಾಣವಾಗಲಿರುವ ಸ್ಥಳಗಳಲ್ಲಿ ಅಗತ್ಯವಿರುವ ಪ್ರಾಥಮಿಕ ಭೂ ಸಮೀಕ್ಷೆ, ಮಣ್ಣಿನ ಗುಣಮಟ್ಟ ಪರೀಕ್ಷೆ ಸೇರಿ ಪ್ರಮುಖ ತಾಂತ್ರಿಕ ಪರೀಕ್ಷೆಗಳನ್ನು ಅದಾನಿ ಸಂಸ್ಥೆ ಪೂರ್ಣಗೊಳಿಸಿದೆ ಎನ್ನಲಾಗಿದೆ.

ಅದಾನಿ ಸಂಸ್ಥೆಯು ಗುತ್ತಿಗೆ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿದ್ದು, ಅಧಿಕೃತವಾಗಿ ಕಾಮಗಾರಿ ವಹಿಸಿಕೊಳ್ಳುವ ಕುರಿತು ಮಾತುಕತೆಗಳು ನಡೆಯುತ್ತಿವೆ ಎಂದು ತಿಳಿದುಬಂದಿದೆ.

ಯೋಜನೆಯ ವೆಚ್ಚ ಹೆಚ್ಚಳಕ್ಕೆ ಸಂಬಂಧಿಸಿ ರಾಜ್ಯ ಸಚಿವ ಸಂಪುಟದ ಅಂತಿಮ ಅನುಮೋದನೆ ಪಡೆಯಬೇಕಿರುವ ಹಿನ್ನಲೆಯಲ್ಲಿ ಗೌತಮ್ ಅದಾನಿ ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭೇಟಿಯಾಗಿದ್ದಾರೆಂದು ಮೂಲಗಳು ತಿಳಿಸಿವೆ.

## ಔದ್ಯೋಗಿಕ ಬದುಕಿನ ಮೇಲೂ ರ‍್ಯಾಗಿಂಗ್ ದುಷ್ಪರಿಣಾಮ

• ಪ್ರಜೋದಯ ವರದಿ

**ಹಾಸನ:** ರ‍್ಯಾಗಿಂಗ್‌ನಿಂದ ಉಂಟಾಗುವ ಮಾನಸಿಕ ಸಮಸ್ಯೆಗಳು ವಿದ್ಯಾರ್ಥಿ ಉದ್ಯೋಗಕ್ಕೆ ಸೇರಿದ ನಂತರವೂ ಕಾಡಲಿವೆ ಎಂದು ನಗರಠಾಣೆ ಇನ್‌ಸ್ಪೆಕ್ಟರ್ ಎ.ಟಿ.ಭಾನು ಅವರು ತಿಳಿಸಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ರ‍್ಯಾಗಿಂಗ್ ವಿರುದ್ಧ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಲಸಕ್ಕೆ ಸೇರಿದ ನಂತರ ತಂಡದ ಭಾಗವಾಗಿ ಕಾರ್ಯನಿರ್ವಹಿಸಲು ಕೂಡ ರ‍್ಯಾಗಿಂಗ್‌ನಿಂದ ಉಂಟಾಗುವ ಮಾನಸಿಕ ಆಘಾತ ಕಾಡಲಿದೆ ಎಂದು ಹೇಳಿದರು.

1998ರಲ್ಲಿ ರ‍್ಯಾಗಿಂಗ್ ತಡೆಗಟ್ಟಲು ಸುಪ್ರೀಂಕೋರ್ಟ್ ಮಾರ್ಗಸೂಚಿ ಬಿಡುಗಡೆ ಮಾಡಿತು. ಮಾನಸಿಕ–ದೈಹಿಕವಾಗಿ ಕಿರುಕುಳ ನೀಡುವುದು, ಅಸಹ್ಯಕರ ರೀತಿಯಲ್ಲಿ ಮಾತನಾಡುವುದು, ಕಿರಿಯ ವಿದ್ಯಾರ್ಥಿಗಳಿಂದ ಬಲವಂತವಾಗಿ ಯಾವುದೇ ಕೆಲಸ ಮಾಡಿಸುವುದು ರ‍್ಯಾಗಿಂಗ್ ವ್ಯಾಪ್ತಿಗೆ ಬರಲಿದೆ. ಕಾಲೇಜು ಕ್ಯಾಂಪಸ್‌ನ ಆಚೆ ಕೂಡರ‍್ಯಾಗಿಂಗ್‌ಗೆ ನಿರ್ಬಂಧ ವಿದೆ. ಯುಜಿಸಿ 2009ರಲ್ಲಿ ಹೊರಡಿಸಿದ ಮಾರ್ಗಸೂಚಿಯಲ್ಲಿರ‍್ಯಾಗಿಂಗ್ ವ್ಯಾಪ್ತಿಗೆಯಾವುದೆಲ್ಲ ಬರುತ್ತದೆ ಎಂಬುದನ್ನು ನಿರೂಪಿಸಲಾಗಿದೆ ಎಂದು ವಿವರಿಸಿದರು.



ರ‍್ಯಾಗಿಂಗ್‌ನಿಂದ ವಿದ್ಯಾರ್ಥಿಗಳು ಓದನ್ನು ಅರ್ಧಕ್ಕೆ ನಿಲ್ಲಿಸುವ ಸಾಧ್ಯತೆ ಇದೆ. ತೀರಾ ಅತಿರೇಕಕ್ಕೆ ಹೋದಾಗ ಆತ್ಮಹತ್ಯೆಗೆ ಶರಣಾಗುವ ಅಪಾಯವೂ ಇದೆ. ಕಾಲೇಜಿಗೆ ಪ್ರವೇಶಾತಿ ಹೊಂದುವ ಸಂದರ್ಭದಲ್ಲಿ ಪ್ರತಿ ವಿದ್ಯಾರ್ಥಿಯು ರ‍್ಯಾಗಿಂಗ್ ಮಾಡುವುದಿಲ್ಲ ಎಂದು ಅಫಿಡವಿಟ್ ಸಲ್ಲಿಸಿರುತ್ತಾರೆ. ಮುಂದೆ ಒಂದು ವೇಳೆ ರ‍್ಯಾಗಿಂಗ್ ಪ್ರಕರಣ ದಾಖಲಾದರೆ ಅದರಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳ ವಿರುದ್ಧ ತನಿಖೆ ನಡೆಸುವಾಗ ಅಫಿಡವಿಟ್‌ನಲ್ಲಿರುವ ಅಂಶಗಳನ್ನು ಪರಿಗಣಿಸಲಾಗುವುದು ಎಂದರು.

ಆರ್ಯನ್ ಖಂಡೇವಾಲ ವರ್ಸಸ್ ಯಶ್‌ರಾಜ್ ಪ್ರಕರಣದ ಉದಾಹರಣೆ ನೀಡಿ, ರ‍್ಯಾಗಿಂಗ್ ಪ್ರಕರಣ ದಾಖಲಾದರೆ ಅದರಿಂದ ವಿದ್ಯಾರ್ಥಿಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಸಿದರು.

ಪ್ರಾಂಶುಪಾಲ ಡಾ.ಎಸ್. ಪ್ರದೀಪ್ ಅವರು ಮಾತನಾಡಿ, ರ‍್ಯಾಗಿಂಗ್‌ನಿಂದ ವಿದ್ಯಾರ್ಥಿಗಳ ಆತ್ಮಸ್ಥೈರ್ಯ ಕುಸಿಯಲಿದೆ. ಕಾಲೇಜು ಕ್ಯಾಂಪಸ್‌ಗಳಲ್ಲಿ ಈಗ ರ‍್ಯಾಗಿಂಗ್ ಮೊದಲಿನಷ್ಟು ತೀವ್ರವಾಗಿಲ್ಲ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿ ವಿಷಯಗಳಿಗೆ ಸಂಬಂಧಿಸಿದ ಡೀನ್ ಡಾ.ಇಂದಿರಾ ಬಹದ್ದೂರ್, ಪ್ರಾಧ್ಯಾಪಕಿ ಡಾ.ಜಿ.ಕೆ.ಕಲಾವತಿ, ಹಾಸ್ಟೆಲ್ ಆಡಳಿತಾಧಿಕಾರಿ ಜಿ.ಮಂಜುನಾಥ್, ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

## ಪ್ರಧಾನಿ ಭಾರತ ಭೇಟಿಗೆ ಆತುರವಿಲ್ಲ: ಬಾಂಗ್ಲಾದೇಶ

• ಪ್ರಜೋದಯ ವರದಿ

**ಢಾಕಾ:** ಪ್ರಧಾನಿ ತಾರಿಖ್ ರೆಹಮಾನ್ ಅವರ ಭಾರತ ಭೇಟಿಗೆ ಯಾವುದೇ ಆತುರ ಇಲ್ಲ. ಭಾರತ ದೊಂದಿಗೆ ಉತ್ತಮ ಬಾಂಧವ್ಯ ಬಯಸುತ್ತೇವೆ ಯಾದರೂ ರಾಷ್ಟ್ರದ ಹಿತಾಸಕ್ತಿ ವಿಚಾರದಲ್ಲಿ ರಾಜಿ ಇಲ್ಲ ಎಂದು ಬಾಂಗ್ಲಾದೇಶ ತಿಳಿಸಿದೆ.

ದ್ವಿಪಕ್ಷೀಯ ಮಾತುಕತೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ ಬಳಿಕ ಸೂಕ್ತ ಸಂದರ್ಭದಲ್ಲಿ ಪ್ರಧಾನಿಯವರು ಭಾರತ ಪ್ರವಾಸ ಕೈಗೊಳ್ಳಲಿದ್ದಾರೆಂದು ವಿದೇಶಾಂಗ ಇಲಾಖೆ ರಾಜ್ಯ ಸಚಿವ ಹುಮಾಯೂನ್ ಕಬೀರ್ ತಿಳಿಸಿದ್ದಾರೆ.

ನೆರೆಯ ದೇಶ ಭಾರತದೊಂದಿಗೆ ನಾವು ಸಕಾರಾತ್ಮಕ ಸಂಬಂಧವನ್ನು ಬಯಸುತ್ತೇವೆ. ಆದರೆ, ಬಾಂಗ್ಲಾ ದೇಶದ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ಇದು ಕಾರ್ಯಗತಗೊಳ್ಳಬೇಕಿದೆ. ನಮ್ಮ ನಿರೀಕ್ಷೆಯಂತೆ ನಾಳೆಯೇ ಒಪ್ಪಂದ ಏರ್ಪಟ್ಟರೆ ಮುಂದಿನ ವಾರವೇ ಭಾರತಕ್ಕೆ ಪ್ರಧಾನಿ ಭೇಟಿ ನೀಡಬಹುದೆಂದು ಕಬೀರ್ ಅವರು ಹೇಳಿದ್ದಾರೆ.



ಸೆ.12, 13ರಂದು ನಡೆಯಲಿರುವ ಬ್ರಿಕ್ಸ್ ಶೃಂಗ ಸಭೆಗೆ ರೆಹಮಾನ್ ಅವರನ್ನು ಭಾರತವು ಆಹ್ವಾನಿಸಿದೆ. ಆದರೆ, ಪದ ಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಹಸ್ತಾಂತರ ವಿಚಾರವಾಗಿ ಉಭಯ ದೇಶಗಳ ನಡುವೆ ವೈಮನಸ್ಸು ಉಂಟಾದ ಕಾರಣಕ್ಕೆ, ತಾರಿಖ್ ಅವರು ಭಾರತಕ್ಕೆ ಬರುವುದು ಇನ್ನೂ ಖಚಿತವಾಗಿಲ್ಲ.

## ಎ.ಟಿ.ಆರ್. ಸಕ್ರಿಯ ರಾಜಕಾರಣಕ್ಕೆ ಮರಳಲಿ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಸಮಗ್ರ ಅಭಿವೃದ್ಧಿ, ರೈತರ ಹಿತಾಸಕ್ತಿ ಹಾಗೂ ಬಡವರ ಕಲ್ಯಾಣದ ದೃಷ್ಟಿಯಿಂದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ರಾಜಕಾರಣದಿಂದ ಹಿಂದೆ ಸರಿಯದೆ ಮತ್ತೆ ಸಕ್ರಿಯ ರಾಜಕಾರಣಕ್ಕೆ ಮರಳಬೇಕೆಂದು ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು ಒಕ್ಕೊರಲಿನಿಂದ ಒತ್ತಾಯಿಸಿದರು.

ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಖಾಸಗಿ ಕಲ್ಯಾಣ ಮಂಟಪದಲ್ಲಿ ಎ.ಟಿ.ರಾಮಸ್ವಾಮಿ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು ಹಮ್ಮಿಕೊಂಡಿದ್ದ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಂಡು, ಮುಂದಿನ ದಿನಗಳಲ್ಲಿ ಅವರನ್ನು ಸಕ್ರಿಯ ರಾಜಕಾರಣಕ್ಕೆ ಕರೆತರುವ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಸಂಘಟಿತವಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು.

ಮುಖಂಡರಾದ ಹುಲಿಕಲ್ ರಾಜಶೇಖರ್ ಅವರು ಮಾತನಾಡಿ, ಎ.ಟಿ.ರಾಮಸ್ವಾಮಿ ಅವರು



ತಾಲ್ಲೂಕಿಗೆ ನೀಡಿರುವ ಕೊಡುಗೆ ಹಾಗೂ ಜನಪರ ಕಾಳಜಿ, ಪ್ರಾಮಾಣಿಕತೆ ಜನಪರ ನಾಯಕತ್ವದ ಅಗತ್ಯ ಮುಖ್ಯವಾಗಿದೆ ಎಂದರು.

ಎಚ್.ಕೊಂಗಳಲೆ ಕೇಶವಮೂರ್ತಿ ಅವರು ಮಾತನಾಡಿ, ಕಲುಷಿತ ರಾಜಕಾರಣದಿಂದ ಬೇಸತ್ತು ರಾಮಸ್ವಾಮಿ ಅವರು ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ತಾಲ್ಲೂಕಿನ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳಿಗೆ ಧ್ವನಿಯಾಗಲು ಅವರಂತಹ ರಾಜಕಾರಣಿಗಳ ಸೇವೆ ಅತ್ಯವಶ್ಯಕ ಎಂದು ಹೇಳಿದರು.

ಮಾಗಲು ಬಸವರಾಜು ಅವರು ಮಾತನಾಡಿ, ರೈತರ ಸಮಸ್ಯೆಗಳು, ನೀರಾವರಿ, ಕೃಷಿ, ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ, ಶಿಕ್ಷಣ, ಉದ್ಯೋಗ ಸೇರಿ ಹಲವು ಕ್ಷೇತ್ರಗಳಲ್ಲಿ ತಾಲ್ಲೂಕು ಅಭಿವೃದ್ಧಿ ಕಾಣಲು ರಾಮಸ್ವಾಮಿ ಅವರ ಜನಪರ ಕಾಳಜಿಯಿಂದ ಸಾಧ್ಯವಾಗಿದೆ. ಜನರ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಹಾಗೂ ದೂರದೃಷ್ಟಿಯುಳ್ಳ ನಾಯಕತ್ವ ಅವರಲ್ಲಿದೆ. ಈ ಹಿನ್ನಲೆಯಲ್ಲಿ ರಾಮಸ್ವಾಮಿ ಅವರು ಮತ್ತೆ ರಾಜಕಾರಣಕ್ಕೆ ಬಂದು ಜನಸೇವೆ ಮುಂದುವರಿಸಬೇಕೆಂದು ಆಗ್ರಹಿಸಿದರು.

ರಾಮಸ್ವಾಮಿ ಅವರ ರಾಜಕೀಯ ಪ್ರವೇಶವು ಯಾವುದೇ ವ್ಯಕ್ತಿ ಅಥವಾ ಪಕ್ಷದ ವಿರುದ್ಧದ ಹೋರಾಟವಲ್ಲ. ಬದಲಾಗಿ ತಾಲ್ಲೂಕಿನ ಅಭಿವೃದ್ಧಿ ಹಾಗೂ ಜನರ ಭವಿಷ್ಯದ ದೃಷ್ಟಿಯಿಂದ ಮೂಡಿರುವ ಜನರ ಆಶಯವಾಗಿದೆ ಎಂದು ಸ್ಪಷ್ಟಪಡಿಸಿದರು.

ವಿಜಾಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ವೆಂಕಟೇಶ್ ಅವರು ಮಾತನಾಡಿ, ಅಧಿಕಾರ ಕ್ಕಿಂತ ಜನಸೇವೆಗೆ ಆದ್ಯತೆ ನೀಡುವ ನಾಯಕರ ಅಗತ್ಯವಿದ್ದು, ರಾಮಸ್ವಾಮಿ ಅವರು ತಮ್ಮ ರಾಜಕೀಯ ಅನುಭವವನ್ನು ಮತ್ತೊಮ್ಮೆ ಜನರ ಸೇವೆಗೆ ಬಳಸಿಕೊಳ್ಳಬೇಕೆಂದು ತಿಳಿಸಿದರು.

ಸಭೆಯಲ್ಲಿ ಮಲ್ಲಿಪಟ್ಟಣ ಹೋಬಳಿಯ ವಿವಿಧ ಗ್ರಾಮಗಳ ಮುಖಂಡರು, ಎ.ಟಿ. ರಾಮಸ್ವಾಮಿ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು ಪಾಲ್ಗೊಂಡಿದ್ದರು.

## ಪಡಿಕ್ಕಲ್ ಶತಕ: ಭಾರತ 300ಕ್ಕೆ 5

• ಪ್ರಜೋದಯ ವರದಿ

**ಕೊಲಂಬೊ:** ಭಾರತ ಮತ್ತು ಶ್ರೀಲಂಕಾ ನಡುವಿನ 2ನೇ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಂಭಿಸಿದ ಟೀಂ ಇಂಡಿಯಾ ಮೊದಲ ದಿನದಾಟದಲ್ಲಿ ಪ್ರಾಬಲ್ಯ ಮೆರೆಯಿತು. ಆದಾಗ್ಯೂ ತಂಡ ಪ್ರಮುಖ 5 ವಿಕೆಟ್‌ಗಳನ್ನು ಕಳೆದುಕೊಂಡು 300 ರನ್ ಕಲೆಹಾಕಿದೆ.

ತಂಡದ ಪರ ಕನ್ನಡಿಗ ದೇವದತ್ ಪಡಿಕ್ಕಲ್ 117 ಶತಕ ಬಾರಿಸಿದರೆ, ನಾಯಕ ಶುಭ್‌ಮನ್ ಗಿಲ್ 50 ಅರ್ಧಶತಕ ಬಾರಿಸಿದರು. ದಿನದಾಟದ ಕೊನೆಯ ಓವರ್‌ನಲ್ಲಿ ರವೀಂದ್ರ ಜಡೇಜಾ 43 ವಿಕೆಟ್ ಕೈಚೆಲ್ಲಿದ್ದು ತಂಡವನ್ನು ಕೊಂಚ ಹಿನ್ನಡೆಗೆ ತಳ್ಳಿದೆ. ಉಳಿದಂತೆ ಧ್ರುವ್ ಜುರೆಲ್ 7 ರನ್ ಮತ್ತು ಸರಾಂಶ್ ಜೈನ್ 4 ರನ್ ಗಳಿಸಿ ಇಂದಿಗೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

**ಗಿಲ್– ಪಡಿಕ್ಕಲ್ ಜೊತೆಯಾಟ**

ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾಕ್ಕೆ ಉತ್ತಮ ಆರಂಭ ಸಿಗಲಿಲ್ಲ. 37 ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡಿತು. ಕೆ.ಎಲ್. ರಾಹುಲ್ 18 ರನ್‌ಗಳಿಗೆ ಔಟ್ ಆದರು. ನಂತರ ಯಶಸ್ವಿ ಜೈಸ್ವಾಲ್ 45 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ನಂತರ ಜೊತೆಯಾದ ನಾಯಕ ಶುಭ್‌ಮನ್ ಗಿಲ್ ಮತ್ತು ದೇವದತ್ ಪಡಿಕ್ಕಲ್ ಶತಕದ



ಜೊತೆಯಾಟವನ್ನು ನೀಡಿ ತಂಡದ ಇನ್ನಿಂಗ್ಸ್ ನಿಭಾಯಿಸಿದರು.

**ಶತಕ ಬಾರಿಸಿದ ಪಡಿಕ್ಕಲ್**

ನಾಯಕ ಶುಭ್‌ಮನ್ ಗಿಲ್ 108 ಎಸೆತಗಳಲ್ಲಿ ಆರು ಬೌಂಡರಿಗಳೊಂದಿಗೆ 50 ರನ್‌ಗಳ ಇನ್ನಿಂಗ್ಸ್ ಆಡಿದರು. ಇದು ಶ್ರೀಲಂಕಾದಲ್ಲಿ ಗಿಲ್ ಅವರ ಮೊದಲ ಟೆಸ್ಟ್ ಅರ್ಧಶತಕವೂ ಆಗಿತ್ತು. ಆದರೆ ಅರ್ಧಶತಕ ಬಾರಿಸಿದ ಬೆನ್ನಲ್ಲೇ ಗಿಲ್ ಔಟಾದರು. ಆ ನಂತರ ತಂಡದ ಇನ್ನಿಂಗ್ಸ್ ನಿಭಾಯಿಸಿದ ದೇವದತ್ ಪಡಿಕ್ಕಲ್ 193 ಎಸೆತಗಳಲ್ಲಿ 117 ರನ್ ಬಾರಿಸುವ ಮೂಲಕ ಈ ಸರಣಿಯಲ್ಲಿ ಸತತ ಎರಡನೇ ಶತಕ ಬಾರಿಸಿದರು.

**43 ರನ್ ಬಾರಿಸಿ ಜಡೇಜಾ ಔಟ್**

ಆದರೆ ರಿಷಭ್ ಪಂತ್ ಗಾಯಗೊಂಡು ನಿವೃತ್ತರಾಗಿರುವುದು ತಂಡಕ್ಕೆ ದೊಡ್ಡ ಹೊಡೆತವಾಗಿದೆ. ಪಂತ್ ಗಾಯದಿಂದಾಗಿ ಬ್ಯಾಟಿಂಗ್‌ಗೆ ಬಂದ ರವೀಂದ್ರ ಜಡೇಜಾ 83 ಎಸೆತಗಳಲ್ಲಿ 43 ರನ್ ಗಳಿಸಿ ದಿನದಾಟದ ಕೊನೆಯ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಧ್ರುವ್ ಜುರೆಲ್ 7 ರನ್ ಮತ್ತು ಸರಾಂಶ್ ಜೈನ್ 4ರನ್ ಗಳಿಸಿ ಅಜೇಯರಾಗಿ ಉಳಿದಿದ್ದು ಎರಡನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದು ಕೊಂಡಿದ್ದಾರೆ.

**ಮೂರು ವಿಕೆಟ್ ಪಡೆದ ಫೆರ್ನಾಂಡೊ**

ಮತ್ತೊಂದೆಡೆ, ಶ್ರೀಲಂಕಾ ಪರ ಅಸಿತಾ ಫೆರ್ನಾಂಡೊ ಅದ್ಭುತ ಬೌಲಿಂಗ್ ಮಾಡಿ ಮೂರು ವಿಕೆಟ್ ಪಡೆದರೆ, ಲಹಿರು ಕುಮಾರ ಮತ್ತು ಕೇಶರ ನುವಂತ ತಲಾ ಒಂದು ವಿಕೆಟ್ ಪಡೆದರು. ಇತರ ಬೌಲರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ. ಇದರ ಲಾಭ ಪಡೆದ ಭಾರತದ ಬ್ಯಾಟರ್‌ಗಳು ತಂಡವನ್ನು 300 ರನ್‌ಗಳ ಗಡಿ ದಾಟಿಸುವಲ್ಲಿ ಯಶಸ್ವಿಯಾದರು.

## ಏಷ್ಯನ್ ಗೇಮ್ಸ್: ಸಹಜಾಗೆ ಆಘಾತ

### ಟೆನಿಸ್ ವಿಭಾಗದಲ್ಲಿ ಏಳು ಮಂದಿಗೆ ಮಾತ್ರ ಅವಕಾಶ

• ಪ್ರಜೋದಯ ವರದಿ

**ನವದೆಹಲಿ:** ಭಾರತದ ಅಗ್ರ ಟೆನಿಸ್ ಆಟಗಾರ್ತಿಯರಾದ ಸಹಜಾ ಯಮಲಪಲ್ಲಿ, ವೈಷ್ಣವಿ ಅಡ್ಕರ್, ವೈದೇಹಿ ಚೌಧರಿ ಅವರನ್ನು ಏಷ್ಯನ್ ಗೇಮ್ಸ್ ಭಾರತ ತಂಡದಿಂದ ಕೈಬಿಡಲಾಗಿದೆ. ಅದರಿಂದಾಗಿ ಮಹಿಳಾ ಸಿಂಗಲ್ಸ್‌ನಲ್ಲಿ ರಾಷ್ಟ್ರದ ಸವಾಲು ಇಲ್ಲದಂತಾಗಿದೆ.

ಜಪಾನ್‌ನ ಐಚಿ ನಗೋಯಾದಲ್ಲಿ ಸೆ.19ರಿಂದ ಅ.4ರ ವರೆಗೆ ನಡೆಯಲಿರುವ ಕೂಟಕ್ಕೆ ಕ್ರೀಡಾ ಸಚಿವಾಲಯವು 35 ಕ್ರೀಡಾ ವಿಭಾಗಗಳಿಗೆ 492 ಅಥ್ಲೀಟ್‌ಗಳನ್ನು ಅಂತಿಮಗೊಳಿಸಿದೆ. ಆದರೆ, ಟೆನಿಸ್ ವಿಭಾಗಕ್ಕೆ ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಶಿಫಾರಸು ಮಾಡಿದ್ದ ಎಲ್ಲಾ ಆಟಗಾರರನ್ನು ಪರಿಗಣಿಸಿಲ್ಲ. ಆರು ಮಹಿಳೆಯರು ಸೇರಿ 12 ಮಂದಿಯನ್ನು ಎಐಟಿಎ ಶಿಫಾರಸು ಮಾಡಿತ್ತು. ಆ ಪೈಕಿ ಏಳು ಮಂದಿಯನ್ನು ಮಾತ್ರ ತಂಡದಲ್ಲಿ ಉಳಿಸಲಾಗಿದೆ. ಅಂಕಿತಾ ರೈನಾ ಮತ್ತು ಋತುಜಾ ಭೋಸಲೆ ಅವರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಪ್ರಾರ್ಥನಾ ತೋಂಬರೆ ಮತ್ತು ಪುರುಷರ ಸಿಂಗಲ್ಸ್ ಭರವಸೆಯ



ಆಟಗಾರ ಮಾನಸ್ ಧಾಮನೆ ಅವರಿಗೂ ಅವಕಾಶ ದೊರಕಿಲ್ಲ.

ಡಬ್ಲ್ಯುಟಿಎ ರ‍್ಯಾಂಕಿಂಗ್ ಪಟ್ಟಿಯಲ್ಲಿ 344ನೇ ಸ್ಥಾನದಲ್ಲಿರುವ ಸಹಜಾ ಅವರು ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿಯಾಗಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ ವೈಷ್ಣವಿ (390) ಮತ್ತು ವೈದೇಹಿ (437) ಇದ್ದಾರೆ.

ಭಾರತ ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದ ಸಹಜಾ ಅವರಿಗೆ ಕ್ರೀಡಾ ಸಚಿವಾಲಯದ ನಿರ್ಧಾರವು ಆಘಾತ ತಂದಿದೆ. ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಲು ಬಹಳ ಕಾತುರದಿಂದ ಕಾಯುತ್ತಿದ್ದೆ. ಆದರೆ, ಅವಕಾಶ ಸಿಗದಿರುವುದು ಭಾರೀ ನಿರಾಸೆಯಾಗಿದೆ ಎಂದು ಸಹಜಾ ಅಸಮಾಧಾನ ಹೊರಹಾಕಿದ್ದಾರೆ.

## ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

# ವಿಕ್ಟರ್, ಆನ್ ಮುಡಿಗೆ ಕಿರೀಟ

• ಪ್ರಜೋದಯ ವರದಿ

**ನವದೆಹಲಿ:** ಫ್ರೆಂಚ್ ತಾರೆ ವಿಕ್ಟರ್ ಲನೆಯೆ ಮತ್ತು ದಕ್ಷಿಣ ಕೊರಿಯಾದ ಅನುಭವಿ ಆನ್ ಸೆ ಯಂಗ್ ಅವರು ನವದೆಹಲಿಯಲ್ಲಿ ಭಾನುವಾರ ಮುಕ್ತಾಯಗೊಂಡ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಮಿಶ್ರ ಡಬಲ್ಸ್‌ನಲ್ಲಿ ಫ್ರೆಂಚ್ ಜೋಡಿಯು ಚಿನ್ನ ಗೆದ್ದ ಕೆಲವೇ ಕ್ಷಣಗಳಲ್ಲಿ ವಿಕ್ಟರ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದ ಫ್ರಾನ್ಸ್‌ನ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರರಾದರು.

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ 21 ವರ್ಷದ ವಿಕ್ಟರ್ 21–11, 21–11ರಿಂದ ಜಪಾನ್‌ನ ಕೊಡೈ ನರವೋಕಾ ಅವರನ್ನು ನಿರಾಯಾಸವನ್ನು ಮಣಿಸಿದರು.

ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ವಿಕ್ಟರ್ ಅವರು ಗೆಲುವಿನ ಹೊಡೆತ ನಂತರ ಹರ್ಷಚಿತ್ತರಾಗಿ ಕುಣಿದಾಡಿ, ತಮ್ಮ ಕೋಚ್ ಅನ್ನು ಅಪ್ಪಿಕೊಂಡರು. 2023ರಲ್ಲಿ ಬೆಳ್ಳಿ ಗೆದ್ದಿದ್ದ 11ನೇ ರ‍್ಯಾಂಕ್‌ನ ನರವೋಕಾ ಅವರಿಗೆ ಪದಕದ ಬಣ್ಣ ಬದಲಾಯಿಸಲು ಸಾಧ್ಯವಾಗಲಿಲ್ಲ.



ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಆನ್ ಸೆ 21–17, 21–14ರ ನೇರ ಗೇಮ್‌ಗಳಿಂದ ಕಳೆದ ಬಾರಿಯ ಚಾಂಪಿಯನ್ ಅಕಾನೆ ಯಮಾಗುಚಿ ಅವರನ್ನು ಮಣಿಸಿ, ಎರಡನೇ ಬಾರಿ ಪ್ರಶಸ್ತಿ ಗೆದ್ದರು. ಹಾಲಿ ಒಲಿಂಪಿಕ್ ಚಾಂಪಿಯನ್ ಆಗಿರುವ ಆನ್ ಕೇವಲ 49 ನಿಮಿಷಗಳ ಹೋರಾಟದಲ್ಲಿ ಗೆದ್ದರು.

ನಾಲ್ಕನೇ ಚಿನ್ನದ ಪದಕದ ನಿರೀಕ್ಷೆಯಲ್ಲಿದ್ದ ಜಪಾನ್‌ನ ಅನುಭವಿ ಆಟಗಾರ್ತಿಗೆ ನಿರಾಸೆಯಾಯಿತು. ಆದರೆ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆರು ಪದಕಗಳನ್ನು ಗೆದ್ದ ಮೊದಲ ಸಿಂಗಲ್ಸ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಅವರದಾಯಿತು.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಥಾಮ್ ಜಿಕ್ವೆಲ್ ಮತ್ತು ಡೆಲ್ಫಿನ್ ಡೆಲ್ರು ಜೋಡಿಯು 22–20, 19–21, 21–15ರಿಂದ ಅಗ್ರ ಶ್ರೇಯಾಂಕದ ಫೆಂಗ್ ಯಾನ್ ಝೆ ಮತ್ತು ಹುವಾಂಗ್ ಡಾಂಗ್ ಪಿಂಗ್ (ಚೀನಾ) ಅವರನ್ನು ರೋಚಕ ಹೋರಾಟದಲ್ಲಿ ಸೋಲಿಸಿತು. ಈ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಫ್ರಾನ್ಸ್‌ಗೆ ಚೊಚ್ಚಲ ಚಿನ್ನದ ಪದಕ ತಂದುಕೊಟ್ಟಿತು.

ದಕ್ಷಿಣ ಕೊರಿಯಾದ ಬೇಕ್ ಹ–ನಾ ಮತ್ತು ಲೀ ಸೋ–ಹೀ ಜೋಡಿಯು ಮಹಿಳಾ ಡಬಲ್ಸ್ ಫೈನಲ್‌ನಲ್ಲಿ 21–15, 21–15ರಿಂದ ಅಗ್ರ ಶ್ರೇಯಾಂಕಿತ ಚೀನಾದ ಜೋಡಿ ಲಿಯು ಶೆಂಗ್ಶು ಮತ್ತು ಟ್ಯಾನ್ ನಿಂಗ್ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿತು.

ಪುರುಷರ ಡಬಲ್ಸ್ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಚೀನಾದ ಲಿಯಾಂಗ್ ವೀಕೆಂಗ್ ಮತ್ತು ವಾಂಗ್ ಚಾಂಗ್ 21–17, 21–16ರಿಂದ ಮಲೇಷ್ಯಾದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ಅವರನ್ನು ಸೋಲಿಸಿ ಚಿನ್ನದ ಪದಕ ಗೆದ್ದರು.

## ದೇಶದಲ್ಲಿ ಎಚ್1 ಎನ್1 ಹೊಸ ತಳಿ ಪತ್ತೆಯಾಗಿಲ್ಲ, ಆಂತಕ ಬೇಡ: ಐಸಿಎಂಆರ್

• ಪ್ರಜೋದಯ ವರದಿ

**ನವದೆಹಲಿ:** ದೇಶದಲ್ಲಿ ಎಚ್1ಎನ್1ನ ಹೊಸ ತಳಿ ಪತ್ತೆಯಾಗಿಲ್ಲ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮೂಲಗಳು ಭಾನುವಾರ ತಿಳಿಸಿವೆ. ಜನರು ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಅದು ಹೇಳಿದೆ. ದೆಹಲಿ ಮತ್ತು ದೇಶದ ಇತರೆಡೆ ಹಂದಿ ಜ್ವರ ಹೆಚ್ಚುತ್ತಿದೆಂದು ಅದು ತಿಳಿಸಿದೆ.

ಸದ್ಯ ಕಂಡುಬಂದಿರುವ ಎಚ್1ಎನ್1 ಅನ್ನು ತಡೆಯಲು ಶಿಫಾರಸು ಮಾಡಲಾದ ಲಸಿಕೆಗಳು ಪರಿಣಾಮಕಾರಿಯಾಗಿವೆ ಎಂದು ಐಸಿಎಂಆರ್ ಮೂಲಗಳು ತಿಳಿಸಿವೆ.

ಎಚ್1ಎನ್1 ಸೇರಿ ಋತುಮಾನದ ವೈರಾಣು ಕಾಯಿಲೆಗಳು ತನ್ನಷ್ಟಕ್ಕೆ ತಾನೇ ವಾಸಿಯಾಗುತ್ತವೆ. ಜ್ವರ, ಕೆಮ್ಮು, ತಲೆನೋವು ಮತ್ತು ಮೈಕೈ ನೋವು ಸಾಮಾನ್ಯ ಲಕ್ಷಣಗಳಾಗಿವೆ. ಸೂಕ್ತ ಆರೈಕೆ ಮತ್ತು ವಿಶ್ರಾಂತಿಯಿಂದಲೇ ಜನ ಚೇತರಿಸಿಕೊಳ್ಳುತ್ತಾರೆ ಎಂದು ವರದಿ ತಿಳಿಸಿದೆ. ಆದರೂ, ಮಕ್ಕಳು, ವೃದ್ಧರು, ದೀರ್ಘ ಕಾಲೀನ ಆರೋಗ್ಯ ಸಮಸ್ಯೆ ಹೊಂದಿರುವವರು




ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಒಂದೊಮ್ಮೆ ಈ ರೋಗಲಕ್ಷಣಗಳು ಕಡಿಮೆಯಾಗದಿದ್ದರೆ, ಗಂಭೀರ ಸ್ಥಿತಿಗೆ ಬಂದರೆ ವೈದ್ಯರನ್ನು ಸಂಪರ್ಕಿಸುವಂತೆ ಸಲಹೆ ನೀಡಲಾಗಿದೆ. ನವದೆಹಲಿಯಲ್ಲಿ ಈವರೆಗೆ 1,777 ಎಚ್1ಎನ್1 ಪ್ರಕರಣಗಳು ದಾಖಲಾಗಿವೆ. ಈ ಹಿನ್ನೆಲೆಯಲ್ಲಿ ಜನರಿಗೆ ಸಲಹೆ ಬಿಡುಗಡೆ ಮಾಡಿರುವ ಆರೋಗ್ಯ ಇಲಾಖೆ, ಸ್ವಚ್ಛತೆ ಕಾಪಾಡುವಂತೆ, ಜನಸಂದಣಿ ಪ್ರದೇಶದಿಂದ ದೂರವಿರುವಂತೆ ಮತ್ತು ಸೂಕ್ತ ವೈದ್ಯಕೀಯ ಸಲಹೆ ಪಡೆಯುವಂತೆ ಸೂಚಿಸಿದೆ.

CMYK CMYK CMYK CMYK

# ವಿಪಕ್ಷಗಳಿಂದ ಇಂದು ವಿಧಾನಸೌಧ ಮುತ್ತಿಗೆ

• ಪ್ರಜೋದಯ ವರದಿ

**ಬೆಂಗಳೂರು :** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ ನಾಗೇಂದ್ರ ಅವರ ರಾಜೀನಾಮೆಗೆ ಅಗ್ರಹಿಸಿ ಸದನದಲ್ಲಿ ಹೋರಾಟ ನಡೆಸಿರುವ ಪ್ರತಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಸೋಮವಾರ ವಿಧಾನಸೌಧ ಮುತ್ತಿಗೆ ಆಂದೋಲನ ನಡೆಸಲಿವೆ.



ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು, ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ, ಸೋಮವಾರ ಫ್ರೀಡಂ ಪಾರ್ಕ್ ನಲ್ಲಿ ಸಮಾವೇಶ ನಡೆಸಿ ನಂತರ ವಿಧಾನಸೌಧ ಮುತ್ತಿಗೆ ಹಾಕಲಾಗುವುದೆಂದು ಹೇಳಿದರು.

ಫ್ರೀಡಮ್ ಪಾರ್ಕ್‌ನಿಂದ ಆರಂಭವಾಗಲಿರುವ ವಿಧಾನಸೌಧ ಮುತ್ತಿಗೆ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿ ಎನ್‌ಡಿಎ ಮೈತ್ರಿಕೂಟದ ನಾಯಕರು ಹಾಗೂ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಸಚಿವರಾದ ಸಚಿವ ಬಿ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ನಡೆಸಿರುವ ಹೋರಾಟ ಸದನದ ಒಳಗೂ ಮತ್ತು ಹೊರಗೂ ಪ್ರತಿಭಟನೆ ತೀವ್ರಗೊಳ್ಳಲಿದೆ ಎಂದು ತಿಳಿಸಿದರು.

ಪ್ರಮುಖ ದಲಿತ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟಿದ್ದ 187 ಕೋ.ರೂ. ಹಣವನ್ನು ಲೂಟಿ ಮಾಡಿ, ಅದನ್ನು ತೆಲಂಗಾಣ ಹಾಗೂ ಕರ್ನಾಟಕದ ಚುನಾವಣೆಗಳಿಗೆ ಕಾಂಗ್ರೆಸ್ ಬಳಸಿಕೊಂಡಿದೆ. ಈ ಅಕ್ರಮದಲ್ಲಿ ಮಾಜಿ ಸಚಿವ ನಾಗೇಂದ್ರ ಭಾಗಿಯಾಗಿದ್ದು, ಅವರ ವಿರುದ್ಧ ಸಿಬಿಐ ಹಾಗೂ ಇಡಿ ಚಾರ್ಜ್‌ಶೀಟ್ ಸಲ್ಲಿಸಿವೆ. ಸುಪ್ರೀಂ ಕೋರ್ಟ್‌ನ ಮನೋಜ್ ವರ್ಸಸ್ ಕೇಂದ್ರ ಸರ್ಕಾರ (2005) ತೀರ್ಪಿನ ಮಾನದಂಡಗಳ ಪ್ರಕಾರವೂ ಅವರು ಸಚಿವರಾಗಲು ಅನರ್ಹರು ಎಂದರು.

ನಾಗೇಂದ್ರ ವಿರುದ್ಧ ಕನಿಷ್ಠ 35 ಪ್ರಮುಖ ಪ್ರಕರಣಗಳಿವೆ. ಪರಮೇಶ್ವರ್ ಅವರು ಗೃಹ ಸಚಿವರಾಗಿದ್ದಾಗ ಸಿಬಿಐ ಹಾಗೂ ಇಡಿ ತನಿಖೆ ಸರಿಯಾಗಿದೆ ಎಂದಿದ್ದರು. ಆದರೆ, ಉಪಮುಖ್ಯಮಂತ್ರಿಯಾದ ತಕ್ಷಣ ತನಿಖಾ ಸಂಸ್ಥೆಗಳು ದುರುದ್ದೇಶಪೂರಿತವಾಗಿ ನಡೆದುಕೊಳ್ಳುತ್ತಿವೆ ಎಂದು ಹೇಳಿಕೆ ನೀಡುತ್ತಿರುವುದು ಕಾಂಗ್ರೆಸ್‌ನ ದ್ವಂದ್ವ ನೀತಿಯನ್ನು ತೋರಿಸುತ್ತದೆ. ಸಿಬಿಐ ರಾಜ್ಯಪಾಲರಿಂದ ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದರೂ ಸರ್ಕಾರ ಅನುಮತಿ ನೀಡದೆ ರಕ್ಷಣೆ ಮಾಡುತ್ತಿದೆ ಎಂದು ಆರೋಪಿಸಿದರು.

ಎಐಸಿಸಿ ನಾಯಕ ರಾಹುಲ್ ಗಾಂಧಿ ನಿರಂತರವಾಗಿ ಅದಾನಿ ವಿರುದ್ಧ ಆರೋಪ ಮಾಡುತ್ತಿದ್ದರೆ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಅದೇ ಅದಾನಿಗೆ ರೆಡ್ ಕಾರ್ಪೆಟ್ ಹಾಸಿ ಉದ್ಯಮಕ್ಕೆ ಸ್ವಾಗತ ಕೋರುತ್ತಿದೆ. ಅದಾನಿ ಒಬ್ಬ ಉದ್ಯಮಿ ಎಂಬುದನ್ನು ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿಗೆ ಮನವರಿಕೆ ಮಾಡಿಕೊಡಲಿ. ದೆಹಲಿಯಲ್ಲಿ ವಿರೋಧ, ರಾಜ್ಯದಲ್ಲಿ ಸ್ವಾಗತ ಎನ್ನುವುದು ಕಾಂಗ್ರೆಸ್‌ನ ಮತ್ತೊಂದು ನಾಟಕ ಎಂದು ವಾಗ್ದಾಳಿ ನಡೆಸಿದರು.

**ಉದ್ಯಾನವನಗಳ ಜಾಗ ಬಳಕೆ ಕಾಯ್ದೆಗೆ ವಿರೋಧ**

ಟನೆಲ್ ರೋಡ್ ಯೋಜನೆಗೆ ನಗರದ ಶೇ.5ರಷ್ಟು ಪಾರ್ಕ್ ಜಾಗ ಹಾಗೂ ಓಪನ್ ಸ್ಪೇಸ್ ಬಳಸಿಕೊಳ್ಳಲು ಕಾಯ್ದೆ ತರಲು ಸರ್ಕಾರ ಹೊರಟಿದೆ. ಲಾಲ್‌ಬಾಗ್, ಸ್ಯಾಂಕಿ ಕೆರೆ ಭಾಗದ ಮರಗಳನ್ನು ಕಡಿಯಲು ಸಚಿವ ಡಿ.ಕೆ. ಶಿವಕುಮಾರ್ ಕಣ್ಣಿಟ್ಟಿದ್ದಾರೆ. ಪರಿಸರ ಪ್ರೇಮಿ ಎಂದು ತೋರ್ಪಡಿಸಿಕೊಳ್ಳುವ ರಾಹುಲ್ ಗಾಂಧಿ ಬೆಂಗಳೂರಿಗೆ ಬಂದು ಇಲ್ಲಿ ಕಡಿಯಲಿರುವ ಮರಗಳನ್ನು ತಬ್ಬಿಕೊಂಡು ಪ್ರತಿಭಟಿಸಲಿ ಎಂದು ಅಶೋಕ್ ಸವಾಲು ಹಾಕಿದರು.

ನೈಸ್ ಯೋಜನೆಯು ರೈತರ ಜಮೀನನ್ನು ಅಕ್ರಮವಾಗಿ ಕಬಳಿಸಿದ ಕಪಟ ಯೋಜನೆಯಾಗಿದ್ದು, ಈ ಯೋಜನೆ ವಿರುದ್ಧ ಬಿಜೆಪಿ ಈ ಹಿಂದೆಯೂ ಹೋರಾಟ ನಡೆಸಿದೆ. ಹೆಚ್.ಡಿ.ಕುಮಾರಸ್ವಾಮಿ ಅವರ ನೈಸ್ ಟೋಲ್ ಕಟ್ಟಬೇಡಿ ಎಂಬ ಕರೆಯನ್ನು ನಾವು ಬೆಂಬಲಿಸುತ್ತೇವೆ ಎಂದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ಕೋರ್ಟ್‌ನಲ್ಲಿದೆ. ನಮ್ಮ ಸುದೀರ್ಘ ಪಾದಯಾತ್ರೆಯ ಹೋರಾಟದ ಫಲವಾಗಿ ಸಿಎಂ 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ಕೋರ್ಟ್‌ನ ಮುಂದಿನ ಆದೇಶ ಆಧರಿಸಿ ಮುಂದಿನ ಹೋರಾಟ ರೂಪಿಸಲಾಗುವುದು.

# ಕಾಲೇಜು ಸಮಗ್ರ ಅಭಿವೃದ್ಧಿಗೆ ಆದ್ಯತೆ: ಶಾಸಕ ಸಿಮೆಂಟ್ ಮಂಜು



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಕುಡುಗರವಳ್ಳಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವುದರ ಜೊತೆಗೆ ಶೈಕ್ಷಣಿಕ ಗುಣಮಟ್ಟ ಹಾಗು ದಾಖಲಾತಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಭರವಸೆ ನೀಡಿದರು.

ಕಾಲೇಜಿನಲ್ಲಿ ಶನಿವಾರ ನಡೆದ ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಸಭೆಯಲ್ಲಿ ಮಾತನಾಡಿದ ಅವರು, ಕಾಲೇಜಿನ ಮೂಲಸೌಕರ್ಯ ಹಾಗು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಹತ್ವದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಶುದ್ಧ ಕುಡಿಯುವ ನೀರು, ವಿದ್ಯುತ್, ಸಿಸಿಟಿವಿ ಕ್ಯಾಮರಾ ಅಳವಡಿಕೆ, ಗ್ರಂಥಾಲಯ ಅಭಿವೃದ್ಧಿ ಸೇರಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ವಿವಿಧ ಸೌಲಭ್ಯ ಕಲ್ಪಿಸುವ ಕುರಿತು ಪ್ರಾಂಶುಪಾಲರು, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಮತ್ತು ಸಿಡಿಸಿ ಸದಸ್ಯರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದರು.

ಕಾಲೇಜಿನಲ್ಲಿ ಪ್ರಸ್ತುತ ಇರುವ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಗುರುತಿಸಿ, ಹಂತ ಹಂತವಾಗಿ ಪರಿಹರಿಸಲಾಗುವುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮೂಲಭೂತ ಸೌಕರ್ಯಗಳ ಕೊರತೆ ಅಡ್ಡಿಯಾಗದಂತೆ ಕ್ರಮ ವಹಿಸಲಾಗುವುದು. ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸುವುದರ ಜೊತೆಗೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

**ಉಪನ್ಯಾಸಕರ ಕೊರತೆ ನೀಗಿಸಲು ಒತ್ತಾಯ**

ಕಾಲೇಜಿನ ವಿವಿಧ ವಿಭಾಗಗಳಲ್ಲಿ ಉಪನ್ಯಾಸಕರ ಕೊರತೆ ಇರುವ ಕುರಿತು ಮಾಹಿತಿ ಪಡೆದಿದ್ದೇನೆ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗಬಾರದು. ಖಾಲಿ ಇರುವ ಹುದ್ದೆಗಳಿಗೆ ಅಗತ್ಯ ಉಪನ್ಯಾಸಕರನ್ನು ನೇಮಕ ಮಾಡುವಂತೆ ಶೀಘ್ರದಲ್ಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಈ ಸಂಬಂಧ ಸಂಬಂಧಪಟ್ಟ ಸಚಿವರು ಹಾಗು ಅಧಿಕಾರಿಗಳ ಗಮನ ಸೆಳೆಯಲಾಗುವುದೆಂದು ಹೇಳಿದರು.

ಗುರು ಹಿರಿಯರು ಕಟ್ಟಿ ಬೆಳೆಸಿರುವ ಕಾಲೇಜನ್ನು ಉಳಿಸಿ, ಮತ್ತಷ್ಟು ಅಭಿವೃದ್ಧಿಪಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆ ಜವಾಬ್ದಾರಿಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ವಿದ್ಯಾರ್ಥಿಗಳ ಭವಿಷ್ಯ ಹಾಗು ಶೈಕ್ಷಣಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ಕಾಲೇಜಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ಭರವಸೆ ನೀಡಿದರು.

ಸರ್ಕಾರಿ ಕಾಲೇಜುಗಳು ಗ್ರಾಮೀಣ ಭಾಗದ ಬಡ ಹಾಗು ಮಧ್ಯಮ ವರ್ಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪ್ರಮುಖ ಆಸರೆಯಾಗಿವೆ. ಹೀಗಾಗಿ ಕಾಲೇಜಿನಲ್ಲಿರುವ ಕೊರತೆಗಳನ್ನು ನಿವಾರಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ವಾತಾವರಣ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ. ಸಿಡಿಸಿ ಸದಸ್ಯರು, ಪ್ರಾಂಶುಪಾಲರು ಹಾಗು ಸಿಬ್ಬಂದಿಯ ಸಹಕಾರದೊಂದಿಗೆ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಕೆಲಸಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದೆಂದರು.

ಸಭೆಯಲ್ಲಿ ಸಿಡಿಸಿ ಸದಸ್ಯರಾದ ಸುಶೀಲ್ ಸೋಮಶೇಖರ್, ಮೋಹನ್, ಸುದೀಶ್, ಕೌಶಿಕ್, ಕಾಲೇಜಿನ ಪ್ರಾಂಶುಪಾಲೆ ಡಾ. ಸಹನಾ ಮತ್ತಿತರರಿದ್ದರು.

# ಸಕಾರಾತ್ಮಕ ಚಿಂತನೆಯಿಂದ ಉನ್ನತ ಗುರಿ ಸಾಧ್ಯ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಸಮಯಕ್ಕೆ ಆದ್ಯತೆ ನೀಡಬೇಕು. ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಉನ್ನತ ಗುರಿ ತಲುಪಬೇಕೆಂದು ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರು ಸಲಹೆ ನೀಡಿದರು.




ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಎ.ಪಿ.ಜೆ. ಪಿಯು ಕಾಲೇಜಿನ ಆಡಳಿತ ಮಂಡಳಿಯಿಂದ ಪಿಯುಸಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ನವೋನ್ನತಿ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮನುಷ್ಯ ತನ್ನ ಹೃದಯದಲ್ಲಿ ಮಾನವೀಯತೆಗೆ ಜಾಗ ಕೊಡಬೇಕು. ಸತ್ಕಾರ್ಯ, ಇನ್ನೊಬ್ಬರಿಗೆ ಒಳಿತು ಬಯಸುವ ಗುಣ ನಮ್ಮದಾಗ ಬೇಕೆಂದರೆ ಸದಾ ಧನಾತ್ಮಕ ವಿಷಯಗಳತ್ತ ಗಮನ ಹರಿಸಬೇಕು. ಆಧುನಿಕ ದಿನಗಳಲ್ಲಿ ಮೊಬೈಲ್ ಪ್ರಭಾವ ಹೆಚ್ಚಾಗುತ್ತಿದೆ. ಅದರಲ್ಲಿ ಒಳಿತು-ಕೆಡಕು ಎರಡೂ ಇರುತ್ತದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಬೇಕಾದುದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಮನಸ್ಸು ಫಲವತ್ತಾದ ಭೂಮಿ. ನಾವು ಯಾವ ಬೀಜ ಬಿತ್ತುತ್ತೇವೆಯೋ ಅದೇ ಫಲ ಸಿಗುತ್ತದೆ. ಇದನ್ನು ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಳ್ಳಬೇಕೆಂದರು.

ಸಂಪನ್ಮೂಲ ವ್ಯಕಿ ಡಾ.ರಾಹುಲ್ ದೇವರಾಜ್ ಅವರು ಮಾತನಾಡಿ, ಮಕ್ಕಳು ದೊಡ್ಡ ಕನಸುಗಳನ್ನು ಕಾಣಬೇಕು. ನಮ್ಮಿಂದ ಆಗುವುದಿಲ್ಲವೆಂಬ ಸಂಕುಚಿತ ಮನೋಭಾವದಿಂದ ಹೊರಬಂದು ಏನನ್ನಾದರೂ ಸಾಧಿಸುತ್ತೇನೆಂಬ ಛಲವಿದ್ದರೆ ಜೀವನದಲ್ಲಿ ಮುಂದೆ ಬರಬಹುದು. ಮಕ್ಕಳು ಪಠ್ಯಪುಸ್ತಕ ಅಧ್ಯಯನ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕೆಂದರು.

ಮಹಾರಾಷ್ಟ್ರದಲ್ಲಿ ಐಫೋನ್ ಕೊಡಿಸಿ ಎಂದು ಯುವಕನೊಬ್ಬ ಪರ್ವತದಿಂದ ಬಿದ್ದ ಘಟನೆ ಮನ ಕಲುಕುತ್ತಿದೆ. ಮಗನನ್ನು ಉಳಿಸಲು ಬಂದ ತಂದೆ ಹಾಗು ತಾಯಿ ಇಬ್ಬರು ಭಾರೀ ಪರ್ವತದಿಂದ ಜಿಗಿದು ಸಾವಿಗೆ ಶರಣಾಗಿದ್ದಾರೆ. ವಿದ್ಯಾರ್ಥಿಗಳು ಸರಳತೆ ಮೈಗೂಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಸಂದೇಶದಂತೆ ಸರಳತೆ ಪಾಲಿಸಬೇಕು. ಜೀವನವನ್ನು ಬ್ರಾಂಡ್ ಮಾಡಿಕೊಳ್ಳಬೇಕೆ ಹೊರತು ಮೊಬೈಲ್ ಹಾಗು ಧರಿಸುವ ಬಟ್ಟೆಗಳಿಂದ ಅಲ್ಲವೆಂದು ಕಿವಿಮಾತು ಹೇಳಿದರು.

2025ರ ಸಾಲಿನ ಪಿಯುಸಿಯಲ್ಲಿ ರಾಜ್ಯಕ್ಕೆ 3ನೇ ರ‍್ಯಾಂಕ್, ಜಿಲ್ಲೆಗೆ ತೃತೀಯ ಸ್ಥಾನ ಹಾಗು ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿನಿ ಹೆಚ್.ಜಿ. ಅರ್ಪಿತಾ ಅವರಿಗೆ 1 ಲಕ್ಷ ರೂ. ನಗದು ಪುರಸ್ಕಾರವನ್ನು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿ.ಕೆ.ದೇವರಾಜ್, ಮುಖ್ಯ ನಿರ್ದೇಶಕ ಡಿ.ಮುರಳಿ ನೀಡಿದರು. ಪ್ರಾಂಶುಪಾಲ ರಾಮಣ್ಣ ಮಾತನಾಡಿದರು. ಕಾಲೇಜು ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಇಂದು ವಿದ್ಯುತ್ ವ್ಯತ್ಯಯ



• ಪ್ರಜೋದಯ ವರದಿ

**ಹಾಸನ :** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ನಗರ ಉಪವಿಭಾಗದ ವ್ಯಾಪ್ತಿಯಲ್ಲಿ ರಿಂಗ್‌ರೋಡ್ ಫೀಡರ್‌ನ ಮಾರ್ಗ ನಿರ್ವಹಣೆ ಕಾಮಗಾರಿಯ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಆ.24 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರ ವರೆಗೆ ಪಿ ಅಂಡ್ ಟಿ ಕ್ವಾಟ್ರ್ರಸ್, ಡೈರಿ ಸರ್ಕಲ್, ರಿಂಗ್‌ರಸ್ತೆ, ಕೆ.ಇ.ಬಿ ಆಫೀಸ್ ಹಿಂಭಾಗ, ಆನಂದ ಲಾಯರ್ ಮನೆ ರೋಡ್, ಜುವೆಲ್‌ರ‍್ಯಾಕ್ ಹೋಟೆಲ್, ಶಂಕರಿಪುರಂ, ಶಂಕರಿಮಠ ರಸ್ತೆ, ಕರೀಗೌಡ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಿಯಮಿತವಾಗಿ ವಿದ್ಯುತ್ ವ್ಯತ್ಯಯವಾಗುವು ದರಿಂದ ಸಾರ್ವಜನಿಕರು ನಿಗಮದೊಂದಿಗೆ ಸಹಕರಿಸಿಬೇಕೆಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯಪಾಲಕ ಅಭಿಯಂತರರು(ವಿ) ತಿಳಿಸಿದ್ದಾರೆ.

# ನಾಗೇಂದ್ರ ಪರ ಸರ್ಕಾರ ನಿಲ್ಲಲಿದೆ : ಯತೀಂದ್ರ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಕಲಬುರಗಿ :** ವಾಲ್ಮೀಕಿ ಹಗರಣ ಪ್ರಕರಣದಲ್ಲಿ ರಾಜ್ಯ ಸರ್ಕಾರ ಎಸ್‌ಐಟಿ ತನಿಖೆ ನಡೆಸಿದ್ದು,ಎಸ್‌ಐಟಿ ವರದಿಯಲ್ಲಿ ನಾಗೇಂದ್ರ ಅವರನ್ನು ಆರೋಪಿಯನ್ನಾಗಿ ಮಾಡಿಲ್ಲವೆಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ.

ಸಚಿವ ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಸಿಬಿಐ ಬರೆದ ಪತ್ರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು,ಇಡಿ ಹಾಗೂ ಸಿಬಿಐ ಕೇಂದ್ರ ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತವೆ. ವಾಲ್ಮೀಕಿ ಹಗರಣದಲ್ಲಿ 87 ಕೋ.ರೂ. ತೆಗೆದಿದ್ದ ಆರೋಪವಿದ್ದು, ಈ ಪೈಕಿ 79 ಕೋ.ರೂ. ಈಗಾಗಲೇ ವಾಪಸ್ ಪಡೆಯಲಾಗಿದೆ.ಉಳಿದ ಹಣವನ್ನೂ ವಸೂಲಿ ಮಾಡಲಾಗುವುದು. ಸರ್ಕಾರದ ಹಣ ಎಲ್ಲಿಗೂ ಹೋಗಿಲ್ಲವೆಂದು ತಿಳಿಸಿದರು.

ನಾಗೇಂದ್ರ ವಾಲ್ಮೀಕಿ ಹಗರಣದಲ್ಲಿ ಭಾಗಿಯಾಗಿರುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ.ರಾಜಕೀಯ ಕಾರಣಕ್ಕಾಗಿ ಅವರನ್ನು ಗುರಿಯಾಗಿಸಲಾಗುತ್ತಿದೆ, ಕಾಂಗ್ರೆಸ್ ಪಕ್ಷ ಹಾಗೂ ಸಚಿವರು ನಾಗೇಂದ್ರ ಪರವಾಗಿ ನಿಲ್ಲಲಿದ್ದಾರೆ . ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಚಿವ ಸಂಪುಟ ರಚನೆಗೆ 2 ಸಾವಿರ ಕೋ.ರೂ. ಕಲೆಕ್ಷನ್ ಮಾಡಿದ್ದಾರೆಂಬ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಕ್ಕೆ ಪ್ರತಿಕ್ರಿಯಿಸಿದ ಯತೀಂದ್ರ ಸಿದ್ದರಾಮಯ್ಯ , ಯತ್ನಾಳ್ ಮೊದಲು ತಮ್ಮ ಆರೋಪಕ್ಕೆ ಸಾಕ್ಷ್ಯಾಧಾರ ನೀಡಲಿ. ಯಾವುದೇ ಹುರುಳಿಲ್ಲದ ಆರೋಪ ಮಾಡುತ್ತಿದ್ದಾರೆಂದು ಟೀಕಿಸಿದರು.

ಬಿಜೆಪಿಯಲ್ಲಿ ಈ ಹಿಂದೆ ಮುಖ್ಯಮಂತ್ರಿ ಆಗಲು 2,500 ಕೋಟಿ ಕೇಳುತ್ತಾರೆಂದು ಯತ್ನಾಳ್ ಹೇಳಿದ್ದರು. ಹಾಗಾದರೆ ಆ ಆರೋಪವೂ ನಿಜವೇ ಎಂದು ಪ್ರಶ್ನಿಸಿದ ಅವರು,

ವಂದೇ ಮಾತರಂ ಗೀತೆಯ ವಿಚಾರವನ್ನು ಬಿಜೆಪಿ ಉದ್ದೇಶಪೂರ್ವಕವಾಗಿ ರಾಜಕೀಯಗೊಳಿಸುತ್ತಿದೆ.ಸ್ವಾತಂತ್ರ್ಯ ಹೋರಾಟಗಾರರ ತೀರ್ಮಾನಕ್ಕಿಂತ ಬಿಜೆಪಿಯವರ ತೀರ್ಮಾನವೇ ದೊಡ್ಡದಾ, ಬಿಜೆಪಿಯವರಿಗೆ ಮಾಡಲು ಬೇರೆ ಕೆಲಸವಿಲ್ಲವೆಂದು ಟೀಕಿಸಿದರು.

# ಸೌಲಭ್ಯಗಳಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ :** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ) ಹಾಸನ ಜಿಲ್ಲೆ ವತಿಯಿಂದ ಜಿಲ್ಲ್ಯಾದ್ಯಂತ ವಾಸವಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್ಖ್ ಹಾಗೂ ಪಾರ್ಸಿ ಜನಾಂಗದವರಿಗೆ 2026-27ನೇ ಸಾಲಿನಲ್ಲಿ ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಶ್ರಮಶಕ್ತಿ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ರೇಷ್ಮೆ ನೂಲು ಬಿಚ್ಚಾಣಿಕೆ ಉದ್ಯಮಕ್ಕೆ ಪ್ರೋತ್ಸಾಹ ಯೋಜನೆ, ಗಂಗಾ ಕಲ್ಯಾಣ ಯೋಜನೆ, ನವೋದಯ ಯೋಜನೆ, ಫಾಸ್ಟ್ ಫುಡ್ ಟ್ರಕ್ /ಟೈಲರ್ ಕಿಚನ್ ಫುಡ್ (ಕಿಯೋಸ್ಟ್)ಯೋಜನೆ, ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಪ್ರೋತ್ಸಾಹ ಯೋಜನೆ, ಸಿಖ್ಖ್ ಲಿಗಾರ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹ ಯೋಜನೆ, ಸಮುದಾಯ ಆಧಾರಿತ ತರಬೇತಿ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ, ವ್ಯಾಪಾರ/ಉದ್ದಿಮೆ ನೇರಸಾಲ ಯೋಜನೆ, ಸಾಂತ್ವನ ಯೋಜನೆಗಳಡಿಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ನೀಡಲು ಸೆ. 17ರವರೆಗೆ ಆನ್‌ಲೈನ್ Website: kmdconline.karnataka.gov.in ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಹಾಸನ ಕಚೇರಿ ಹಾಗೂ ದೂರವಾಣಿ ಸಂಖ್ಯೆ: 08172-246333 ಯನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ಕುಡಿದ ಅಮಲಿನಲ್ಲಿ ಇಬ್ಬರ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಹಾಸನ:** ಕುಡಿದ ಅಮಲಿನಲ್ಲಿ ಹಣಕಾಸಿನ ವಿಚಾರಕ್ಕೆ ಸ್ನೇಹಿತರು ಗಲಾಟೆ ಮಾಡಿಕೊಂಡಿದ್ದು ಇಬ್ಬರು ಗಂಭೀರ ಗಾಯಗೊಂಡಿರುವ ಘಟನೆ ನಗರದ ಎಂ.ಜಿ.ರಸ್ತೆಯ ಅನ್ನಪೂರ್ಣೇಶ್ವರಿ ಬಾರ್‌ನಲ್ಲಿ ನಡೆದಿದೆ.

ನಗರದ ರಚನಾ ಹಾಗು ಅಭಿಷೇಕ್ ಗಾಯಾಳುಗಳು. ಬಟ್ಲರ್ ಕೊಪ್ಪಲಿನ ಪುನೀತ್, ಯಡಿಯೂರಿನ ಪವನ್, ಪ್ರಮೋದ್, ಮನು, ಜಯಂತ, ವಿಕಾಸ್ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಬಾರ್‌ನ ಮತ್ತೊಂದು ಟೇಬಲ್‌ನಲ್ಲಿ ಮದ್ಯಪಾನ ಮಾಡುತ್ತಾ ಕುಳಿತಿದ್ದ ಪುನೀತ್ ಎಂಬಾತ, ರಚನಾನನ್ನು ಕರೆದು ಪ್ರಜ್ವಲ್‌ಗೆ ಕೊಡಬೇಕಿದ್ದ ದುಡ್ಡು ಕೊಟ್ಟಿದೀಯಾ ಎಂದು ಕೇಳಿದ್ದಾನೆ. ಅಷ್ಟಕ್ಕೆ ಇಬ್ಬರ ನಡುವೆ ವಾಗ್ವಾದ ಶುರುವಾಗಿ ವಿಕೋಪಕ್ಕೆ ತಿರುಗಿದೆ.

## ಲಾರಿ ಡಿಕ್ಕಿ : ಬೈಕ್ ಹಿಂಬದಿ ಸವಾರ ಸಾವು

**ಚನ್ನರಾಯಪಟ್ಟಣ:** ಚಲಿಸುತ್ತಿದ್ದ ಬೈಕ್‌ಗೆ ಹಿಂದಿನಿಂದ ವೇಗವಾಗಿ ಬಂದ ಲಾರಿ ಡಿಕ್ಕಿಯಾಗಿ ಹಿಂಬದಿ ಸವಾರ ಮೃತಪಟ್ಟಿರುವ ಘಟನೆ ಅಡಗೂರು ಗೇಟ್ ಸಮೀಪ ಶನಿವಾರ ರಾತ್ರಿ ನಡೆದಿದೆ.

ಪಟ್ಟಣದ ಎಂ.ಎಲ್.ನಂಜೇಶ್‌ಗೌಡ ಮೃತರು. ಕೃಷ್ಣಕುಮಾರ್ ಅವರೊಂದಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ವೇಗವಾಗಿ ಬಂದ ಲಾರಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಬೈಕ್ ಮೇಲಿದ್ದ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದು ನಂಜೇಶ್‌ಗೌಡ ಅವರಿಗೆ ಗಂಭೀರ ಏಟಾಗಿದೆ. ಚಿಕಿತ್ಸೆಗಾಗಿ ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನೈಸ್ ಟೋಲ್‌ಗೆ ಜನರೇ ನುಗ್ಗಬೇಕಿತ್ತು : ಹೆಚ್.ಡಿ.ಕೆ.

• ಪ್ರಜೋದಯ ವರದಿ

**ಮಂಡ್ಯ:** ನೈಸ್ ರಸ್ತೆ ಟೋಲ್ ವಿಷಯಕ್ಕೆ ಸಂಬಂಧಿಸಿ ನಾನು ಜನರನ್ನು ಪ್ರಚೋದನೆ ಮಾಡುತ್ತಿಲ್ಲ. ಜನರೇ ಇಷ್ಟೊತ್ತಿಗೆ ನುಗ್ಗಬೇಕಿತ್ತು. ಅದು ಆಗಬೇಕಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.



ಮೇಲುಕೋಟೆಯಲ್ಲಿ ಭಾನುವಾರ ಚೆಲುವನಾರಾಯಣಸ್ವಾಮಿಯ ದರ್ಶನ ಪಡೆದ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನನಗೆ ಖೇಣಿ ಏನೂ ಹೇಳಬೇಕಿಲ್ಲ. ನಾನು ಹೇಳುತ್ತೀರೋದು ಈ ಸರ್ಕಾರಕ್ಕೆ. ಕೋರ್ಟ್ ಆದೇಶ ಕೊಟ್ಟಿರುವುದು ಸರ್ಕಾರಕ್ಕೆ, ಖೇಣಿಗೆ ಅಲ್ಲವೆಂದು ಸಚಿವ ಅಶೋಕ್ ಖೇಣಿ ಹೇಳಿಕೆಗೆ ತಿರುಗೇಟು ನೀಡಿದರು.

ರಾಜ್ಯ ಹೈಕೋರ್ಟ್ ನೈಸ್ ಯೋಜನೆ ಬಗ್ಗೆ ಕಟುವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತ್ತು. ಆ ಅಂಶಗಳೇ ಇವತ್ತಿನ ಪತ್ರಿಕೆಗಳ ಜಾಹೀರಾತಿನಲ್ಲಿ ಕಾಣಿಸಿಕೊಂಡಿವೆ. ಇದೇನು ಕಪೋಲಕಲ್ಪಿತವಲ್ಲ. ನೈಸ್ ಯೋಜನೆ ರಾಜ್ಯದಲಿಯೇ ಅತಿ ದೊಡ್ಡ ಹಗರಣ ಎಂದರೆ ತಪ್ಪಲ್ಲ. ಮುಖ್ಯಮಂತ್ರಿ, ಸಚಿವರು ಈ ಕಂಪನಿ ಜತೆ ವ್ಯವಹಾರ ಇಟ್ಟುಕೊಂಡಿದ್ದಾರೆ. ಸರ್ಕಾರ ಕಂಪನಿ ಜತೆ ಶಾಮೀಲಾಗಿದೆ. ಹಿಂದಿನ ಸರ್ಕಾರಗಳು ಹಾಗೂ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆಂದು ಆರೋಪಿಸಿದರು.

ಎಲ್ಲರೂ ಯೋಜನಾ ಚೌಕಟ್ಟು ಒಪ್ಪಂದ (ಪ್ರೇಮ್ ವರ್ಕ್ ಅಗ್ರಿಮೆಂಟ್) ಅನ್ನು ಉಲ್ಲಂಘನೆ ಮಾಡಿದ್ದಾರೆ. ಕಂಪನಿ ಮಾಲೀಕನಿಗೆ ರೆಡ್ ಕಾರ್ಪೆಟ್ ಹಾಸಿದ್ದಾರೆ. ರೈತರ ಭೂಮಿಗಳನ್ನು ಲೂಟಿ ಹೊಡೆದಿದ್ದಾರೆ. 20 ವರ್ಷಗಳಾದರೂ ರೈತರಿಗೆ ಹಣ ನೀಡಿಲ್ಲವೆಂದು ದೂರಿದರು.

ಲೋಕೋಪಯೋಗಿ ಸಚಿವರು ಇನ್ನೂ 20 ವರ್ಷ ಅಗ್ರಿಮೆಂಟ್ ಇದೆ ಅಂತಾರೆ. ಯಾವ ಅಗ್ರಿಮೆಂಟ್ ಇದೆ? ಸರ್ಕಾರದವರು ಆ ಕಂಪನಿ ಜತೆ ಸೇರಿಕೊಂಡು ಇನ್ನೂ ಲೂಟಿ ಹೊಡೆಯಲಿ. ರೈತರು ದಿನ ಕೋರ್ಟ್ ಮುಂದೆ ನಿಂತಿರುತ್ತಾರೆ. ಸರ್ಕಾರ ಇರೋದು ಯಾವನೋ ಒಬ್ಬ ವ್ಯಕ್ತಿಗೆ ರಕ್ಷಣೆ ಕೊಡಲು ಅಲ್ಲ. ನಾಡಿನ ಆರೂವರೆ ಕೋಟಿ ಜನರ ರಕ್ಷಣೆಗೆ ಇರೋದು ಎಂದು ಕೋರ್ಟ್ ತೀರ್ಪು ಕೊಟ್ಟಿದೆ. 2006-07ರಲ್ಲಿ ನಾನು ವಿಧಾನಸಭಾ ಕಲಾಪದಲ್ಲಿ ಪ್ರಶ್ನೆ ಮಾಡಿದ್ದೇನೆ. ಸದನ ಒಪ್ಪುವುದಾದರೆ ಈ ಯೋಜನೆಯನ್ನು ರದ್ದು ಮಾಡೋಣವೆಂದು ಕೇಳಿದೆ. ಆಗ ನನಗೆ ಬೆಂಬಲ ಇರಲಿಲ್ಲ. ಇದ್ದದ್ದು 38 ಶಾಸಕರ ಬೆಂಬಲ ಅಷ್ಟೇ. ನಮ್ಮ ಜತೆ ಅಧಿಕಾರ ಹಂಚಿಕೊಂಡಿದ್ದವರು ಸಂಪುಟ ಸಭೆಗೆ ಬಹಿಷ್ಕಾರ ಹಾಕಿದ್ದರು. ನನಗೆ 134 ಶಾಸಕರು ಇದ್ದಿದ್ದರೆ ಇಂತಹವರೆಲ್ಲರೂ ಜೈಲಿನಲ್ಲಿ ಇರುತ್ತಿದ್ದರೆಂದು ಕುಮಾರಸ್ವಾಮಿ ಕಿಡಿಕಾರಿದರು.

# ಕ್ರಿಕೆಟ್ ಮೈದಾನದಲ್ಲೇ ಜೈಸ್ವಾಲ್-ಅಸಿತ ಫೆರ್ನಾಂಡೊ ಕಿರಿಕ್

## ಟೀಂ ಇಂಡಿಯಾ ಓಪನರ್‌ಗೆ ಭಾರೀ ಶಿಕ್ಷೆ ಸಾಧ್ಯತೆ

• ಪ್ರಜೋದಯ ವರದಿ

**ಕೊಲಂಬೊ:** ಶ್ರೀಲಂಕಾ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನ ಟೀಂ ಇಂಡಿಯಾ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಹಾಗೂ ಶ್ರೀಲಂಕಾ ವೇಗಿ ಅಸಿತ ಫೆರ್ನಾಂಡೊ ನಡುವೆ ಮೈದಾನದಲ್ಲೇ ತೀವ್ರ ವಾಗ್ವಾದ ನಡೆದಿದೆ.



ಈ ಘಟನೆ ಇದೀಗ ಜೈಸ್ವಾಲ್ ವಿರುದ್ಧ ಕಠಿಣ ಶಿಸ್ತು ಕ್ರಮದ ಸಾಧ್ಯತೆಯನ್ನು ಹುಟ್ಟುಹಾಕಿದೆ. ಮೊದಲ ಇನಿಂಗ್ಸ್ ನಲ್ಲಿ ಜೈಸ್ವಾಲ್ 45 ರನ್ ಗಳಿಸಿದ್ದಾಗ ಫೆರ್ನಾಂಡೊ ಅವರ ಎಸೆತದಲ್ಲಿ ಔಟಾದರು. ಅರ್ಧಶತಕ ವಂಚಿತರಾದ ಜೈಸ್ವಾಲ್ ಪೆವಿಲಿಯನ್ ನತ್ತ ಹೆಜ್ಜೆ ಹಾಕುತ್ತಿದ್ದರು.

ಆದರೆ, ಫೆರ್ನಾಂಡೊ ತಮ್ಮ ಸಹ ಆಟಗಾರರೊಂದಿಗೆ ವಿಕೆಟ್ ಸಂಭ್ರಮಾಚರಣೆ ಮಾಡುತ್ತಿದ್ದುದನ್ನು ಕಂಡು ಜೈಸ್ವಾಲ್ ಏಕಾಏಕಿ ಗರಂ ಆಗಿ ಹಿಂತಿರುಗಿ ಅವರತ್ತ ಸಾಗಿದರು. ಇಬ್ಬರೂ ಪರಸ್ಪರ ಮಾತಿನ ಚಕಮಕಿ ನಡೆಸಿದ್ದು, ಪರಿಸ್ಥಿತಿ ಕೆಲವೇ ಕ್ಷಣಗಳಲ್ಲಿ ಉದ್ವಿಗ್ನಗೊಂಡಿತು. ಇಬ್ಬರೂ ಒಬ್ಬರನ್ನೊಬ್ಬರು ಎದುರು ನಿಂತು ಆಕ್ರಮಣಕಾರಿಯಾಗಿ ಮುನ್ನುಗ್ಗಿದಾಗ ಶ್ರೀಲಂಕಾ ಆಟಗಾರರು ಹಾಗೂ ಮೈದಾನದ ಅಂಪೈರ್‌ಗಳು ಮಧ್ಯಪ್ರವೇಶಿಸಿ ಅವರನ್ನು ಬೇರ್ಪಡಿಸಿದರು.

ಕ್ರೀಸ್‌ನಲ್ಲಿದ್ದ ಮತ್ತೊಬ್ಬ ಭಾರತೀಯ ಬ್ಯಾಟರ್ ದೇವದತ್ ಪಡಿಕ್ಕಲ್, ಜೈಸ್ವಾಲ್ ಅವರನ್ನು ಡ್ರೆಸ್ಸಿಂಗ್ ರೂಮ್‌ಗೆ ವಾಪಸ್ ತೆರಳುವಂತೆ ಮನವೊಲಿಸಲು ಪ್ರಯತ್ನಿಸಿದರು. ಆದರೂ ಜೈಸ್ವಾಲ್ ಫೆರ್ನಾಂಡೊ ಕಡೆಗೆ ಸಾಗುತ್ತಲೇ ಇದ್ದರು.

ವಾಗ್ವಾದದ ವೇಳೆ ಜೈಸ್ವಾಲ್ ಫೆರ್ನಾಂಡೊ ಅವರ ತಲೆಗೆ ತಲೆ ತಾಗಿಸಿದಂತೆ ಕಂಡು ಬಂದಿರುವುದು. ಇದೀಗ ಪ್ರಮುಖ ವಿಚಾರವಾಗಿದೆ. ಈ ಘಟನೆ ಗಂಭೀರ ಉಲ್ಲಂಘನೆ ಎಂದು ಪರಿಗಣಿಸಲ್ಪಟ್ಟರೆ ಜೈಸ್ವಾಲ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದು.

4 ಉಲ್ಲಂಘನೆ ಎಂದು ಪರಿಗಣಿಸಲ್ಪಟ್ಟರೆ ಐದು ಟೆಸ್ಟ್‌ಗಳು ಅಥವಾ 10 ಏಕದಿನ ಪಂದ್ಯಗಳ ನಿಷೇಧದಿಂದ ಹಿಡಿದು ಜೀವಾವಧಿ ನಿಷೇಧದವರೆಗೂ ಶಿಕ್ಷೆ ವಿಧಿಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ಆಟಗಾರರು, ಪಂದ್ಯ ಅಧಿಕಾರಿಗಳು ಅಥವಾ ಪ್ರೇಕ್ಷಕರ ವಿರುದ್ಧ ಗಂಭೀರ ಹಿಂಸಾಚಾರ, ಬೆದರಿಕೆ ಅಥವಾ ನಿಂದನಾತ್ಮಕ ವರ್ತನೆ 4 ಉಲ್ಲಂಘನೆಗಳ ವ್ಯಾಪ್ತಿಗೆ ಬರುತ್ತದೆ. ಆದರೆ, ಘಟನೆ ಯಾವ ಮಟ್ಟದ ಉಲ್ಲಂಘನೆಗೆ ಸೇರುತ್ತದೆ ಎಂಬುದು ಪಂದ್ಯದ ಅಧಿಕಾರಿಗಳ ವರದಿ ಹಾಗೂ ಸಂಬಂಧಿತ ಶಿಸ್ತು ಪ್ರಕ್ರಿಯೆಯ ಬಳಿಕವೇ ನಿರ್ಧಾರವಾಗಲಿದೆ.

ಮೈದಾನದಲ್ಲಿ ಜೈಸ್ವಾಲ್ ಈ ರೀತಿಯ ವಾಗ್ವಾದದಲ್ಲಿ ಸಿಲುಕಿರುವುದು ಇದೇ ಮೊದಲಲ್ಲ. 2022ರ ದುಲೀಪ್ ಟ್ರೋಫಿ ವೇಳೆ ದಕ್ಷಿಣ ವಲಯದ ಟಿ. ರವಿ ತೇಜಾ ಅವರೊಂದಿಗೆ ಜೈಸ್ವಾಲ್ ವಾಗ್ವಾದ ನಡೆಸಿದ್ದರು. ಅಂಪೈರ್ ಹಲವು ಬಾರಿ ಎಚ್ಚರಿಕೆ ನೀಡಿದರೂ ಪರಿಸ್ಥಿತಿ ಮುಂದುವರಿದಿತ್ತು. ಆಗ ಪಶ್ಚಿಮ ವಲಯದ ನಾಯಕ ಅಜಿಂಕ್ಯ ರಹಾನೆ ಮಧ್ಯಪ್ರವೇಶಿಸಿ ಜೈಸ್ವಾಲ್ ಅವರನ್ನು ಡ್ರೆಸ್ಸಿಂಗ್ ರೂಮ್‌ಗೆ ಕಳುಹಿಸಿದ್ದರು. ಈ ಬಾರಿ ಶ್ರೀಲಂಕಾ ವಿರುದ್ಧದ ಟೆಸ್ಟ್‌ನಲ್ಲಿ ನಡೆದ ಘಟನೆಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದು ಕುತೂಹಲವಾಗಿದೆ.

# ಐಎಎಸ್ ಅಧಿಕಾರಿ ಗ್ಯಾನೇಂದ್ರಕುಮಾರ್ ಮನೆ ಮೇಲೆ ಇಡಿ ದಾಳಿ



• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಾಗೂ ಹಣ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯವು ನಾಪತ್ತೆಯಾಗಿರುವ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಅವರ ನಿವಾಸದ ಮೇಲೆ ಭಾನುವಾರ ದಾಳಿ ನಡೆಸಿದೆ.

ಈ ಹಿಂದೆ ಕೆಪಿಎಸ್‌ಸಿ ಮೇಲೂ ದಾಳಿ ನಡೆಸಿ ತೀವ್ರ ಶೋಧ ನಡೆಸಿದ್ದ ಇಡಿ ಅಧಿಕಾರಿಗಳು ಜಯಮಹಲ್ ರಸ್ತೆಯಲ್ಲಿರುವ ಗ್ಯಾನೇಂದ್ರ ಕುಮಾರ್ ಅವರ ಮನೆಯ ಬಾಗಿಲು ಒಡೆದು ದಾಳಿ ನಡೆಸಿದ್ದಾರೆ.

ಗ್ಯಾನೇಂದ್ರ ಕುಮಾರ್ ಅವರ ನಿರಂತರ ಸಂಪರ್ಕಕ್ಕೆ ಯತ್ನಿಸಿದರೂ ಯಾವ ಪ್ರತಿಕ್ರಿಯೆ ಬಾರದ ಹಿನ್ನಲೆಯಲ್ಲಿ ಅವರ ಮನೆ ಮೇಲೆ ದಾಳಿ ನಡೆಸಿ ತೀವ್ರ ಶೋಧ ನಡೆಸಿದ್ದಾರೆ.

ಜ್ಞಾನೇಂದ್ರ ಕುಮಾರ್ ಅವರು ಕೆಪಿಎಸ್ಸಿಯಲ್ಲಿ ಪರೀಕ್ಷಾ ನಿಯಂತ್ರಕರಾಗಿ ಕೆಲಸ ಮಾಡಿದ್ದರು. ಪಶುವೈದ್ಯಾಧಿಕಾರಿ ನೇಮಕ ಪರೀಕ್ಷೆಯನ್ನು ನಡೆಸಿದ್ದರು. ಪರೀಕ್ಷೆ ಅಕ್ರಮ ಆರೋಪದ ಹಿನ್ನಲೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇಡಿ ಅಧಿಕಾರಿಗಳು ಪ್ರಮುಖ ಆರೋಪಿ ಶಾಂತ ಹೊಸಮನಿ ಅವರ ಮನೆ ಮೇಲೆ ದಾಳಿ ನಡೆಸಿತ್ತು. ಇದೀಗ ಜ್ಞಾನೇಂದ್ರ ಕುಮಾರ್ ಅವರ ಮನೆ ಮೇಲೆ ದಾಳಿ ನಡೆಸಿದ್ದಾರೆ. ಕಳೆದ ಗುರುವಾರ ತಾರತುರಿಯಲ್ಲಿ ಏರ್ ಟಿಕೆಟ್ ಬುಕ್ ಮಾಡಿದ್ದ ಐಎಎಸ್ ಅಧಿಕಾರಿ, ಆ. 20 ರಂದು ದೆಹಲಿಗೆ ತೆರಳಿದ್ದಾರೆ ಎನ್ನಲಾಗಿದೆ.


## ಆಲೂರು ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಆಭಿವೃದ್ಧಿ ಬ್ಯಾಂಕ್ ನಿ.,

ಆಲೂರು-573213, ಹಾಸನ ಜಿಲ್ಲೆ.

ಈ ಮೇಲ್ಕಂಡ ಬ್ಯಾಂಕಿನ 2025-26ನೇ ಸಾಲಿನ

### ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

**ದಿನಾಂಕ: 25-8-2026ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ**

**ಸ್ಥಳ: ಹಾಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕಿನ ಮೇಲ್ಭಾಗದ ಆವರಣದಲ್ಲಿ**

**ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರು**

| | |
|---|---|
| ಶ್ರೀ ಜಿ.ಆರ್.ರಾಮೇಗೌಡರವರು, ಗಂಜಿಗೆರೆ | ಅಧ್ಯಕ್ಷರು |
| ಶ್ರೀಮತಿ ರಾಧಮ್ಮ, ಕಾಂತರಾಜುರವರು, ದೇವರಾಜನಹಳ್ಳಿ | ಉಪಾಧ್ಯಕ್ಷರು |
| ಶ್ರೀ ಬಿ.ಕೆ.ಲಿಂಗರಾಜುರವರು, ಭರತೂರು | ನಿರ್ದೇಶಕರು |
| ಶ್ರೀ ಹೆಚ್.ಸಿ.ಶಾಂತಕೃಷ್ಣರವರು, ಹುಣಸವಳ್ಳಿ | ನಿರ್ದೇಶಕರು |
| ಶ್ರೀ ಎಂ.ಹೆಚ್.ರಂಗೇಗೌಡರು, ಗೋವಿಂದನಹಳ್ಳಿ | ನಿರ್ದೇಶಕರು |
| ಶ್ರೀ ರಂಗಯ್ಯನವರು, ಅಜ್ಜೇನಹಳ್ಳಿ | ನಿರ್ದೇಶಕರು |
| ಶ್ರೀಮತಿ ನಿಂಗಮ್ಮ ರಾಮಭದ್ರೇಗೌಡರವರು, ಶಿಂಗೋಡನಹಳ್ಳಿ | ನಿರ್ದೇಶಕರು |
| ಶ್ರೀಮತಿ ತುಳಸಮ್ಮ ಹಲಗೇಗೌಡರವರು, ಕಿರಗಡಲು | ನಿರ್ದೇಶಕರು |
| ಶ್ರೀ ಎಂ.ಕೆ.ಜಗದೀಶ್‌ರವರು, ಮುರುಡೂರು | ನಿರ್ದೇಶಕರು |
| ಶ್ರೀ ಜಾರ್ಜ್ ಡಿ.ಕಾಸ್ಟಾರವರು, ನವಿಲಹಳ್ಳಿ | ನಿರ್ದೇಶಕರು |
| ಶ್ರೀ ಎಂ.ಎ. ನಿಂಗರಾಜುರವರು, ಮರಸುಕೊಪ್ಪಲು | ನಿರ್ದೇಶಕರು |
| ಶ್ರೀ ಬಿ.ಸಿ.ಸುನೀಲ್‌ಕುಮಾರ್‌ರವರು, ಬಿಜ್ಜನಹಳ್ಳಿ | ನಿರ್ದೇಶಕರು |
| ಶ್ರೀ ಸಿ.ಪಿ.ಧರಣೇಶ್‌ರವರು, ಚಿಕ್ಕಕಣಗಾಲು | ನಿರ್ದೇಶಕರು |
| ಶ್ರೀ ಐ.ಎನ್.ನಿರಂಜನ್‌ರವರು, ಇಮ್ಮಟಿಪುರ | ನಿರ್ದೇಶಕರು |

ಶ್ರೀ ಎನ್.ಶ್ರೀಕಾಂತ್‌ರವರು, ನಿರ್ದೇಶಕರು ಮತ್ತು ಜಿಲ್ಲಾ ವ್ಯವಸ್ಥಾಪಕರು,
ಕಾಸ್ಕಾರ್ಡ್ ಬ್ಯಾಂಕ್ ನಿ, ಶಾಖಾ ಕಚೇರಿ, ಹಾಸನ.

**ಸಿಬ್ಬಂದಿ ವರ್ಗ**

ಶ್ರೀ ಯಲ್ಲಪ್ಪ ಮಾದರ, ಎಂ.ಎ., ಎಂ.ಇಡಿ., ಹೆಚ್.ಡಿ.ಸಿ.ಎಂ. ಪ್ರಭಾರ ವ್ಯವಸ್ಥಾಪಕರು
ಶ್ರೀಮತಿ ಶಕುಂತಲ ಜಿ.ಎಸ್. ಎಂ.ಎ., ಪ್ರಭಾರ ಲೆಕ್ಕಿಗರು
ಶ್ರೀ ಎನ್.ಕುಮಾರ, ಸಹಾಯಕರು
ಶ್ರೀ ರಾಜುರವರು
ಶ್ರೀಮತಿ ತನುಜ ಕೆ.ಸಿ., ಎಂ.ಕಾಂ., ಕಂಪ್ಯೂಟರ್ ಆಪರೇಟರ್
ಶ್ರೀಮತಿ ಸೌಮ್ಯ ಜಿ. ಬಿ.ಎ., ಕಂಪ್ಯೂಟರ್ ಆಪರೇಟರ್


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K